4. ವರದಿಯನ್ನೊಪ್ಪಿಸುವುದು:

ಶ್ರೀ ಎ.ಟಿ.ರಾಮಸ್ವಾಮಿ(ಅಧ್ಯಕ್ಷರು ಹಕ್ಕುಭಾಧ್ಯತಾಸಮಿತಿ): ಸನ್ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ವಿಧಾನ ಸಭೆಯ 2005 ಮತ್ತು 2006ನೇ ಸಾಲಿನ ಹಕ್ಕುಬಾಧ್ಯತೆಗಳ ಸಮಿತಿಯ ಮೊದಲನೇ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಉಪಾಧ್ಯಕ್ಷರೇ, ತಾವು ಈ ವಿಚಾರಕ್ಕೆ ಮಂಜೂರಾತಿ ಮಾಡಲಿಲ್ಲ. ವರಿದಿ ಮಂಡಿಸುವುದಕ್ಕೆ ಅನುಮತಿ ಕೊಡುತ್ತೇನೆಂದು ಹೇಳಲಿಲ್ಲ, ಇದು ನಮಗೆ ಯಾರಿಗೂ ಗೊತ್ತಿಲ್ಲ. ಈ ರೀತಿ ಸಭೆ ನಡೆಸಿದರೆ ಹೇಗೆ? ಅವರು ಕೇಳಿದಾಗ ತಾವು ಇಂತಹ ವರದಿಯನ್ನು ಮಂಡಿಸಲಿಕ್ಕೆ ಸದಸ್ಯರಿಗೆ ಅನುಮತಿ ಕೊಡುತ್ತೇನೆಂದು ಹೇಳಬೇಕೇ ಅಥವಾ ಬೇಡವೇ?

ಶ್ರೀ ಎ.ಟಿ. ರಾಮಸ್ವಾಮಿ: ಅನುಮತಿ ಕೇಳಿಯೇ ವರದಿ ಮಂಡಿಸಿರುವುದು.

ಉಪಾಧ್ಯಕ್ಷರು: ನಾನು ಒಪ್ಪಿಗೆ ಕೊಟ್ಟಿದ್ದೇನೆ.

ವರದಿಯನ್ನು ಮಂಡಿಸಲಾಗಿದೆ.

5. ನಿಯಮ 69ರ ಮೇರೆಗೆ ಚರ್ಚೆ

ವಿಷಯ: ಡಾ,, ರಾಜ್‌ಕುಮಾರ್‌ರವರ ಅಂತ್ಯಸಂಸ್ಕಾರದ ಸಮಯದಲ್ಲಿ ನಡೆದ ಘಟನೆಗಳ ಬಗ್ಗೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಗುರುಮಿಠಕಲ್): ಮಾನ್ಯ ಉಪಾಧ್ಯಕ್ಷರೇ, ಮುಂಜಾನೆ ವಿರೋಧಪಕ್ಷದ ನಾಯಕರು ಮತ್ತು ಜೊತೆಯಲ್ಲಿ ಅನೇಕ ಮಾನ್ಯ ಸದಸ್ಯರು ಸಹಿ ಮಾಡಿ, ಕನ್ನಡದ ಅಭಿಮಾನಿ ನಟರಾದ ಡಾ,, ರಾಜ್‌ಕುಮಾರ್‌ರವರ ನಿಧನ ಹೊಂದಿದ ಏಪ್ರಿಲ್ 12ನೇ ತಾರೀಖು ಮರೆಯಲಾರದಂಥ ದಿವಸ ಇತ್ತು, ಅಂದೇ ನಾವು ಕಂಡಂಥ ಕೆಲವು ಘಟನೆಗಳು ಮತ್ತು ಎರಡನೇ ದಿವಸ ಕೂಡ ನಡೆದಂಥ ಘಟನೆ ಬಗ್ಗೆ ಈ ಸದನದಲ್ಲಿ ನಿಲುವಳಿ ಸೂಚನೆ ಮುಖಾಂತರ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾವು ಪ್ರಸ್ತಾಪ ಮಾಡಿದ್ದೆವು. ಆದರೆ, ತಾವು ಇದನ್ನು ನಿಲುವಳಿ ಸೂಚನೆ ಮುಖಾಂತರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಅದನ್ನು ನಿಯಮ 69ರ ಕೆಳಗೆ ಚರ್ಚೆಗೆ ತೆಗೆದುಕೊಳ್ಳಬೇಕು ಮತ್ತು "ನಿಮ್ಮ ಅನಿಸಿಕೆಗಳನ್ನು ಹೇಳಿದರೆ, ಸರ್ಕಾರ ಅದಕ್ಕೆ ಸ್ಪಂದಿಸುತ್ತದೆ" ಎಂಬ ಮಾತೂ ಕೂಡ ಹೇಳಿದಿರಿ. ಈ ವಿಷಯ ದೀರ್ಘವಾಗಿ ಚರ್ಚೆಯಾದ ಮೇಲೆ ಮುಂದೆ ಯಾವ ಕ್ರಮವನ್ನು ಜರುಸಬೇಕೆಂಬುದೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆಂಬ ಆಶ್ವಾಸನೆಯನ್ನು ಕೂಡ ತಾವು ಕೊಟ್ಟಿದ್ದೀರಿ. ಇವತ್ತು ನಾವು ಈ ವಿಷಯವನ್ನು

ಪ್ರಸ್ತಾಪ ಮಾಡುತ್ತಾ ಇರಲಿಲ್ಲ. ನಾವೇನು ಈ ಹಿಂದೆ ಸದನದ ಹೊರಗಡೆ ಮತ್ತು ಸದನದ ಕೆಲವು ಮೀಟಿಂಗ್‌ಗಳ ಸಂದರ್ಭದಲ್ಲೂಕೂಡ ಡಾ: ರಾಜ್‌ಕುಮಾರ್‌ರವರ ಸಾವಿನಿಂದ ಮತ್ತು ಅವರ ಅಂತ್ಯಸಂಸ್ಕಾರ ನಡೆದಾಗ, ನಡೆದಂಥ ಘಟನೆ ಬಗ್ಗೆ ಮತ್ತು ವಿಶೇಷವಾಗಿ ಆ ಘಟನೆಯಲ್ಲಿ ಎಂಟು ಜನರು ಏನು ತೀರಿಕೊಂಡರು ಮತ್ತು ಸುಮಾರು 223 ಜನ ಗಾಯಾಳುಗಳಾದರು, ಅದರಲ್ಲಿ ಸುಮಾರು 174 ಪೋಲಿಸರೂ ಕೂಡ ಸೇರಿದ್ದಾರೆ. ಅದನ್ನು ನೋಡಿದ ಮೇಲೆ ಮತ್ತು ಆ ಮಾಬ್ ಅನ್ನು ಕಂಡಾಗ, ಸರ್ಕಾರ ಏಕೆ ಮುಂದಾಲೋಚನೆ ಮಾಡಿ ಕಾನೂನಿನ ವ್ಯವಸ್ಥೆಯನ್ನು ಸರಿಯಾಗಿ ಇಡಲಿಲ್ಲ. ಕಾನೂನಿನ ಸುವ್ಯವಸ್ಥೆ ಏಕೆ ಮಾಡಲಿಲ್ಲ ಎನ್ನತಕ್ಕಂಥ ಪ್ರಶ್ನೆ ಇವತ್ತು ನಮ್ಮ ಮುಂದೆ ಬರುತ್ತದೆ. ಸುಮಾರು ಮೂರು ಪೆಟ್ರೋಲ್ ಬಂಕ್‌ಗಳು ನಾಶವಾದವು. 12 ಬಸ್ಸುಗಳು ಹೋಯಿತು. 20 ಕಾರುಗಳು, 6 ಟ್ರಕ್ಕುಗಳು 3 ಆಟೋರಿಕ್ಷಾಗಳು, ಆಮೇಲೆ 52 ದ್ವಿಚಕ್ರ ವಾಹನಗಳು ಇಷ್ಟೊಂದು ಹಾನಿ ಆಗಿ, 8 ಜನ ಪ್ರಾಣ ಕಳೆದುಕೊಂಡರು 320 ಜನ ಗಾಯಾಳುಗಳಾಗಿ ಆಸ್ಪತ್ರೆಯಲ್ಲಿ ಬಿದ್ದರು. ಅಷ್ಟೇ ಅಲ್ಲ, ಮಾನ್ಯ ಮುಖ್ಯಮಂತ್ರಿಗಳಾಗಲೀ ಮಾನ್ಯ ಉಪ ಮುಖ್ಯಮಂತ್ರಿಗಳಾಗಲೇ ಮಂತ್ರಿಗಳಾಗಲೀ ಮತ್ತು ದಿ. ರಾಜಕುಮಾರ್ ಕುಟುಂಬದ ಸದಸ್ಯರು ಕೂಡ ಅಂತ್ಯ ಸಂಸ್ಕಾದಲ್ಲಿ ಯಾವ ರೀತಿಯಲ್ಲಿ ಪಾಲ್ಗೊಳ್ಳಬೇಕಾಗಿತ್ತು, ಆ ರೀತಿಯಲ್ಲಿ ಪಾಲ್ಗೊಳ್ಳತಕ್ಕಂಥ ವಾತಾವರಣ ಕೂಡ ಇರಲಿಲ್ಲ. ಅಂದಾಗ ನಾವೇನು ಅರ್ಥ ಮಾಡಿಕೊಳ್ಳಬೇಕು? ಸರ್ಕಾರ ಇದ್ದು ಮುಂದೆ ಏನಾಗುತ್ತದೆ, ಒಬ್ಬ ಮೇಧಾವಿ ಮಹಾನ್ ನಟ, ಇಡೀ ಕರ್ನಾಟಕ ರಾಜ್ಯದಲ್ಲೇ ಚಿರಪರಿಚಿತ ಇರತಕ್ಕಂಥ ಒಬ್ಬ ವ್ಯಕ್ತಿ ನಮ್ಮಿಂದ ಅಗಲಿ ಹೋದಾಗ, ಎಂತಹ ವಾತಾವರಣ ರಾಜ್ಯದಲ್ಲಿ ಸೃಷ್ಠಿಯಾಗಬಹುದು, ನಗರದಲ್ಲಿ ಸೃಷ್ಟಿಯಾಗಬಹುದು ಅನ್ನತಕ್ಕಂಥಾದ್ದನ್ನು ನಾವು ಅರ್ಥ ಮಾಡಿಕೊಂಡು, ನಡೆದುಕೊಳ್ಳದೇ ಹೋದರೆ ಈ ರೀತಿಯಾಗಿ ಅನಾಹುತಗಳು ಆಗುತ್ತವೆ. ಒಂದು ಕಡೆ ರಾಜ್ಯ ಸರ್ಕಾರದ ಹತ್ತಿರ ಅಸ್ತ್ರಗಳಂತೂ ಅನೇಕ ಇರುತ್ತವೆ. ಐ.ಬಿ.ರಿಪೋರ್ಟ್‌ನ್ನೂ ಅವರು ಬಳಸಿ ಕೊಳ್ಳಬಹುದು ಅವರಲ್ಲಿರತಕ್ಕಂಥ ಸಿ.ಒ.ಡಿ. ಯವರನ್ನು ಬಳಸಿಕೊಳ್ಳಬಹುದು ಅಥವಾ ಇನ್‌ಫಾರ್ಮೆಂಟ್ಸ್‌ನ್ನು ಬಳಸಿಕೊಳ್ಳಬಹುದು. ಲಾ ಆಂಡ್ ಅರ್ಡರ್ ಮೆಯಿನ್‌ಟೇನ್ ಮಾಡತಕ್ಕಂಥ ಪೋಲೀಸ್ ಅಧಿಕಾರಿಗಳನ್ನು ಬಳಸಿಕೊಳ್ಳಬಹುದು. ಇಷ್ಟೊಂದು ಮಾಹಿತಿ ಕೊಡತಕ್ಕ ಜನಇದ್ದು. ಇಷ್ಟೊಂದು ವ್ಯವಸ್ಥೆ ಮಾಡತಕ್ಕಂಥ ಸಿಬ್ಬಂದಿ ಇದ್ದು ಈ ರೀತಿಯಾಗಿ ಅನಾಹುತ ನಡೆಯುತ್ತದೆಂದು ಹೇಳಿದೆ. ಇದು ನಿಜವಾಗಿಯೂ ನಾವೆಲ್ಲರೂ ತಲೆತಗ್ಗಿಸತಕ್ಕಂಥ ಸ್ಥಿತಿಯನ್ನು ಉಂಟು ಮಾಡಿದಂತಾಗಿದೆ. ಏಕೆಂದರೆ,

ಹೊರರಾಜ್ಯದವರು ಇದನ್ನು ನೋಡಿದಾಗ, ಇದನ್ನು ಕೇಳಿದಾಗ ಏನಪ್ಪ ಕಾನೂನು ವ್ಯವಸ್ಥೆಯನ್ನು ನಿರ್ವಹಿಸಲಾಗಲಿಲ್ಲವೇನು ಲಾ ಅಂಡ್ ಆರ್ಡರ್, ಮೆಂಟೇನ್ ಮಾಡಲಾಗಲಿಲ್ಲವೇನು ಎನ್ನುವ ಸಂದೇಶ ಹೊರಗಡೆಗೆ ಹೋಗುತ್ತದೆ. ಮತ್ತು ಅದನ್ನು ನೋಡಿದಾಗ ರಾಜ್ಯದಲ್ಲಿ ನಾಳೆ ಯಾರೇ ಇನ್‌ವೆಸ್ಟರ್ಸ್ ಇರಬಹುದು ಅಥವಾ ಹೊರಗಡೆಯಿಂದ
ಬರುವ ಜನರಿರಬಹುದು ಎನ್‌ಆರ್‌ಐ ಇರಬಹುದು, ಅವರು ಇದನ್ನೆಲ್ಲಾ ನೋಡಿದಾಗ ನಿಜವಾಗಿಯು ಇಲ್ಲಿ ಜನರಿಗೆ ರಕ್ಷಣೆ ಇಲ್ಲ ಎನ್ನುವ ಮಾತು ಬರುತ್ತದೆ. ಏಕೆಂದರೆ ಅಂಗಡಿಗಳನ್ನು ಬಿಟ್ಟಿಲ್ಲ, ಒಳ್ಳೊಳ್ಳೆ ಷೋರೂಂ ಬಿಟ್ಟಿಲ್ಲ ಅನೇಕ ದೊಡ್ಡ ದೊಡ್ಡ ಕಾರ್ಪೊರೇಟ್ ಆಫೀಸ್‌ಗಳಿಗೆ ಕಲ್ಲು ಹೊಡೆದು ಅವನ್ನು ನಾಶ ಮಾಡತಕ್ಕಂಥದ್ದೂ ಕೂಡ ಗೊತ್ತಿದೆ. ಎಲ್ಲಿಯೂ ಶಿಸ್ತು ಎನ್ನತಕ್ಕಂಥದ್ದೆ ಇಲ್ಲ ಡಿಸಿಪ್ಲಿನ್ ಮಾಡತಕ್ಕಂಥ ಪದ್ಧತಿಯನ್ನು ಕೂಡ ಸರ್ಕಾರ ಪೋಲಿಸರ ಮುಖಾಂತರ ಅನುಸರಿಸಿಲ್ಲ. ಮೊದಲನೆ ದಿವಸ ರಾಜ್‌ಕುಮಾರ್‌ರವರ ದರ್ಶನಕ್ಕಾಗಿ ವ್ಯವಸ್ಥೆಯನ್ನು ಮನೆಯಲ್ಲಿ ಮಾಡುತ್ತಾರೋ ಪೂರ್ಣಪ್ರಜ್ಞ ಸ್ಕೂಲ್‌ನಲ್ಲಿ ಮಾಡುತ್ತಾರೋ ಅಥವಾ ಪ್ಯಾಲೇಸ್‌ನಲ್ಲಿ ಮಾಡುತ್ತಾರೋ ಕಂಠೀರವ ಸ್ಟೇಡಿಯಂನಲ್ಲಿ ಮಾಡುತ್ತಾರೋ ಎನ್ನವ ಗೊಂದಲದಲ್ಲಿ ಒಂದು ದಿವಸ ಹೋಯಿತು. ಅಂದರೆ ಯಾವುದೇ ಒಂದು ಸ್ಪಷ್ಟತೆ ಇಲ್ಲದ ಕಾರಣ ಇವತ್ತಿನದಿವಸ ಇಂತಹ ಅನಾಹುತವಾಯಿತು, ಅನಾಹುತವಾದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಹೇಳಿದರು. ಆ ಒಂದು ಅನಾಹುತದಲ್ಲಿ ಪೋಲಿಸರ ಗುಂಡಿಗೆ ತುತ್ತಾದ ಅಮಾಯಕರಿದ್ದಾರೆ ಅವರಿಗೆ ಪರಿಹಾರ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದರು ಆದರೆ ಇಲ್ಲಿಯವರೆಗೆ ಯಾರಿಗೂ ಪರಿಹಾರವನ್ನು ಕೊಟ್ಟಿಲ್ಲ. ನನಗೆ ತಿಳಿದ ಮಟ್ಟಿಗೆ ಕೇವಲ ಧರ್ಮದರ್ಶನದಲ್ಲಿ ಕಳೆದ ಶನಿವಾರದಿವಸ ಒಬ್ಬರಿಗೆ ಮಾತ್ರ ರೂ 50.000 ಚೆಕನ್ನು ಕೊಟ್ಟಿದ್ದಾರೆನ್ನುವ ಮಾಹಿತಿ ನನಗೆ ಬಂದಿದೆ ಇದಕ್ಕಿಂತ ಜಾಸ್ತಿ ಕೊಟ್ಟಿದ್ದರೆ ಅವರು ಉತ್ತರದಲ್ಲಿ ಹೇಳಬಹುದು. ಅಂದರೆ ಉಳಿದಂತಹ 7 ಜನ ಸುಮಾರು 320 ಜನ ಗಾಯಾಳುಗಳು ಯಾರಿದ್ದಾರೆ ಅವರಿಗೂ ಕೂಡ ಸಹಾಯ ಮಾಡುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ಏತಕ್ಕೆ ನಾನು ಈ ಮಾತುಗಳನ್ನು ಹೇಳುತ್ತೇನೆಂದರೆ ನೀವೆ ಘೋಷಣೆ ಮಾಡಿ, ನೀವೇ ಸಹಾಯ ಮಾಡುತ್ತೇವೆಂದು ಹೇಳಿ. ಸುಮಾರು ಇವತ್ತಿಗೆ 50 ದಿವಸಗಳಾದರೂ ಕೂಡ ಸಹಾಯ ಮಾಡುತ್ತಿಲ್ಲವೆಂದರೆ ಇದರ ಹಿನ್ನಲೆ ಏನು? ಮತ್ತೆ ಇಂತಹ ಘಟನೆ ನಡೆದಾಗ ಇವತ್ತು ತಾವು ಆಳುವ ಪಕ್ಷದಲ್ಲಿದ್ದಿರಿ. ಈ ಒಂದು ವಿರೋಧಪಕ್ಷದಲ್ಲಿದ್ದಾಗ ಎಲ್ಲೆಲ್ಲಿ ಗೋಲಿಬಾರ್ ಆದರೆ ಅಲ್ಲಿ ಪ್ರೊಸೆಷನ್ ಮಾಡುತ್ತಿದ್ದಿರಿ ಹಾಸನದಲ್ಲಿ

ಒಂದು ಸಾರಿ ಗೋಲಿಬಾರ್ ಆಯಿತು, ಅಲ್ಲಿ ಸತ್ತಾಗ ಅದರ ಬಗ್ಗೆ ದೊಡ್ಡದಾಗಿ ಸತ್ಯಾಗ್ರಹ ಮಾಡಿದರು ನಂತರ ವಿಠಲನಹಳ್ಳಿಯಲ್ಲಿ ಒಂದು ಸಾರಿ ಗೋಲಿಬಾರ್ ಆದಾಗ ಅಲ್ಲಿಂದ ಬೆಂಗಳೂರಿನವರೆಗೆ ಪಾದಯಾತ್ರೆಗಳಾದವು. ಅದೇ ರೀತಿಯಾಗಿ ನಾಗಮಂಡಲದಲ್ಲಿ ಒಬ್ಬ ಪತ್ರಕರ್ತ ಸತ್ತಾಗ ಅದಕ್ಕೂ ಕೂಡ ಮೆರವಣಿಗೆಗಳು ಆದವು. ಹೀಗೆ ಒಂದಲ್ಲ ಒಂದೊಂದು ಇನ್ಸಿಡೆಂಟ್‌ನಲ್ಲಿ ಒಬ್ಬರೇ ಸತ್ತರೂ ಕೂಡ ಅಷ್ಟೊಂದು ಕಾಳಜಿ ವಹಿಸಿ ಅವರಿಗೆ ಪರಿಹಾರವನ್ನು ಕೊಡಬೇಕೆಂದು ಹಠಹಿಡಿದು ಮಾಡಿದಂತಹ ಪಕ್ಷಗಳು ಇವತ್ತು ಅಧಿಕಾರಕ್ಕೆ ಬಂದ ಮೇಲೆ ಈ ವಿಷಯದಲ್ಲಿ ಏತಕ್ಕೆ ನಿಲಕ್ಷ್ಯ ಮಾಡುತ್ತಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮತ್ತೆ ನಾವೇನಾದರು ಹೇಳುವುದಕ್ಕೆ ಹೋದರೆ ಇದು ರಾಜಕೀಯ ಎನ್ನುತ್ತಾರೆ 50 ದಿವಸದೊಳಗೆ ಅವರಿಗೆ ಪರಿಹಾರ ಕೊಟ್ಟು ಸಮಾಧಾನ ಮಾಡಿದ್ದರೆ ಇವತ್ತು ಈ ವಿಚಾರ ಎತ್ತತಕ್ಕಂಥ ಪ್ರಶ್ನೆಯೆ ಉದ್ಭವಿಸುತ್ತಿರಲಿಲ್ಲ ಅಥವಾ ನಾವು ಪದೇ ಪದೇ ಕೇಳತಕ್ಕಂಥ ಪ್ರಶ್ನೆಯೆ ಬರುತ್ತಿರಲಿಲ್ಲ. ಆದರೆ ನೀವು ಇದನ್ನು ಎಂಟು ದಿವಸದೊಳಗಾಗಿ ಕೊಡಬೇಕೆಂದು ಹೇಳಿ ಪ್ರತಿಪಕ್ಷದ ನಾಯಕರು, ನಾವು ಸೇರಿ ಹೇಳಿದಾಗ ಆ ಗಡುವಾದ ತಕ್ಷಣವೆ ನಾವು ಕೊಡಬೇಕೆನ್ನುವ ಮಾತನ್ನು ಹೇಳಿದ್ದೀರಿ. ಹಾಗಾದರೆ ಪ್ರತಿಪಕ್ಷದವರು ಕೇಳಬಾರದೆ? ಯಾವುದಾದರು ಅನ್ಯಾಯವಿದ್ದಾಗ ಅದನ್ನು ಸರಿಪಡಿಸಿ ಎಂದು ಹೇಳುವ ಅಧಿಕಾರವಿಲ್ಲವೇ? ನಾನು ಕೇಳುತ್ತೇನೆ. ಯಾವುದೇ ಸಲಹೆಯನ್ನು ಕೊಟ್ಟರೆ, ಅಥವಾ ಯಾವುದೇ ಒಂದು ಪರಿಹಾರವನ್ನು ನೀವು ಕೊಡಿ ಎಂದರೆ ಪ್ರತಿಯೊಂದಕ್ಕು ಕೂಡ ಸವಾಲಾಗಿ ಸ್ವೀಕರಿಸಿ ಅದಕ್ಕೆ ವಿರುದ್ಧವಾದದ್ದನ್ನೆ ಮಾಡುವುದನ್ನು ಮಾಡಿದರೆ ದೇಶದ ಈ ರಾಜ್ಯದ ಜನ ನನಗನ್ನಿಸಿದ ಮಟ್ಟಿಗೆ ಎಂದಿಗೂ ಕೂಡ ಸಹಿಸುವುದಿಲ್ಲ. ಏಕೆಂದರೆ ಎಲ್ಲಿ ಅನ್ಯಾಯವಾಗುತ್ತದೆಯೋ ಸರಿಪಡಿಸಿ ಅದನ್ನು ಬಿಟ್ಟು ನೀವು ಅನ್ಯಾಯವಾಗಿದ್ದನ್ನು "ಅನ್ಯಾಯವಾಗಿದೆ ಏನು ಮಾಡುವುದಕ್ಕಾಗುತ್ತದೆ, ನಿಮ್ಮ ಕಾಲದಲ್ಲಿ ಕೊಟ್ಟಿರೇನು ನೀವು ಮಾಡಿದ್ದಿರೇನು" ಎಂದು ಹೇಳುತ್ತೀರಿ. ನಾವು ಹೇಳಿದ್ದೇವೇನು? ಕೊಟ್ಟಲ್ಲಿ ಕೇಳತಕ್ಕಂಥ ಹಕ್ಕು ನಿಮಗೆ ಇತ್ತು ಈ ಸದನದಲ್ಲಿ ಎಷ್ಟೊಸಾರಿ ಪ್ರಸ್ತಾಪವಾಗಿದೆ. ನೀವು ಅದನ್ನೆ ಪ್ರಸ್ತಾಪ ಮಾಡಿಕೊಂಡು ನಾವು ಇವತ್ತು ಕೊಡುವುದಿಲ್ಲವೆಂದು ಹೇಳುವುದು ಅಥವಾ "ನಿಮ್ಮ ಕಾಲದಲ್ಲಿ ಹೀಗಾಗಿದೆ" ಎಂದು ಹೇಳಿ ಇದನ್ನು ಬಿಟ್ಟುಬಿಡುವುದು ಈ ರೀತಿಯಾಗಿ ಆಡಳಿತವನ್ನು ನಡೆಸಿ ಇದೇ ರೀತಿ ಉತ್ತರವನ್ನು ಕೊಟ್ಟುಕೊಂಡು ತೃಪ್ತಿಪಡಬೇಕಾದರೆ ನೀವಾಗಿ ಜನರಿಗೆ ರೊಚ್ಚಿಗೆಬ್ಬಿಸುತ್ತಿದ್ದೀರೆನ್ನುವ ಮಾತನ್ನು ನಾನು ಹೇಳುತ್ತೇನೆ, ನೀವಾಗಿ ಇವತ್ತು ಜನರನ್ನು ಇನ್‌ಸ್ಟಿಗೇಟ್ ಮಾಡುತ್ತಿದ್ದೀರಿ.

ಏಕೆಂದರೆ ಪ್ರತಿಯೊಂದು ಮಾತಿಗೆ ಪ್ರತ್ಯುತ್ತರ ಕೊಡುವುದು ಹೇಳತಕ್ಕಂಥದ್ದು ಚಾಲೆಂಜ್ ಮಾಡತಕ್ಕಂಥದ್ದು ಸರಿ ಅಲ್ಲ. ನೀವು ಒಳ್ಳೆಯ ಕೆಲಸವನ್ನು ಮಾಡಿ ಚಾಲೆಂಜ್ ಮಾಡಿ, ತಾವೇನಾದರೂ ಒಳ್ಳೆಯ ಕೆಲಸವನ್ನು ಮಾಡಿದ್ದರೆ "ಎಸ್. ನಾವು ಒಳ್ಳೆಯ ಕೆಲಸವನ್ನು ಮಾಡಿದ್ದೇವೆ, ನೀವು ಸಹಿಸುತ್ತಿಲ್ಲ" ಎನ್ನುವ ಮಾತನ್ನು ಹೇಳಿದರೆ ನಾವು ಒಪ್ಪಿಕೊಳ್ಳುತ್ತೇವೆ. ಎಲ್ಲಿ ತಪ್ಪಾಗಿದೆ ಇದನ್ನು ಸರಿಪಡಿಸಿ ಎಂದು ಕೇಳಿದರೆ, ತಪ್ಪಾಗಿದ್ದನ್ನು ಸರಿಪಡಿಸಿಕೊಳ್ಳುತ್ತೇವೆ ಸಹಾಯ ಮಾಡುತ್ತೇವೆ" ಎನ್ನುವ ಮಾತನ್ನು ಹೇಳುವುದನ್ನು ಬಿಟ್ಟು ನೀವು ಪ್ರತಿಯೊಂದಕ್ಕೂ ಕೂಡ ಒಂದು ರೀತಿಯಾಗಿ ಅಸೂಯೆ ದೃಷ್ಟಿಯಿಂದ ನೋಡಿದರೆ ನಾನು ಹೇಳುತ್ತೇನೆ, ಇದು ಸರಿಯಲ್ಲ ಇದು ನಿಮಗೆ ಗೌರವತಕ್ಕಂಥದ್ದಲ್ಲ ಜನರು ಈವತ್ತು ಸಮ್ಮನಿದ್ದಾರೆ ಏನು ಪದೇ ಪದೇ ಇವರೇ ಪ್ರಚೋದನೆ ಮಾಡುತ್ತಿದ್ದಾರೆನ್ನುವ ಮಾತನ್ನು ಹೇಳುತ್ತಿದ್ದೀರಿ ಇದು ಸ್ಯತ್ಯಕ್ಕೆ ದೂರವಾದುದು ನಮಗೆ ಕೇಳತಕ್ಕಂಥ ಹಕ್ಕಿದೆ, ಕೇಳುತ್ತೇವೆ. ಹಿಂದೆ ನಿಮ್ಮ ಪಕ್ಷಗಳು ಅಧಿಕಾರದಲಿಲ್ಲದಿದ್ದಾಗ ಹೇಳಿ ಕೊಂಡೇ ಬಂದಿದ್ದೀರಿ ಎಲ್ಲಿ ಸಹಾಯ ಮಾಡಬೇಕೋ ಅಲ್ಲಿ ಸಹಾಯ ಮಾಡಿಕೊಂಡೇ ಬಂದಿದ್ದಾರೆ. ಆದರೆ ಇವತ್ತು ಒಬ್ಬರಲ್ಲ ಇಬ್ಬರಲ್ಲ ಮೂವರಲ್ಲ 8 ಜನ ಈ ಘಟನೆಯಲ್ಲಿ ಸತ್ತಿದ್ದಾರೆ ಅಲ್ಲದೆ ಅನೇಕ ಜನರಿಗೆ ಗಾಯಗಳಾಗಿವೆ. ಇಂತಹ ಪರಿಸ್ಥಿತಿ ಇದ್ದಾಗ ಸರ್ಕಾರವೇತನಕ್ಕೆ ಮೌನವಾಗಿದೆ, ಸರ್ಕಾರ ಏತಕ್ಕೆ ಈ ಬಗ್ಗೆ ಏಚ್ಚರ ವಹಿಸಿ ಸಹಾಯ ಮಾಡುವ ಕೆಲಸವನ್ನು ಮಾಡುತ್ತಿಲ್ಲ ಈ ಪ್ರಶ್ನೆಯನ್ನು ನಾನು ಅವರಿಗೆ ಕೇಳುತ್ತಿದ್ದೇನೆ. ಎರಡನೆಯದು ನಿನ್ನೆ ನಾವು ರಾಜ್‌ಕುಮಾರ್‌ರವರ ಗೌರವಾರ್ಥ ಸದನದಲ್ಲಿ ಸೇರಿ ಒಂದು ಸಂತಾಪಸೂಚನೆಯನ್ನು ಮಾಡುವಾಗ ಅದಕ್ಕೆ ಸೀಮಿತವಾಗಿ ಎಲ್ಲರು ಇರೋಣ ಎನ್ನುವ ದೃಷ್ಟಿಯಿಂದ ಸೀಮಿತವಾಗಿ ಮಾತನಾಡಿದ್ದೇವೆ. ಆದರೆ ಮಾನ್ಯ ಉಪಮುಖ್ಯಮಂತ್ರಿಗಳಿಗೆ ಸ್ವಲ್ಪ ಕೋಪ ಬಂತು. ನನಗೆ ಅದರ ಹಿಂದೆ ಯಾರಿದ್ದಾರೆಂದು ಗೊತ್ತಿದೆ. ನಾನು ಅಲ್ಲಿಗೆ ಹೋಗಿದ್ದೆ. ಹಿಂದಿನಿಂದ ಕಲ್ಲು ಬಂತು ಹಾಗೆ ಹೀಗೆಂದು ಹೇಳಿದರು. ಸ್ವಾಮಿ ಅದನ್ನೆಲ್ಲಾ ತನಿಖೆ ಮಾಡಲು ನಿಮಗೆ ಅಧಿಕಾರವಿದೆ, ಸರ್ಕಾರ ನಿಮ್ಮದಿದೆ, ಪೋಲಿಸ್ ನಿಮ್ಮದಿದೆ, ನಿಮ್ಮ ಮಾತನ್ನು ಅವರು ಕೇಳುತ್ತಾರೆ ಆ ಮಾಹಿತಿ ನಿಮ್ಮಲ್ಲಿರಬಹುದೇ ಹೊರತು ನಮಗೆ ಇಲ್ಲಿ ಪ್ರಶ್ನೆ ಹಾಕಿದರೂ ಆ ಮಾಹಿತಿ ಸಿಗುತ್ತದೆಯೇ? ಯಾರು ತಪ್ಪು ಮಾಡಿದ್ದಾರೆ ಅವರನ್ನು ಗಲ್ಲಿಗೇರಿಸಿ ಯಾರು ತಪ್ಪು ಮಾಡಿದ್ದಾರೋ ಅವರಿಗೆ ಶಿಕ್ಷೆ ಕೊಡಿ ಅದನ್ನು ಬಿಟ್ಟು, ನೀವು ತಪ್ಪು ಮಾಡಿ ನಮ್ಮ ಮೇಲೆ ಸವಾರಿ ಮಾಡಲು ಹೊರಟರೆ ಸಹಿಸಿಕೊಳ್ಳುವುದಕ್ಕಾಗುತ್ತದೆಯೇ? ಈ ವಿಚಾರವನ್ನು ಬೇಕಾದರೆ ನೀವು ಸಿಬಿಐ ತನಿಖೆಗೆ ವಹಿಸಿ ಏಕೆಂದರೆ ನಿಮಗೆ ಬಹಳ ದೊಡ್ಡ

ಸಂಶಯವಿದ್ದರೆ ಸಿಬಿಐ ತನಿಖೆ ಮಾಡಿಸಿ ನಿಜವಾಗಿಯೂ ಇದರಲ್ಲಿ ಯಾರ ಕೈವಾಡವಿದೆ. ಏನು ಗೂಂಡಗಳು ಮಾಡಿದ್ದಾರೋ, ಬೇಕೆಂದೇ ಇದರಲ್ಲಿ ರಾಜಕೀಯ ಪಕ್ಷಗಳು ನಿಮಗೆ, ಕೆಟ್ಟ ಹೆಸರನ್ನು ತರಬೇಕೆನ್ನುವ ದೃಷ್ಟಿಯಿಂದ ಮಾಡುತ್ತಿದ್ದಾರೋ, ಸಹಿಸದೇ ಇರತಕ್ಕಂಥ ಜನರು ಮಾಡಿದ್ದಾರೋ ಎನ್ನುವುದು ಹೊರಗೆ ಬರಲಿ. ಸುಮ್ಮನೆ ಪದೇ ಪದೇ ನೀವಿದ್ದೀರಿ ಅವರಿದ್ದಾರೆ ಎಕ್ಸ್ ಇದ್ದಾರೆ, ವೈ ಇದ್ದಾರೆಂದು ಹೇಳಿಕೊಂಡು ಹೋದರೆ ನಿಜವಾಗಲೂ ಇದು ಜನರಿಗೆ ಕೊಡುವ ಸರಿಯಾದ ಉತ್ತರ ಇದಲ್ಲ ಅದಕ್ಕಾಗಿ ನಾನು ತಮ್ಮ ಮುಖಾಂತರ ಅವರಲ್ಲಿ ಕೇಳಿಕೊಳ್ಳುತ್ತೇನೆ ಒಂದು ತಕ್ಷಣ ಪರಿಹಾರವನ್ನು ಬಿಡುಗಡೆ ಮಾಡಬೇಕು ಎರಡನೆಯದಾಗಿ ಈ ಸಂಶಯವನ್ನು ನಿವಾರಣೆಯಾಗಬೇಕೆಂದು ಈ ಬಗ್ಗೆ ಸಿಬಿಐ ತನಿಖೆಯಾಗಬೇಕು. ನಾವು ಕೇಳಿದ್ದೇವೆ ನೀವು ಹೈಕೋರ್ಟ್ ಜಡ್ಜ್‌ಗಾದರೂ ವಹಿಸಿ ಈ ಬಗ್ಗೆ ತನಿಖೆ ಮಾಡಿಸಿ ಎಂದರೆ ತಾವು ಅದಕ್ಕೆ ಒಪ್ಪಲಿಲ್ಲ. ಏಕೆಂದರೆ ಒಂದೊಂದು ಕೊಲೆಯಾದಾಗ ಒಂದೊಂದು ಘಟನೆಗಳಾದಾಗ ಅನೇಕ ಸಾರಿ ಜ್ಯುಡಿಷಿಯಲ್ ಪ್ರೋಬ್ ಆಗಿದೆ. ಆಗಿದೆ ಆದರೆ ಇದರ ಬಗ್ಗೆ ತಾವೇನೂ ನಿರ್ಣಯವನ್ನು ತೆಗೆದುಕೊಂಡಿಲ್ಲ. ತಾವು ಅಧಿಕಾರಕ್ಕೆ ಬಂದು ಈಗಾಗಲೇ ಸುಮಾರು 100 ದಿವಸ ಮುಗಿದು ಹೋಯಿತು 110 ದಿವಸ ಮುಗಿಯಿತು 115 ದಿವಸ ನಡೆದಿಧೆ ಘಟನೆಯಾಗಿ 50 ದಿವಸಗಳಾದವು ನಿಜವಾಗಿಯೂ ಕಾಳಜಿ ಇದ್ದರೆ ಆ ಬಗ್ಗೆ ತನಿಖೆ ಮಾಡಿ ಅದಕ್ಕಾಗಿ ನಾನು ತಮ್ಮನ್ನು ರಿಮೈಂಡ್ ಮಾಡುತ್ತೇನೆ. ಈ ಗೋಲಿಬಾರ್‌ನಲ್ಲಿ ಯಾರು ಮುಗ್ದ ಜನ ಸತ್ತಿದ್ದಾರೆ ಅವರ ಕುಟುಂಬದವರಿಗೆ ಪರಿಹಾರವನ್ನು ಕೊಡಬೇಕು, ಎರಡನೆಯದು, ಇದನ್ನು ಸಿಬಿಐ ತನಿಖೆಗೆ ಇದನ್ನು ರೆಫರ್ ಮಾಡಬೇಕು. ಏಕೆಂದರೆ ಎದ್ದಾಗ ಬಿದ್ದಾಗ ಪುನ: ಪುನ: ನಾವು ನಾವೇ ಕಚ್ಚಾಡುವುದು ಬೇಡ. ಒಂದು ಕ್ಲಿಯರ್ ಆಗಿ ಯಾರು ಮಾಡಿದ್ದಾರೆಂದು ವಿಷಯ ಹೊರಗೆ ಬರಲಿ ತಪ್ಪಿಸ್ಥರಿಗೆ ಶಿಕ್ಷೆ ಸಿಗಲಿ ಮುಂದೆ ಅದು ಯಾವ ರೀತಿಯಾಗಿ ನಡೆಯುತ್ತದೆ ನೋಡಿಕೊಳ್ಳೋಣ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಇಷ್ಟನ್ನು ಮಾತ್ರ ಕೇಳಿಕೊಳ್ಳುತ್ತೇನೆ ಈ ಎರಡು ಬೇಡಿಕೆಗಳನ್ನು ಅವರು ಒಪ್ಪುತ್ತಾರೆಂದು ನಾನು ಭಾವಿಸಿ ನನ್ನ ಮಾತಗಳನ್ನು ಮುಗಿಸುತ್ತೇನೆ.

ಶ್ರೀ. ಕೆ.ಆರ್. ರಮೇಶ್‌ಕುಮಾರ್(ಶ್ರೀನಿವಾಸಪುರ): ಸನ್ಮಾನ್ಯ ಉಪಾಧ್ಯಕ್ಷರೆ ಈ ಘಟನೆ ನಡೆದಿದ್ದು ಅನಂತರ ನಡೆದದ್ದನ್ನೆಲ್ಲಾ ಮಾನ್ಯ ಖರ್ಗೆಯವರು ಹೇಳಿದರು, ಹಳ್ಳಿಗಳಲ್ಲಿ ಯಾವುದಾದರೂ ಒಂದು ಆಕಸ್ಮಿಕವಾದ ಸಾವಾದರೆ ಬಾವಿಗೂ ಏನೋ ಬಿದ್ದಿದ್ದರೆ ಅದಕ್ಕೂ ಕೂಡ ಒಂದು ಪ್ರೊಸೀಜರ್ ಇದೆ. ಪೋಲಿಸ್ ಸ್ಟೇಷನ್ ನಿಂದ ಒಬ್ಬ ಕಾನ್‌ಸ್ಟೇಬಲ್ ಹೋಗುತ್ತಾರೆ

ಯುಡಿಆರ್‌ಗೆ ಒಂದು ಕೇಸ್ ರಿಜಿಸ್ಟರ್ ಮಾಡುತ್ತಾರೆ. ಆ ಬಾಡಿಯನ್ನು ಅಲ್ಲಿ ಇಡುತ್ತಾರೆ ಸಂಬಂಧಿಕರು ಯಾರಾದರೂ ಇದ್ದರೆ ಕ್ಲೇಂ ಮಾಡುತ್ತಾರೆಯೇ ಎಂದು ನೋಡುತ್ತಾರೆ ಇಲ್ಲದೇ ಹೋದರೆ ಸ್ಟೇಷನ್‌ನಿಂದ ಅಲೋಯೆನ್ಸ್ ಇರುತ್ತದೆ, ಅದರಿಂದ ಅವರೇ ಒಂದಿಷ್ಟು ಖರ್ಚು ಹಾಕಿಕೊಂಡು ದಫನ್ ಮಾಡುತ್ತಾರೆ. ಏಕೆ ನಾನು ಈ ಮಾತನ್ನು ಹೇಳಿದೆ ಎಂದರೆ ಎಲ್ಲಾ ಇಂತಹ ಸನ್ನಿವೇಶಗಳಲ್ಲೂ ಸರ್ಕಾರವೆನ್ನುವುದು ಹೇಗೆ ನಡೆದುಕೊಳ್ಳಬೇಕೆನ್ನುವುದನ್ನು ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದಾರೆ. ಮೊಟ್ಟ ಮೊದಲನೆಯದಾಗಿ ದಿ: ರಾಜ್‌ಕುಮಾರ್‌ರವರ ಸಾವಿನ ವರ್ತಮಾನವನ್ನು ಪ್ರಚಾರ ಮಾಡುವುದನ್ನು ತಡೆಯುವುದರಲ್ಲಿ ನಿಮ್ಮವರು ವಿಫಲರಾದರು. ವರ್ತಮಾನ ಗೊತ್ತಾದ ತಕ್ಷಣ ಸಾಮಾನ್ಯವಾಗಿ ಏನು ಮಾಡುತ್ತಾರೆಂದರೆ ಇಂತಹ ಘಟನೆ ಸಂಬವಿಸಿದಾಗ ಆ ವರ್ತಮಾನವನ್ನು ಕೆಲವು ಘಂಟೆಗಳ ಕಾಲ ತಡೆಹಿಡಿದು ಸಂಬಂಧಪಟ್ಟ ಅಧಿಕಾರಿಗಳೆಲ್ಲಾ ಕುಳಿತು ಆಲೋಚನೆ ಮಾಡಿ ಅವರ ಕುಟುಂಬದವರೊಡನೆ ಚರ್ಚೆ ಮಾಡಿ ಮುಂದಿನ ಕೆಲಸ ಕಾರ್ಯಗಳೆಲ್ಲಾ ಹೇಗೆ ನಡೆಯಬೇಕೆಂದು ಒಂದು ತೀರ್ಮಾನಕ್ಕೆ ಬಂದ ಮೇಲೆ, ಈಗ ತಾನೇ ಸಾವು ಆಯಿತೆಂದು, ಸುದ್ದಿಮಾಧ್ಯಮಗಳ ಮುಖ್ಯಾಂತರ ಪ್ರಕಟಣೆ ಮಾಡುವುದು ಯಾವಾಗ ಅಂತ್ಯಕ್ರಿಯೆ ಮಾಡುತ್ತಾರೆ, ಮತ್ತೊಂದು ಹೇಳುವುದೆಲ್ಲಾ ಆಗುತ್ತದೆ. ಇಲ್ಲಿ ಹೇಗಾಯಿತೋ ಏನೋ. ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್ ನವರು ಏಕೆ ಆಲೋಚನೆ ಮಾಡಲಿಲ್ಲ ಗೊತ್ತಿಲ್ಲ, ಏಕ್ ದಂ ನ್ಯೂಸ್ ಚಾಲನ್‌ನಲ್ಲಿ ಬರುವುದಕ್ಕೆ ಆರಂಭವಾಯಿತು. ನಮ್ಮಲ್ಲಿ ಡಿಪಿಎಆರ್ ಇದೆ, ಪ್ರೋಟೋಕಾಲ್ ಇದೆ. ಒಂದು ದೇಶದಿಂದ ಪ್ರತಿಷ್ಠಿತ ವ್ಯಕ್ತಿ ರಾಷ್ಟ್ರಪತಿಯೋ, ಪ್ರಧಾನಮಂತ್ರಿ ಬಂದರೆ, ಅವರನ್ನು ಇಲ್ಲಿ ಹೇಗೆ ಬರಮಾಡಿಕೊಳ್ಳಬೇಕು ಎಂದು ನಿಯಮಗಳಿವೆ, ಯಾರು ಹೇಗೆ ಯಾವ ಪೊಸಿಷನ್‌ನಲ್ಲಿ ನಿಂತುಕೊಳ್ಳಬೇಕೆನ್ನುವುದಕ್ಕೆ ನಿಯಮಗಳಿವೆ, ಅದೇ ರೀತಿ ಒಬ್ಬ ಪ್ರತಿಷ್ಠಿತ ವ್ಯಕ್ತಿ ಸಾವಿಗೀಡಾದರೆ ಹೇಗೆ ಅವರ ಅಂತ್ಯಕ್ರಿಯೆಯನ್ನು ನಡೆಸಬೇಕೆನ್ನುವುದಕ್ಕೂ ಕೂಡ ವಿಧಿವಿಧಾನಗಳನ್ನೆಲ್ಲಾ ಸ್ಪಷ್ಟವಾಗಿ ಉಲ್ಲೇಖಿ ಮಾಡಿದ್ದಾರೆ. ನಿನ್ನೆ ಉಪ ಮುಖ್ಯಮಂತ್ರಿಗಳು "ಷಡ್ಯಂತರ ಪಿತೂರಿ ನಡೆದಿದೆ" ಎಂದೆಲ್ಲಾ ಹೇಳಿದರು. ತಾವು ಅಧಿಕಾರದ ಸ್ಥಾನದಲ್ಲಿದ್ದು ಕೊಂಡು ಆ ಮಾತನ್ನು ಹೇಳಿದಾಗ, ನಾವು ಗತ್ಯಂತರವಿಲ್ಲದೇ that is the statement of the Government ಎಂದು ಸ್ವೀಕಾರ ಮಾಡುತ್ತೇವೆ. ನಾನು ತಮಗೆ ಇಷ್ಟನ್ನೇ ಕೇಳುತ್ತೇನೆ ಇದು ಷಡ್ಯಂತರ ಕುತಂತ್ರ ಪಿತೂರಿಯಾಗಿದ್ದರೆ, ಆ ವರ್ತಮಾನವೆಲ್ಲಾ ನಿಮ್ಮ ಹತ್ತಿರವಿದ್ದರೆ ಯಾರ ಮುಲಾಜಿಗಾಗಿ ನೀವು ಅದನ್ನು ಪ್ರಕಟಣೆ ಮಾಡಿಲ್ಲ ಏಕೆ ಮುಂದಿನ ಕ್ರಮವನ್ನು ಜರುಗಿಸಿಲ್ಲ? ಇಂತಹ

ಹೀನಕೃತ್ಯಕ್ಕೆ ಕೈ ಹಾಕಿದರು ಯಾರೇ ಇರಲಿ, ನಿಮ್ಮಲ್ಲಿ ವರ್ತಮಾನವಿದ್ದು ಕೊಂಡೂ ಕೂಡ ಮುಂದಿನ ಕ್ರಮವನ್ನು ಜರುಗಿಸಲಿಲ್ಲವೆಂದರೆ, ಯಾರು ನೀಚರು ಆ ಕೆಲಸಕ್ಕೆ ಕೈಹಾಕಿದವರು ಅಥವಾ ಆ ಬಗ್ಗೆ ಎಲ್ಲಾ ವರ್ತಮಾನಗಳಿದ್ದರೆ ಏನೂ ಮಾಡದೆ ಸುಮ್ಮನೆ ಕುಳಿತರಾ? ನೀವೇ ಊಹೆ ಮಾಡಿ. ನಾವು ಟಿವಿನಲ್ಲಿ ನೋಡುತ್ತಿದ್ದೇವೆ ಆ ಗೋಡೆ ಮುರಿದು ಆ ಬಾಡಿಯನ್ನು ಎತ್ತಿಕೊಂಡು ಹೊರಗೆ ಹೋಗುತ್ತಾರೆ, ಅವರ ಮನೆಯವರಿಗೆ ಗೊತ್ತಿಲ್ಲ ಸಂಬಂಧಿಕರಿಗೆ ಗೊತ್ತಿಲ್ಲ, ಸರ್ಕಾರಕ್ಕೆ ಗೊತ್ತಿಲ್ಲ. ಪೋಲಿಸರಿಗೂ ಕೂಡ ಬಾಡಿ ಎಲ್ಲಿ ಹೋಗುತ್ತಿದೆ ಎಂದು ಗೊತ್ತಿಲ್ಲ ಪ್ಯಾಲೇಸ್ ಎಂದು ಒಬ್ಬರು ಕಂಠೀರವ ಸ್ಟೇಡಿಯಂ ಎಂದು ಒಬ್ಬರು, ಕಂಠೀರವ ಸ್ಟುಡಿಯೋ ಎಂದು ಒಬ್ಬರು, ಪೂರ್ಣಪ್ರಜ್ಞ ಸ್ಕೂಲ್ ಎಂದು ಒಬ್ಬರು ಒಂದ ಕ್ಷಣ ಆ ಕುಟುಂಬದವರ ಗತಿ ಏನಾಗಿರಬೇಕು ಎಷ್ಟೇ ಅಭಿಮಾನಿಗಳು ಭಕ್ತರು ಎಲ್ಲರೂ ಇದ್ದರೂ ಕೂಡ, ಆ ಹತ್ತಿರ ಸಂಬಂಧಿಗಳಿಗೆ, ಆ ಪಾರ್ಥಿವ ಶರೀರ ಎಲ್ಲಿಗೆ ಹೋಗುತ್ತಿದೆ ಎಂಬುದು ಅವರ ಪರಿವಿಗೆ ಬರದೇ ಯಾರೋ ಹೊತ್ತುಕೊಂಡು ಹೋಗುತ್ತಾರೆಂದರೆ ಎಂತಹ ಒಂದು ಅನಾಗರಿಕ ವ್ಯವಸ್ಥೆ ಇದರಲ್ಲೂ ಷಡ್ಯಂತರ ಇತ್ತಾ ಪಿತೂರಿ ಇತ್ತಾ, ಯಾರು ಇದನ್ನೆಲ್ಲಾ ಮಾಡಿದರು, ಏಕೆ ಮಾಡಿರಬಹುದು? ಇದೆಲ್ಲಾ ಹೊರಗೆ ಬರಬೇಕೋ ಬೇಡವೋ. ಸಾಮಾನ್ಯವಾಗಿ ಈ ಕಡೆ ಇರುವವರು ಆಪಾದನೆ ಮಾಡಬೇಕು. ನಾವು ಅಜ್ಞಾನದಲ್ಲಿದ್ದೇವೆ. ಯಾರು ಮಾಡಿದರೆಂಬುದು ನಮಗೆ ಗೊತ್ತಿಲ್ಲ ನೀವು ಆಡಳಿತ ಹೊಣೆಯನ್ನು ಹೊತ್ತಿರುವಂತಹವರು, ನಿಮ್ಮ ಹತ್ತಿರ ವರ್ತಮಾನವಿದೆ ಎಂದು ಸ್ಟೇಟ್‌ಮೆಂಟ್ ಮಾಡಿದ್ದೀರಿ. ವರ್ತಮಾನ ನಿಮ್ಮಲ್ಲಿದ್ದ ಬಳಿಕ ಮುಂದಿನ ಕ್ರಮವನ್ನು ಏತಕ್ಕೆ ಜರುಗಿಸಲಿಲ್ಲ? ಏನಾದರೂ ರಾಜಕೀಯವಾಗಿ ಕ್ಯಾಲ್ಕುಲೇಟ್ ಮಾಡಿ ಇನ್ನು ಸ್ವಲ್ಪದಿವಸ ಇಟ್ಟುಕೊಂಡು ನಿಧಾನವಾಗಿ ಅದರಲ್ಲಿ ಯಾರ್‍ಯಾರು ಬೇಕೋ ಅವರನ್ನೆಲ್ಲಾ ಅದರಲ್ಲಿ ಸೇರಿಸಬೇಕೆಂದು ಇಟ್ಟುಕೊಂಡಿದ್ದೀರಾ? ನಮಗೆ ಗೊತ್ತಾಗುತ್ತಿಲ್ಲ, ಏಕೆಂದರೆ ಇದೆಲ್ಲಾ ಸಾಮಾನ್ಯವಾಗಿ ನಡೆಯುತ್ತದೆ. ಕೆಲವರು ಮಾತನಾಡಿದರು. ಬೆಂಗಳೂರು ಪೋಲಿಸ್ ಕಮಿಷನರ್‌ರವರು ಸ್ವಲ್ಪ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ, ಪೋಲಿಸ್ ಇಲಾಖೆಯಲ್ಲಿ ಸಾಕಷ್ಟು ವೈಮನಸ್ಯಗಳಿದ್ದಾವೆ ಕೆಲವರಿಗೆ ಅವರಿರುವುದು ಇಷ್ಟವಿಲ್ಲ ಅದಕ್ಕೆ ಅವರಿಗೆ ಅಪಕೀರ್ತಿ ತರಬೇಕೆಂದು ಈ ರೀತಿ ಮಾಡಿದ್ದಾರೆ, ಇಲಾಖೆಯದ್ದೇ ಕೈವಾಡವಿದೆ ಎಂದು ಕೆಲವರು ಮಾತನಾಡುತ್ತಾರೆ; ನಮಗೆ ಗೊತ್ತಿಲ್ಲ. that is not statement ಇನ್ನು ಕೆಲವರು ಹೊಸದಾಗಿ ಸರ್ಕಾರ ಬಂದಿದೆ. ಈ ಸರ್ಕಾರಕ್ಕೆ ಮಸಿ ಬಳಿಯಬೇಕು. ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಲು ಮಾಡಿದ್ದಾರೆಂದು

ಹೇಳುತ್ತಾರೆ. ಒಂದು ವೇಳೆ ಇಂತಹ ದುಷ್ಕೃತ್ಯವನ್ನು ಒಂದು ಸರ್ಕಾರಕ್ಕೆ ಮಸಿಬಳಿಯ ಬೇಕೆಂದು ಯಾರನ್ನಾದರೂ ಬಳಸಿಕೊಂಡಿದ್ದರೆ, ಆ ವ್ಯಕ್ತಿ ಯಾರೇ ಆಗಿರಲಿ ಯಾವುದೇ ಪಕ್ಷಕ್ಕೆ ಸೇರಿರಲಿ ರಾಜಕಾರಣವೆಂದು ಅದನ್ನು ನಾವು ಕ್ಷಮಿಸಲು ಸಾಧ್ಯವಾಗುತ್ತದೆಯೇ? ಎಷ್ಟೊಂದು ಅಮಾನವೀಯ ಇದೆ; ಯೋಚನೆ ಮಾಡಿ, ನಾವು ಎಲ್ಲಿಗೆ ಹೋಗುತ್ತಿದ್ದೇವೆ? ಸಾವಿನ ವಿಚಾರದಲ್ಲೂ ಕೂಡ ರಾಜಕೀಯ ಮಾಡತಕ್ಕಂಥ ಹಂತಕ್ಕೆ ನಾವು ತಲುಪಿಬಿಟ್ಟಿದ್ದೇವೆ. ಉಪಮುಖ್ಯಮಂತ್ರಿಗಳು ಹೇಳುತ್ತಾರೆ. ನಾನು ಹೋಗಿ ಪರಿಸ್ಥಿತಿ ಹೇಗಿದೆ ಎಂದು ನೋಡಿಕೊಂಡು ಬರುತ್ತೇನೆ ಎಂದು ಮುಖ್ಯಮಂತ್ರಿಗಳಿಗೆ ಹೇಳುತ್ತಾರೆಂದ ಮೇಲೆ ಮುಖ್ಯಮಂತ್ರಿಗಳು ಸ್ವತ: ಅಲ್ಲಿಗೆ ಧಾವಿಸಲಾಗಲಿಲ್ಲವೆಂದರೆ ನಾವು ಯಾರ ವೈಫಲ್ಯವೆಂದು ಹೇಳಬೇಕು ಇದಕ್ಕೆ ಯಾರು ಹೊಣೆ ನೀವೇ ಹೇಳಿ? ನಿಮ್ಮ ಸ್ವತ: ಹೇಳಿಕೆಯನ್ನು ನಾನು ನಿಮ್ಮ ಮುಂದೆ ಇಡುತ್ತಿದ್ದೇನೆ ನಾನು ಬೇರೆ ಏನನ್ನೂ ಆಧರಿಸುತ್ತಿಲ್ಲ ಇದರ ಮೇಲೆ ಗಂಟೆಗಟ್ಟಲೆ ವ್ಯಾಖ್ಯಾನ ಮಾಡುವುದು, ಇನ್ನೊಂದು ಮತ್ತೊಂದು ಮೈಕ್ ಸಿಕ್ಕಿದೆ ಎಂದು ಸಮಯ ಹರಣ ಮಾಡುವುದು ನನಗೆ ಅಗತ್ಯವಿಲ್ಲ. ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್‌ಗೆ ಒಂದು ಅಂದಾಜು ಇರುವುದಿಲ್ಲವೇ? ಯಾರ್‍ಯಾರು ನಗರ ಪ್ರದೇಶದಲ್ಲಿ ಪ್ರತಿಷ್ಠಿತರು, ರಾಷ್ಟ್ರಪತಿಗಳು, ಮಾಜಿ ರಾಷ್ಟ್ರಪತಿಗಳು ಎಕ್ಸ್ ಗೌರ್ನರ್‌ಗಳು, ಚೀಫ್ ಜಸ್ಟೀಸ್‌ಗಳು, ಇಂತಹವರೆಲ್ಲಾ ವಾಸವಾಗಿದ್ದಾರೆ, ಅವರ ಆರೋಗ್ಯ, ವಯಸ್ಸು ಅದಕ್ಕೊಂದು ಸೆಲ್ ಇಲ್ಲವಾ? ಪೋಲಿಸ್ ಇಲಾಖೆಯಲ್ಲಿ ಆ ವ್ಯವಸ್ಥೆ ಇಲ್ಲವಾ? ಅವರ ಹೆಲ್ತ್ ಬಗ್ಗೆ ಡೊಸ್ಸಿಯರ್ ಮೈನ್‌ಟೇನ್ ಮಾಡುವುದಿಲ್ಲವಾ? ಈ ವ್ಯವಸ್ಥೆ ಇಲ್ಲವಾ? ಕೆಲಸಕ್ಕೆ ಬಾರದ ಅವಿವೇಕಿಗಳನ್ನು ಭಟ್ಟಂಗಿಗಳನ್ನು ಸ್ವಾಭಿಮಾನ ಇಲ್ಲದವರನ್ನು ವೃತ್ತಿಪರತೆ ಯಾವುದೂ ಇಲ್ಲದವರಿಗೆ ಪೋಸ್ಟಿಂಗ್ಸ್ ಕೊಟ್ಟು ಸುತ್ತ ಇಟ್ಟುಕೊಂಡರೆ ಆ ಅವಿವೇಕಿಗಳೆಲ್ಲಾ ಸೇರಿ ಈ ರೀತಿಯೇ ಮಾಡುವುದು. ಬ್ಯಾಂಡ್ ಬಾರಿಸುತ್ತಾರೆ. ಖುಷಿ ಮಾಡಿಸಿ, ನಿಮ್ಮನ್ನು ಪ್ರಪಾತಕ್ಕೆ ನೂಕಿಬಿಟ್ಟು ಅವರು ಕೈಕಟ್ಟಿಕೊಂಡು ನಿಂತುಕೊಳ್ಳುತ್ತಾರೆ. ಇದುವರೆಗೂ ಇವರು ಕೊಟ್ಟ ವರ್ತಮಾನಗಳನ್ನು ನಂಬಿದ ಯಾವ ಮುಖ್ಯಮಂತ್ರಿಯೂ ಈ ರಾಜ್ಯದಲ್ಲಿ ಉದ್ಧಾರವಾಗಲಿಲ್ಲ. It is a very sad thing. ಯೋಚನೆ ಮಾಡಿ. ನಂತರ ಕೂಡ ಕಂಟ್ರೋಲಿಗೆ ಬರುವುದಿಲ್ಲ. ತಾವೇ ಹೇಳಿದಿರಿ ಇಷ್ಟು ದೊಡ್ಡ ಗುಂಡು ಹಾಕಿದರು ಅಂತ. ಇಷ್ಟೊಂದು ಕ್ಯಾಮರಾಸ್ ಇವೆ I am sure-- ಇವರೆಲ್ಲಾ ಪಿಕ್ಚರ್ಸ್ ತೆಗೆದೇ ಇರುತ್ತಾರೆ. ಯಾವನು ಬೆಂಕಿ ಹಚ್ಚಿದ, ಯಾವನು ಪೆಟ್ರೋಲ್ ಬ್ಯಾಂಕ್ ಅಟ್ಯಾಕ್ ಮಾಡಿದ. you catch them. Is it difficult? Interrogate them and extract information. ಅವನು ಯಾವನೇ ಆಗಿರಲಿ ಎಕ್ಸ್‌ಪೋಸ್ ಮಾಡಿ.

Are we here to encourage such things? Do you have to remain in politics by patronising such things? ಯಾವನೋ ಅಮಾಯಕ ಸತ್ತ, ಕಡಲೆಕಾಯಿ ಮಾರಿ ಕೊಳ್ಳೋನು. ಅವನ ಹೆಂಡ್ತಿ ಮಕ್ಕಳಿಗೆ ದಿಕ್ಕುಯಾರು? ವಿಚಾರಿಸುವವರಾರು? ಮಾತನಾಡುವವರಾರು? ಅಧ್ಯಕ್ಷರೇ, ಯಾವ ಕಾಲು ಮುರಿದರೂ ಸೊಂಟಕ್ಕೇ ಊನ. ಇತಂಹ ಘಟನೆ ನಡೆದಾಗಲೆಲ್ಲಾ ಬಡವನು ಯಾರಿರುತ್ತಾನೆ ಅವನ ಕುಟುಂಬಕ್ಕೇ ತೊಂದರೆ. ಯಾವನೋ ಶ್ರೀಮಂತ ಅನುಕೂಲ ವಿರುವವನು ಸತ್ತಿದ್ದರೆ ನಾವೂ ಚಿಂತೆ ಮಾಡುತ್ತಿರಲಿಲ್ಲ. ಆಯ್ತು ಬಿಡಪ್ಪ ನಿಮಗೆ ಆಯಸ್ಸು ಅಷ್ಟೇ ಅಂತ ಹೇಳುತ್ತಿದ್ದೆವು. ಆದರೆ ಯಾವಾನಾದರೂ, ಆ ಕುಟುಂಬದ ಪೋಷಣೆ ಮಾಡುತ್ತಿದ್ದವನು ಬಡವನಾಗಿದ್ದು ಆತ ಸತ್ತುಹೋಗಿ, ಕುಟುಂಬ ಬೀದಿಗೆ ಬಿದ್ದಿದ್ದರೆ for a minute, place yourself in that position. How would you feel? As Govenment are you not responsible? Don't you have your share in this sin? What is your reaction? How you have responded to this situation? Can you get over by just making an implication and keeping the whole State and country guess who are the culpuits? ಇಷ್ಟು ಹೊತ್ತಿಗಾಗಲೇ you should have taken sufficient steps. ತಾವು ಮಾಡಿಲ್ಲ. ವಿಫಲರಾಗಿದ್ದೀರಿ. ನೀವು ಸಿಬಿಐ ತನಿಖೆ ಮಾಡುತ್ತಿರೋ ಎಫ್‌ಬಿಐ ತನಿಖೆ ಮಾಡುವಿರೋ ದಯಮಾಡಿ ಈ ಅಮಾನವೀಯ ಕೃತ್ಯಗಳಿಗೆ ಕಾರಣರಾದವರು ಯಾರೇ ಆಗಿರಲಿ ಪತ್ತೆ ಹಚ್ಚಿ ಜನರಿಗೆ ಅವರ ಪರಿಚಯವಾಗಲಿ, ಇವರು ಮಾನವ ಶತ್ರುಗಳು ಅನ್ನುವುದು ಜನರಿಗೆ ಗೊತ್ತಾಗಲಿ. ಕಾನೂನಿನ ಪ್ರಕಾರ ಅವರಿಗೆ ಏನು ಶಿಕ್ಷೆ ಕೊಡಬೇಕೋ ಆದರ ಕ್ರಮ ಜರುಗಿಸಿ. ಇಡೀ ಸದನ ಒಂದಾಗಿ ನಿಮ್ಮ ಜತೆಗೆ ನಿಲ್ಲುತ್ತದೆ. ಇಂತಹ ವಿಚಾರದಲ್ಲಿ ಯಾರಾದರೂ ಕೀಳುಮಟ್ಟದ ರಾಜಕಾರಣ ಮಾಡುತ್ತಾರೇನು? ಮಾಡಬಾರದು, ಮಾಡುವುದಿಲ್ಲ. ಆದರೆ ಎಲ್ಲೋ ಒಂದು ಕಡೆಗೆ ನೀವು ಸರ್ಕಾರವಾಗಿ ಮಾಡಬಹುದಾದ ಪ್ರಯತ್ನವನ್ನು ಒಂದು ಕ್ರಿಯಾಶೀಲ ಸರ್ಕಾರವಾಗಿ ನೀವು ಮಾಡಬೇಕಾಗಿದ್ದ ಕೆಲಸವನ್ನು ನಿರ್ವಹಣೆ ಮಾಡುವುದರಲ್ಲಿ ನೀವು ಸಂಪೂರ್ಣವಾಗಿ ವಿಫಲರಾಗಿದ್ದೀರಿ. You have completely failed in discharging your duties as a responsible Government. Even now, it is not late. Please wake up from your deep slumber and proceed. ಉತ್ತರಕೊಡುವಾಗ ಈ ಸದನಕ್ಕೆ ಹೇಳಿ, ಎಷ್ಟು ದಿವಸದಲ್ಲಿ ಏನು ಕ್ರಮ ತೆಗೆದುಕೊಳುತ್ತೀರಿ ಅಂತ ನಿಮ್ಮ ಪ್ರಾಮಾಣಿಕತೆಯನ್ನು ಯಾರು ಇವತ್ತು ದು:ಖದ ಮಡಿಲಲ್ಲಿ ನರಳುತ್ತಿರುವ

ಕುಟುಂಬಗಳಿವೆ, ಕಡೇ ಪಕ್ಷ ಸತ್ತುಹೋದವರು ಅವರಿಗೆ ಬದುಕಿ ಬರದೇಹೋದರೂ ನಿಮ್ಮ ಹಣ ಅವರಿಗೆ ಸೇರದೇ ಹೋದರೂ ಕೂಡ ಶಾಂತಿಯಾದರೂ ಅವರ ಮನಸ್ಸಿಗೆ ಸಿಗಲಿಯಾಕೆ ಅವರು ಹೀಗಾದರು? ಯಾವ ಪಾಪಿಯಿಂದ ಅವರ ಮನೆಯವರು ಅವರ ಸಂಬಂಧಿಕರು ಅವರ ಚಿಕ್ಕಪ್ಪನೋ ಅಜ್ಜನೋ ಭಾವನೋ ಅತ್ತಿಗೇನೋ ನಾದೀನೀನೋ ಯಾಕೆ ಸತ್ತರು ಅಂತ ಕಾರಣ ಅವರಿಗೆ ಗೊತ್ತಾಗಲಿ. ಅವರೆಲ್ಲಾ ಆಯುಷ್ಯ ತೀರಿ ಸತ್ತವರಲ್ಲ. ಇಷ್ಟಕ್ಕಾದರೂ ನೀವು ಪುಣ್ಯ ಕಟ್ಟಿಕೊಳ್ಳಿ ಅಂತ ಹೇಳಿ ನನಗೆ ತಾವು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತು ಮುಕ್ತಾಯ ಮಾಡುತ್ತೇನೆ.

ಶ್ರೀ ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಅಧ್ಯಕ್ಷರೇ ಡಾ: ರಾಜಕುಮಾರ್‌ರ ನಿಧನದಂದು ಅವತ್ತಿನ ದಿನ ನಡೆದ ಅನಾಹುತದಲ್ಲಿ ಬೆಳಿಗ್ಗೆ 11 ಗಂಟೆಗೆ ನಮಗೆಲ್ಲರಿಗೂ ಅವರು ಹುಷಾರಿಲ್ಲದೆ ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ ಎಂಬ ಸುದ್ದಿ ಮುಟ್ಟಿತು. ಆ ವಿಷಯಗಳೆಲ್ಲಾ ನಮಗೆ ತಿಳಿಯುವ ಹೊತ್ತಿಗೆ ಮಧ್ಯಾಹ್ನ 12–45ಕ್ಕೆ ಆಯಿತು. ಈ ವಿಚಾರಗಳನ್ನು ತತಕ್ಷಣವೇ ಎಲ್ಲೂ ಪ್ರಚಾರ ಮಾಡಬಾರದು ಅಂತ ನಾವು ಪರಿವಾರದವರೆಲ್ಲಾ ತೀರ್ಮಾನದಿಂದ ಇದ್ದೆವು, ಸರ್ಕಾರಕ್ಕೆ ಅಷ್ಟರೊಳಗೆ ಮಾಹಿತಿ ಮುಟ್ಟಿತ್ತು ಎಂಬುದು ನನ್ನ ಭಾವನೆ. ಸುಮಾರು ಒಂದೂ ಕಾಲಿಗೆ ಮಾಧ್ಯಮದ ಮುಖೇನ, ಅದೂ ನಮ್ಮ ಕನ್ನಡ ಚಾನಲ್‌ನಲ್ಲಿ ಬರುವ ಮುಂಚೆ ನ್ಯಾಷನಲ್ ನೆಟ್‌ವರ್ಕ್ ಇರುವ ಎನ್‌ಡಿಟಿವಿ ಇರಬಹುದು, ಅದರಲ್ಲಿ ಮೊದಲು ವಿಷಯ ಫ್ಲಾಶ್ ಆಗಿತ್ತು. ಆಮೇಲೆ ಸ್ಥಳೀಯ ಕನ್ನಡ ಚಾನಲ್ಸ್‌ಗಳಲ್ಲಿ ಲೈವ್ ವರ್ತಮಾನ ಬಂತು. ನಾವು ಅಲ್ಲಿ ತಲುಪಿದಾಗ ಸುಮಾರು ಒಂದು ಮುಕ್ಕಾಲು ಘಂಟೆ ಆಗಿತ್ತು. ಆಗೆಲ್ಲಾ ಜಾಸ್ತಿ ಜನ ಇರಲಿಲ್ಲ. ಅಲ್ಲಿ ಪೋಲಿಸರೂ ಜಾಸ್ತಿ ಸಂಖ್ಯೆಯಲ್ಲಿರಲಿಲ್ಲ. ಸುಮಾರು ಒಂದೂವರೆ ಹೊತ್ತಿಗೆ ನಾವಿದ್ದವರು ಸಮಾರು 250 ಜನ ಮಾತ್ರ. ಜತೆಯಲ್ಲಿ ಒಂದು ಜೀಪ್ ಒಂದು ಪೋಲಿಸ್ ವ್ಯಾನಿತ್ತು. ಒಂದು ಬ್ಯಾರಿಕೇಡನ್ನು ಮನೆ ಹತ್ತಿರ ಹಾಕಿದ್ದರು. ಎಲ್ಲರನ್ನೂ ಬಿಡುವುದಕ್ಕೆ ವ್ಯವಸ್ಥೆ ಮಾಡಿದ್ದರು. ಅಲ್ಲಿಂದ ಸುಮಾರು 2 ಗಂಟೆ ಹೊತ್ತಿಗೆ ಸುಮಾರು 3 ರಿಂದ 4 ಸಾವಿರ ಜನ ಆಗಲೇ ಗೇಟಿನಲ್ಲಿ ನಿಂತಿದ್ದರು. ಒಳಗಡೆ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾಜಿ ಪ್ರಧಾನಮಂತ್ರಿಗಳಲ್ಲಿ ಆ ಟೈಮಿಗೆ ಬರುವ ಹೊತ್ತಾಯಿತು. ಆ ಹೊತ್ತಿಗೆ ನೇತ್ರದಾನ ಪಡೆಯಲು ಅವರ ಶವವನ್ನು ಪಕ್ಕದ ಕೋಣೆಗೆ ಶಿಫ್ಟ್ ಮಾಡಲಾಯಿತು. ಅಷ್ಟು ಹೊತ್ತಿಗೆ 5 ರಿಂದ 10 ಸಾವಿರ ಜನರ ಮೇಲೆ ಅಲ್ಲಿ ಬಂದು ಸೇರಿದ್ದರು ಆ ಪ್ರಮಾಣಕ್ಕೆ ಪೋಲಿಸರು ಅಲ್ಲಿರಲಿಲ್ಲ. ಆ ವೇಳೆಗೆ ಎಲ್ಲೂ ಗಲಭೆ ಇರಲಿಲ್ಲ. ಒಳಗಡೆ ಶವವನ್ನು ನೋಡಬೇಕು ಅನ್ನುವುದಿತ್ತೇ ಹೊರತು

ಸನ್ಮಾನ್ಯ ಮುಖ್ಯಮಂತ್ರಿಗಳು ಬಂದಾಗಲೂ ಶಾಂತ ವಾತಾವರಣ ಇತ್ತು ಎಂಬುದು ನನ್ನ ಭಾವನೆ. ನಾವೆಲ್ಲರೂ ಅಲ್ಲೀ ಇದ್ದೆವು. ಅದಾದ ಮೇಲೆ ಎಡಬಲ ಇರುವ ಮನೆಗಳ ಮೇಲೆ ಜನ ಸೇರಲು ಪ್ರಾರಂಭವಾಯಿತು. ಆಗ ಸರ್ಕಾರದ ವತಿಯಿಂದ ಡಿಕ್ಲೇರ್ ಮಾಡಿದ್ದು It is going to be a State funeral ಎಂದು ಆ ಹೊತ್ತಿಗೆ ಶಿವರಾಜ್‌ಕುಮಾರ್ ಹಂಪಿಯಲ್ಲಿದ್ದರು. ಅವರು ಬರುವವರೆಗೂ ಕಾಯಬೇಕು ಎಂದು ಇತ್ತು. ಶವ ಸಂಸ್ಕಾರವನ್ನು ಮುಂಚಿತವಾಗಿಯೇ ಮಾಡಬೇಕಾ ಸ್ವಲ್ಪ ಡಿಲೇ ಮಾಡಿ ಮಾಡಬೇಕಾ ಅನ್ನುವುದನ್ನು ಸರ್ಕಾರದ ಜತೆಯಲ್ಲಿ ಮಾತುಕತೆ ನಡೆಸಿ ತೀರ್ಮಾನ ಮಾಡಿದರು. ಅಷ್ಟರಲ್ಲಿ ತಾವೂ ಕೂಡ ಕಮ್ಯುನಿಕೇಟ್ ಮಾಡಿದ್ದೀರಿ ಅಂತ ತಿಳಿಯಿತು, ಇಷ್ಟು ನಡೆಯುತ್ತಿರುವಾಗ 10 ಇದ್ದುದು 20 ಆಯಿತು, ಅಲ್ಲಲ್ಲೇ ಕಾಂಪೌಂಡ್ ಹತ್ತುವವರು ಹತ್ತಿರದು; ಮರ ಹತ್ತೋರು ಹತ್ತಿದರು, ಪಕ್ಕದಲ್ಲಿದ್ದ ಒಂದು ರಕ್ಷಿತ ಗೋಡೆಯನ್ನು ಮುರಿಯುವ ಪ್ರಸಂಗವಾಯಿತು. ಜನರಿದ್ದುದ್ದು ಒಂದು ಕಡೇ ದರ್ಶನ ಮಾಡಬೇಕು ಎಂಬ ವಿಚಾರ ಅಷ್ಟೇ. ಒಳಗಡೆ ಇದ್ದುದು ಅಂಬುಲೆನ್ಸ್ ವಿಹಿಕಲ್ ಒಂದು ಬಿಟ್ಟರೆ, ಅದನ್ನು ಎಲ್ಲಿಗೆ ಹೇಗೆ ತಗೊಂಡುಹೋಗಬೇಕು ಎಂಬುದು ನಮಗೆ ತಿಳಿಯಲಿಲ್ಲ. ಪೂರ್ಣಪ್ರಜ್ಞ ಫೀಲ್ಡ್‌ನಲ್ಲಿ ಮಾಡಬೇಕು ಅಂತ ಆಯಿತು, ಇಲ್ಲಿ ಅಲ್ಲಿ ಜನ ಜಾಸ್ತಿ ಆಗುತ್ತಾರೆ ಎಂದು ಪ್ಯಾಲೆಸಿಗೆ ತಗೊಂಡುಹೋಗಬೇಕು ಎಂದು ತೀರ್ಮಾನ ಆಯಿತು. ಆಮೇಲೆ ಮಾನ್ಯ ಮುಖ್ಯಮಂತ್ರಿಗಳು, ಕಂಠೀರವ ಸ್ಟೇಡಿಯಂಗೆ ಬಾಡಿ ತೆಗೆದುಕೊಂಡುಹೋದರೆ ಎಲ್ಲರಿಗೂ ಅವಕಾಶವಾಗುತ್ತದೆ ಎಂದು ಹೇಳಿದ್ದರಿಂದ ಅಲ್ಲಿಗೆ ಒಯ್ಯಲಾಯಿತು, ಆದರೆ ಇಲ್ಲಿ ಸ್ಟೇಟ್ ಫ್ಯೂನರಲ್ ಅಂತ ನಾವು ಡಿಕ್ಲೇರ್ ಮಾಡಿದ್ದೆವು. ಆಂಬುಲೆನ್ಸ್

7.30 PM

ಬಿಟ್ಟರೆ ಬೇರೆ ಯಾವ ಪ್ರೊಟೆಕ್ಷನ್ನೂ ಯಾರಿಗೂ ಅಲ್ಲಿ ಸಿಗಲಿಲ್ಲ. ಪ್ರಾಬ್ಲಮ್ ಏನಾಯಿತು ಎಂದರೆ I am not putting any allegations againest anybody in any form ಯಾವ ನಿರ್ಧಾರವನ್ನು ರಾಜ್ಯ ಸರ್ಕಾರ ಅಲ್ಲಿ ಮಾಡಿತ್ತು ಆ ನಿರ್ಧಾರದ ಜೊತೆಗೆ ವ್ಯವಸ್ಥೆಗಳನ್ನೂ ಕೂಡ ಆ ಸದಂರ್ಭಕ್ಕೆ ಮಾಡಿ ಬಿಟ್ಟಿದ್ದರೆ ಚೆನ್ನಾಗಿತ್ತು. ಅಲ್ಲಿ ಪ್ರೊಸೆಷನ್ ಅಂತೂ ಆಯಿತು; ದೇಹವನ್ನು ಕಂಠೀರವ ಸ್ಟೇಡಿಯಂಗೆ ತೆಗೆದುಕೊಂಡು ಹೋಗಿ ಇಡಬೇಕೆಂದು ನಿರ್ಧಾರ ಆಯಿತು. ಆದರೆ ಹೋಗಬೇಕು ಎಂದಾಗ ಆಂಬುಲೆನ್ಸ್‌ನಲ್ಲಿ ನಾವೇನು ದೇಹವನ್ನು ತೆಗೆದುಕೊಂಡು ಹೋಗುವ ಪರಿಸ್ಥಿತಿ ಉದ್ಭವ ಆಯಿತು. ಯಾರಿಗೂ

ಕೂಡ ಮುಖದ ದರ್ಶನ ಮಾಡಬೇಕು ಅಥವಾ ಶವದ ಕಡೆಯ ದರ್ಶನ ಮಾಡಬೇಕು ಎನ್ನುವುದಕ್ಕೆ ಅವಕಾಶವೇ ಸಿಗಲಿಲ್ಲ. ಅವಕಾಶ ಸಿಕ್ಕಲಿಲ್ಲ ಎಂದಾಕ್ಷಣ ಏನಾಯಿತು? ಕಡೆಗೆ ಎಲ್ಲೂ ಕೂಡ ರಸ್ತೆಯಲ್ಲಿ ಮುಖ ದರ್ಶನ ಆಗಲಿಲ್ಲ. ಕಂಠೀರವ ಸ್ಟೇಡಿಯಂನಲ್ಲಿ ಏನಿಲ್ಲವೆಂದರೂ ಒಂದೂವರೆ ಎರಡು ಲಕ್ಷ ಜನ ಸೇರಲು ಶುರು ಮಾಡಿದರು. ರಾತ್ರಿಯೆಲ್ಲಾ ಜನ ಸೇರಲು ಶುರು ಮಾಡಿದರು. ಅದನ್ನು ಮಾಧ್ಯಮದ ಮೂಲಕ ಪ್ರಚಾರ ಮಾಡಲಾಯಿತು. ಕೆಲವರು ಎಲ್ಲರೂ ಕೂಡ ಹೋಗುವುದು ಬೇಡ ಎಂದರು. ಒಂದು ಒಂದೂವರೆ ಲಕ್ಷ ಜನ ಸೇರಿದ್ದರು. ಒಂದೇ ಒಂದು ಫೆನ್ಸಿಂಗ್ ಅಲ್ಲಿ ಇತ್ತು. ಕಂಠೀರವ ಸ್ಟೇಡಿಯಂನಲ್ಲಿರತಕ್ಕ ಬಾರ್ಬ್‌ಡ್ ಫೆನ್ಸಿಂಗ್ ಏನು ಇತ್ತು, ತಂತಿ ಫೆನ್ಸಿಂಗ್ ಏನು ಇತ್ತು, ಅದು ಬಿಟ್ಟು ಒಂದೇ ಒಂದು ಲೈನ್ ನಲ್ಲಿ ಪೋಲಿಸ್‌ನವರು ಇದ್ದರು. ಅಕ್ಚುಯಲಿ ನಾನು ಆ ಸಂದರ್ಭಕ್ಕೆ ಅವರು ಮಾಡಿರತಕ್ಕಂಥದ್ದನ್ನು ಸಂಪೂರ್ಣವಾಗಿ ಶ್ಲಾಘನೆ ಮಾಡುತ್ತೇನೆ. ಏಕೆಂದರೆ ಅವರು ಎಷ್ಟೆಷ್ಟು ಸಮಾಧಾನದಿಂದ ಮಾಡುವುದಕ್ಕೆ ಸಾಧ್ಯವಾಯಿತೋ, ಅಷ್ಟು ಸಮಾಧಾನದಿಂದ ಕೆಲಸ ಮಾಡಿದ್ದಾರೆ. ಅಲ್ಲಿ ಎಲ್ಲಿ ಗಲಾಟೆಗಳು ಒಂದೊಂದಾಗಿ ಶುರು ಮಾಡುವುದಕ್ಕೆ ಪ್ರಯತ್ನ ಮಾಡಿದರೋ ಅದು ಬೇರೆ. ಆದರೆ ಅನಿವಾರ್ಯವಾದ ಪರಿಸ್ಥಿತಿಯಲ್ಲಿ ಲಾಠಿ ಛಾರ್ಜ್ ಮಾಡತಕ್ಕಂಥದ್ದು ಆಯಿತು. ಸಮಾಧಾನ ಮಾಡುವ ಪರಿಸ್ಥಿತಿ ಬಂತು. ಆದರೆ ಓವರ್ ಆಲ್ ನಮ್ಮ ರಾಜ್ಯ ಸರ್ಕಾರ ಸ್ಟೇಟ್ ಫ್ಯೂನರಲ್ ಎಂದು ವ್ಯವಸ್ಥೆ ಮಾಡಿ ಆ ವ್ಯವಸ್ಥೆಗೆ ತಕ್ಕಂತೆ ನೀಟಾಗಿ ಒಂದು ಬಾಕ್ಸ್‌ನ್ನೂ ಮಾಡಿ, ಅಲ್ಲಿಂದಲೇ ಪ್ಯಾಲೇಸ್ ಗ್ರೌಡ್ಸ್‌ಗೆ ತೆಗೆದು ಕೊಂಡು ಹೋಗಿದ್ದರೆ ಚೆನ್ನಾಗಿತ್ತು. ಪ್ಯಾಲೇಸ್ ಗ್ರೌಂಡ್ಸ್‌ನಲ್ಲಿ ಏನೂ ವ್ಯವಸ್ಥೆ ಇಲ್ಲದೆ ವಾಪಸ್ ಬರಬೇಕಾಯಿತು. ಇಲ್ಲಿ ಪೂರ್ಣಪ್ರಜ್ಞದಲ್ಲಿ ವ್ಯವಸ್ಥೆ ಇಲ್ಲ ಎಂದು ಹೇಳಿ ಇಲ್ಲಿ ವಾಪಸ್ ಬರಬೇಕಾಯಿತು. ಇದಾದ ಮೇಲೆ ಮತ್ತೆ ಕಂಠೀರವ ಸ್ಟೇಡಿಯಂ ಎಂದು ಹೇಳಿ ತಾವು ಮಾನ್ಯ ಮುಖ್ಯಮಂತ್ರಿಗಳು ಹೋಗಿ ನೋಡಿ ಜಾಗವನ್ನು ಸೂಚನೆ ಮಾಡಿ ಬಂದಿರಿ. ಜಾಗವನ್ನು ಸೂಚನೆ ಮಾಡಿದ ಮೇಲೆ ಅಲ್ಲಿಯೇ ಇಡಬೇಕು ಎಂದು ಹೇಳಿ ಎಲ್ಲವನ್ನೂ ವ್ಯವಸ್ಥೆ ಮಾಡಿದಿರಿ. ಆದರೆ ವ್ಯವಸ್ಥಿತವಾಗಿ ಅಲ್ಲಿ ಪೋಲೀಸ್‌ನವರು ಇಲ್ಲದೇ ಇದ್ದಕಾರಣಕ್ಕೆ ತೊಂದರೆ ಆಯಿತು. ತಮಿಳುನಾಡು ಎಲೆಕ್ಷನ್ಸ್ ಎಂದು ಹೇಳಿ ಪೋಲೀಸ್‌ನವರನ್ನು ಆ ಕಡೆ ಡೆಪ್ಯೂಟಿ ಮಾಡಿದ್ದೀರಿ. ಮತ್ತೆ "ಮಾನ್ಯ ಅಡ್ವಾನಿಯವರು ಬಿಜಾಪುರಕ್ಕೆ ಬರುತ್ತಿದ್ದಾರೆ. ಅಲ್ಲಿಗೆ ಕೆಲವು ಪೋಲೀಸ್‌ನವರನ್ನು ಡೆಪ್ಯೂಟಿ ಮಾಡಿದ್ದೇವೆ" ಎನ್ನತಕ್ಕ ಮಾತೂ ಕೂಡ ಕೇಳಿ ಬಂತು. ಈ ತರಹ ಎಲ್ಲಾ ವಾದಗಳೂ ಕೂಡ ಬಂತು. ಅವತ್ತು ಎಲ್ಲಿಗೆ ಯಾರು

ನಿರ್ದಿಷ್ಟವಾಗಿ ಹೋಗುತ್ತಾರೆ ಹೇಗೆ ಮಾಡುತ್ತಾರೆ. ಎನ್ನುವ ಬಗ್ಗೆ ಯಾರಿಗೂ ಕೂಡ ಗೊತ್ತಾಗಲಿಲ್ಲ ಕೊನೆಗೆ ಆಂಬುಲೆನ್ಸ್‌ನಲ್ಲಿ ಯಾರ್ಯಾರೋ ಕೂಡ ಹೋದರೇ ಹೊರತು ಅವರ ಪರಿವಾರದವರು ಅಥವಾ ಅವರ ಸಂಸಾರದವರು ಒಬ್ಬರೂ ಕೂಡ ಆಂಬುಲೆನ್ಸ್‌ನಲ್ಲಿ ಪ್ರಾರಂಭದಲ್ಲಿ ಇರಲಿಲ್ಲ. ಮನೆಯಿಂದ ದೇಹ ಹೊರಟ ಮೇಲೆ ಮಧ್ಯದಲ್ಲಿ ಯಾರೋ ಒಂದಿಷ್ಟು ಜನ ಸೇರಿಕೊಂಡು ವಿಧಾನಸೌಧದ ಮುಂದೆ ಇಲ್ಲೇ ಇಳಿಸಬೇಕು ಎಂದು ಹೇಳಿ ಗಲಾಟೆ ಮಾಡತಕ್ಕ ಪ್ರಸಂಗ ಕೂಡ ಉದ್ಭವ ಆಯಿತು. ಅಂದರೆ ಇದಕ್ಕೆ ಬೇಸಿಕ್ ಆಗಿ ಸ್ಟೇಟ್ ಫ್ಯೂನರಲ್ ಎಂದು ನಿರ್ಧಾರ ಮಾಡಿದ ರಾಜ್ಯ ಸರ್ಕಾರ, ಆ ನಿರ್ಧಾರವನ್ನು ಒತ್ತಿ ಹಿಡಿದು ಅದಕ್ಕೆ ಸೂಕ್ತವಾದ ವ್ಯವಸ್ಥೆ ಮಾಡದೇ ಇರುವ ಕಾರಣಕ್ಕಾಗಿ ಒಂದೊಂದು ಬೆಳವಣಿಗೆಗಳು ಆಗುತ್ತಾ ಹೋಯಿತು. ಇದಾದ ಮೇಲೂ ಕೂಡ ಮಾಧ್ಯಮದ ಮುಖಾಂತರ ಎಲ್ಲಾ ಟಿವಿಯಲ್ಲಿ ಪ್ರಸ್ತಾರ ಮಾಡಿದ್ದಾರೆ. ಎಲ್ಲಾ ಕೆಲಸಗಳನ್ನೂ ಕೂಡ ಅಂದರೆ ಒಂದೊಂದು ಇಂಚಿನ ಕೆಲಸ ಕಾರ್ಯಗಳನ್ನು ಮಾಡಿದ್ದು ಅವರ ಅಭಿಮಾನಿಗಳೇ ಹೊರತು ಬೇರೆ ಯಾರೂ ಕೂಡ ಅಲ್ಲಿ ಗಲಾಟೆ ಮಾಡುವುದಕ್ಕೆ ಅವಕಾಶ ಆಗಲಿಲ್ಲ. ಇದಾದ ಮೇಲೆ ಮೂರನೆಯ ದಿವಸ ಬೆಳಿಗ್ಗೆ ತೀರ್ಮಾನ ತೆಗೆದುಕೊಂಡು ಸಾಯಂಕಾಲ 4.30ಕ್ಕೆ ಮಣ್ಣು ಅಲ್ಲಿ ಮಾಡಬೇಕು ಎಂದು ಅರ್ಜೆಂಟಾಗಿ ರಾಜ್ಯ ಸರ್ಕಾರದ ಡೈರೆಕ್ಷನ್ಸ್ ಮೇಲೆ, ಪ್ರೊಸೆಷನ್‌ಗೆ ಟೈಮ್ ಜಾಸ್ತಿ ಆಗುತ್ತದೆ ಎನ್ನುವ ದೃಷ್ಟಿಯಿಂದ, ಮಧ್ಯಾಹ್ನ 12.30, 12.45ಕ್ಕೆ ಅಲ್ಲಿಂದ ವಾಹನವನ್ನು ಹೊರಡಿಸಿದರು. ಹೊರಡಿಸಿ ಆದ ಮೇಲೆ ಮಧ್ಯದಲ್ಲಿ ಮತ್ತೆ ಗಲಾಟೆ ಆಯಿತು. ಮೆಜೆಸ್ಟಿಕ್‌ಗೆ ಬಂದ ತಕ್ಷಣ ಗಾಂಧಿನಗರದ ಮೇಲೆ ತೆಗೆದುಕೊಂಡು ಹೋಗಬೇಕೆಂದು ತೀರ್ಮಾನ ಆಯಿತು. ಮತ್ತೆ ಅಲ್ಲಿ ಪರಿಸ್ಥಿತಿಯನ್ನು ಪೋಲೀಸ್‌ನವರೇ ನಿಭಾಯಿಸಿದರು. ಅಲ್ಲೂ ಕೂಡ ಎಷ್ಟು ಪ್ರಮಾಣದಲ್ಲಿ ಜನ ಸೇರಿತೋ, ಅದಕ್ಕೆ ಸೂಕ್ತವಾಗಿ ಪೋಲೀಸ್‌ನವರು ಇರಲಿಲ್ಲ. ಕಂಠೀರವ ಸ್ಟುಡಿಯೋಗೆ ಬರುವ ಹೊತ್ತಿಗೆ ಬರತಕ್ಕ ದಾರಿಯಲ್ಲಿ ಗ್ಲಾಸ್‌ಗಳು ಎಲ್ಲೆಲ್ಲಿ ಇದ್ದಾವೋ ಅವು ಯಾವ ಗ್ಲಾಸ್ ಕೂಡ ಹಿಂತಿರುಗುವಾಗ ಇರಲಿಲ್ಲ. ಏಕೆ ಒಡೆದರು ಏನನ್ನೂ ಒಡೆದರು? ಯಾರು ಒಡೆದರು? ಇದು ಯಾವುದೂ ಗೊತ್ತಾಗಲಿಲ್ಲ. ತಾವು ಹೇಗಿದ್ದರೂ ಕೂಡ ಮಾಹಿತಿ ಇದೆ ಎನ್ನತಕ್ಕ ಮಾತನಾಡಿದ್ದೀರಿ. ಮತ್ತು ಮಾಧ್ಯಮದವರು ಎಲೆಕ್ಟ್ರಾನಿಕ್ ಮೀಡಿಯಾ They have recarded the entire episode. ನಾವು ಅಲ್ಲಿಗೆ ತಲುಪಿದಾಗ ಸುಮಾರು ಒಂದೂವರೆ ಗಂಟೆ ಆಗಿತ್ತು. ನಾವೆಲ್ಲರೂ ಕೂಡ ಅಲ್ಲಿ ಇದ್ದೆವು. ಮಾನ್ಯ ಜಾಫರ್ ಷರೀಫ್ ಅವರೂ ಕೂಡ ಅಲ್ಲಿ ಇದ್ದರು. ಮತ್ತೆ ಕೆಲವು ವಿಧಾನಸಭಾ ಸದಸ್ಯರುಗಳು ಶ್ರೀ ನೆ.ಲ. ನರೇಂದ್ರ ಬಾಬು ಅವರು , ಇದ್ದರು. ಮಾನ್ಯ

ಬಿ.ಸಿ.ಪಾಟೀಲ್ ಅವರೂಕೂಡ ಇದ್ದರು. ಈ ತರಹ ಕೆಲವು ಜನ, ನಾವೆಲ್ಲಾ ಮುಂಚಿತವಾಗಿ ಇದ್ದೆವು. ಏಕೆಂದರೆ ಪ್ರೊಸೆಷನ್‌ನಲ್ಲಿ ಪರಿವಾರದವರು ಹಾಗೂ ಎಲ್ಲರೂ ಕೂಡ ಬರುವುದಕ್ಕೆ ಕಷ್ಟ. ಸುಮಾರು 250 ಅಥವಾ 300 ಚೇರ್‌ಗಳು ಇದ್ದಿರಬಹುದು. ಆಮೇಲೆ ಒಂದು ಶಾಮಿಯಾನ ಹಾಕಿದ್ದರು. ಅದಕ್ಕೆ ಯಾವುದೇ ತರವಾದ ಒಂದು ಪ್ರೊಟೆಕ್ಷನ್ ಆಗಲೀ ಮತ್ತೊಂದಾಗಲೀ ಇರಲಿಲ್ಲ. ಪೋಲೀಸ್‌ನವರು ಅಲ್ಲಲ್ಲೇ ಒಬ್ಬೊಬ್ಬರು ಇದ್ದರು. ಆ ಕಡೆ ಯಾವ ಹೈವೇ, ರಿಂಗ್ ರೋಡ್ ಹೋಗುತ್ತದೆ ಅಲ್ಲಿ ಒಂದೇ ಒಂದು ತಂತಿಯ ಬೇಲಿ ಹಾಕಿರುವುದನ್ನು ಬಿಟ್ಟರೆ ಬೇರೆ ಯಾವುದೇ ತರವಾದ ಪ್ರೊಟೆಕ್ಷನ್ಸ್ ಆಗಲೀ ಮತ್ತೊಂದಾಗಲೀ ಇರಲಿಲ್ಲ. ನಾವು ಆಂಟಿಸಿಪೇಟ್ ಮಾಡಿದ್ದು ಏನು ಎಂದರೆ ಅಲ್ಲಿಂದ ಬಂದ ತಕ್ಷಣ ಎಲ್ಲಾ ಶಾಂತವಾಗಿ ಆಗುತ್ತದೆ ಎಂದು. ಕ್ವೈಟ್ ಆಗಿ ಯಾವುದೋ ಒಂದು ದು:ಖದ ಮಡುವಿನಲ್ಲಿ ಇರುತ್ತಾರೆ. ಎಲ್ಲರೂ ಬಂದ ಮೇಲೆ ಸರಿ ಆಗುತ್ತದೆ ಎಂದು ನಿರೀಕ್ಷೆ ಇತ್ತು. ಅಲ್ಲಿಂದ ಬರುವ ಹೊತ್ತಿಗೆ ನಾವು ಮೆಜೆಸ್ಟಿಕ್ ಕ್ರಾಸ್ ಆಗುವುದರೊಳಗೇ ಇಲ್ಲಿ ಟೆನ್‌ಷನ್ ಶುರು ಆಗಿತ್ತು. ಎಷ್ಟು ರೌಂಡ್ಸ್ ಟಿಯರ್ ಗ್ಯಾಸ್ ಅನ್ನು ಜಾಗದಲ್ಲಿ ಹಾಕಿದ್ದಾರೆ ಎನ್ನುವುದಕ್ಕೆ ಲೆಕ್ಕ ಇಲ್ಲ. ಅದರ ಬಗ್ಗೆ ಕೂಡ ಮಾಹಿತಿ ತಮಗೆ ಇರಬಹುದು. ಇರತಕ್ಕ ಪೋಲೀಸ್‌ನವರು ಜೀವ ಬಿಟ್ಟು ಅವತ್ತು ಕೆಲಸ ಮಾಡಿದ್ದಾರೆ. ಏಕೆಂದರೆ ಒಬ್ಬ ಪೋಲೀಸ್‌ಗೆ ಒಂದು ಸಾವಿರ ಜನ ಹೊಡೆಯುವ ಲೆವೆಲ್‌ಗೆ ಹೋಗಿದ್ದರು. ಯಾವ ಜೀಪನ್ನು ಕಾಣುತ್ತಾರೆ ಅದನ್ನು ಇನ್‌ವರ್ಟ್ ಮಾಡುತ್ತಿದ್ದರು. ಮೊದಲು ಯಾರೂ ಕೂಡ ಇರಲಿಲ್ಲ. ಮನೆಯ ಮೇಳುಗಡೆಗೆ ಮತ್ತು ಪಕ್ಕದಲ್ಲಿರತಕ್ಕ ಹೆಣ್ಣು ಮಕ್ಕಳು ಹಾಗೂ ಇತರರು ಎಲ್ಲಾ, ಪಾಪ ಇದನ್ನು ನೋಡಬೇಕೆಂದು ನಿಂತವರು ಕಡೆಗೆ ಯಾರ್‍ಯಾರೋ ಎಲ್ಲೆಲ್ಲೋ ಹೋಗುವ ಹಾಗೆ ಆಯಿತು. ಇಲ್ಲಿ ಕುಳಿತು ಕೊಂಡವರು 250 ಅಥವಾ 300 ಜನ ಏನು ಇದ್ದೆವು, ನಾವು ಪರಿವಾರದವರು ಕಡೆಯ ದರ್ಶನವನ್ನು ಮಾಡಬೇಕು ಎಂದು ಇದ್ದೆವು. ನಮ್ಮ ಮೇಲೆ ಕಲ್ಲನ್ನು ಬಿಸಾಡುವುದಕ್ಕೆ ಶುರು ಮಾಡಿದರು. ಆಗ ಅನಿವಾರ್ಯವಾಗಿ ಪೋಲೀಸ್‌ನವರು ಮುಂದೆ ಹೋಗಿ ನಿಲ್ಲಿಸುವುದಕ್ಕೆ ಹೋದಾಗ ಕಡೆಗೆ ಈ ಕಡೆ ಇದ್ದಂತಹ ಅಭಿಮಾನಿಗಳು ಅವರನ್ನು ಬಿಟ್ಟುಬಿಡಿ, ಮತ್ತೆ ಒಂದಕ್ಕೊಂದಕ್ಕೆ ಗಲಾಟೆ ಮಾಡುವುದು ಬೇಡ ಎಂದು ಹೇಳಿದರು. ಒಬ್ಬೊಬ್ಬರು ಒಬ್ಬೊಬ್ಬರನ್ನು ವಿನಂತಿ ಮಾಡಿಕೊಂಡರು. ಫಿಲಂ ಡೈರೆಕ್ಟರ್ಸ್ ವಿನಂತಿ ಮಾಡಿಕೊಂಡರು, ಪ್ರೊಡ್ಯೂಸರ್ಸ್, ಆರ್ಟಿಸ್ಟ್ ಎಲ್ಲರೂ ಕೂಡ ವಿನಂತಿ ಮಾಡದರೂ ಈ ವಿನಂತಿಗಳು ಅವರ ಮನಸ್ಸಿಗೆ ನಾಟಲಿಲ್ಲ. ಯಾರೋ ಏನೋ ಅಲ್ಲಿಂದ ಕಲ್ಲು ಬಿಸಾಡುವುದು, ಎಲ್ಲಿಂದಲೋ ಗಲಾಟೆಗಳನ್ನು ಶುರು ಮಾಡುವುದು. ಒಂದೇ

ಸಾರಿಗೆ ಪೋಲೀಸ್‌ನವರು ಮೇಲೆ ಏರಿ ಹೋಗತಕ್ಕದ್ದು ಹೀಗೆ ಆಯಿತು. ಅಂದರೆ ಇದು ಉದ್ದೇಶಪೂರ್ವಕವಾಗಿ ಇದನ್ನು ಹಾಳು ಮಾಡಬೇಕು ಎನ್ನತಕ್ಕಂಥ ಉದ್ದೇಶ ಇತ್ತಾ ಅಥವಾ ಯಾರಿಗೂ ಅನುಕೂಲ ಮಾಡಿಕೊಡಬಾರದು ಎನ್ನತಕ್ಕ ಉದ್ದೇಶ ಇತ್ತಾ ಅಥವಾ "ಡಾ: ರಾಜ್ ಕುಮಾರ್ ಎನ್ನುವವರು ನಮ್ಮ ಆಸ್ತಿ, ಯಾರೋ ಒಂದಿಷ್ಟು ಜನ ಸೇರಿ ಶವಸಂಸ್ಕಾರ ಮಾಡಬಾರದು, ನಾವೆಲ್ಲರೂ ಸೇರಿ ಮಾಡಬೇಕು" ಎಂದು ಈ ರೀತಿ ಮಾಡಿದ್ದಾರೆಯೆ? ಈ ತರಹದ ನಾನಾ ರೀತಿಯ ಗೊಂದಲಗಳೂ ಕೂಡ ಅಲ್ಲಿ ಶುರುವಾದವು. ಅಲ್ಟಿಮೇಟಾಗಿ ನಾವು ಸುಮಾರು 5.00, 5.30 ಗಂಟೆಯ ಹೊತ್ತಿಗೆ 250 ಜನ ಮಕ್ಕಳು ಮತ್ತು ಹೆಣ್ಣು ಮಕ್ಕಳೇ ಅಲ್ಲಿ ಇದ್ದೆವು. ಅವರ ಜೊತೆ ಆರ್ಟಿಸ್ಟ್‌ಗಳು ಇದ್ದರು. ಶ್ರೀ ಎಂ.ಪಿ.ಶಂಕರ್ ಅವರು, ಶ್ರೀ ರಾಜೇಶ್ ಅವರು, ಎಲ್ಲಾ ಸೀನಿಯರ್ಸ್ ಇದ್ದರು ಪಾಪ ಎಂ.ಪಿ. ಶಂಕರ್ ಅವರಿಗೆ ಓಡಾಡುವುದಕ್ಕೆ ಕೂಡ ಆಗುತ್ತಿಲ್ಲ. ಆದರೆ ಎಲ್ಲೋ ಒಂದು ಕಡೆ, ಕಡೆಯ ದರ್ಶನ ಇಲ್ಲಾದರೂ ಆಗಬಹುದು, ಅಲ್ಲಂತೂ ಆಗಲಿಲ್ಲ ಎಂಬವಾದ ಇದ್ದಂತಹ ಸಂದರ್ಭದಲ್ಲಿ ಸುಮಾರು 15ರಿಂದ 20 ಸಾವಿರ ಜನ ಪೋಲೀಸ್‌ನವರನ್ನು ಮೂಲೆ ಮೂಲೆಗೆ ಸೇರಿಸಿ ಹುಡುಕಾಡಿ ಹೊಡೆಯುವ ತರಹ ಒಂದು ಸನ್ನಿವೇಶ ಶುರು ಆಯಿತು. ಆಗಲೇ ಲಾಠಿ ಛಾರ್ಜ್ 4–5 ರೌಂಡ್ಸ್ ಆಗಿತ್ತು. ಪೋಲೀಸ್‌ನವರನ್ನು ಒಳಗಡೆ ಸೇರಿಸಿ ಬಿಟ್ಟು ಬಸ್‌ಗೆ ಬೆಂಕಿ ಹಾಕಬೇಕು ಎನ್ನುವಂತಹ ಲೆವಲ್‌ಗೆ ಯಾವಾಗ ಹೋದರೋ ಜೀಪಿಗೆ ಬೆಂಕಿ ಹಾಕಿ ಬಸ್ಸಿಗೆಲ್ಲಾ ಬೆಂಕಿ ಹಾಕಬೇಕು ಎಂದು ಹೇಳುವಂತಹ ಲೆವಲ್‌ಗೆ ಹೋದರೋ ಆಗ ಫೈರಿಂಗ್ ಆಯಿತು. ಫೈರಿಂಗ್ ಆದಾಗ ಅಲ್ಲಿರತಕ್ಕಂಥ ಪಾಪ ಎಲ್ಲಾ ಅಭಿಮಾನಿಗಳೂ ಕೂಡ ಇದನ್ನು ನೋಡಿ ಬಿಟ್ಟು ಅಷ್ಟು ಕಣ್ಣೀರು ಇಟ್ಟರು. ಯಾರೋ ಒಬ್ಬ ಅಭಿಮಾನಿ ನಮ್ಮ ಹತ್ತಿರ ಇದ್ದವನು ತೀರಿಕೊಂಡು ಹೋದನಲ್ಲಾ ಎಂದು ಹೇಳಿ ಅವರಿಗೆ ಅಷ್ಟು ದು:ಖ ಆಯಿತು. ಆದರೆ ಅಲ್ಲಿರತಕ್ಕಂಥವರು ಅನಿವಾರ್ಯವಾಗಿ ಫೈರಿಂಗ್ ಆದ ಮೇಲೂ ಕೂಡ ಈ ಪರಿವಾರದವರ ಮೇಲೆ ಕಲ್ಲನ್ನು ಬಿಸಾಡುವುದಕ್ಕೆ ಶುರು ಮಾಡಿದರು. ಎಲ್ಲಿಯವರೆಗೂ ಎಂದರೆ ಇಲ್ಲಿದ್ದವರೆಲ್ಲರೂ ಕೂಡ ಪೋಲೀಸ್‌ನವರ ಜೊತೆ ಸೇರಿಕೊಂಡು ಅವರಿಗೆ ಕಲ್ಲು ಹೊಡೆಯತಕ್ಕಂಥ ಸಂದರ್ಭ ಬಂತು. ಮೀಡಿಯಾದವರೆಲ್ಲರೂ ಕೂಡ ತಪ್ಪಿಸಿಕೊಂಡು ಓಡಿ ಹೋಗತಕ್ಕಂಥ ಸಂದರ್ಭಗಳು ಬಂತು. ಯಾರ ಮನವಿಗಳು, ಯಾವ ರೀತಿಯಲ್ಲೂ ಕೂಡ ಅವರಿಗೆ ನಾಟದೇ ಇರತಕ್ಕಂಥ ವ್ಯವಸ್ಥೆಗಳು ಆದವು. ಈ ತರಹದ ಗೊಂದಲದ ನಾನಾ ರೀತಿಯ ಅನುಮಾನಕ್ಕೆ ದಾರಿಯಾಯಿತು. ಸರ್ಕಾರ

ಸರಿಯಾಗಿ ಅರೇಂಜ್‌ಮೆಂಟ್ಸ್ ಮಾಡಿಲ್ಲ ಅಥವಾ ಮತ್ತೊಂದು ಏರ್ಪಾಡು ಮಾಡಿಲ್ಲ ಅಥವಾ ಯಾರದ್ದೋ ಕೈವಾಡ ಇದರಲ್ಲಿ ಇದೆ, ಈ ತರಹದ ನಾನಾ ರೀತಿಯ ಅನುಮಾನಗಳಿಗೆ ಎಡೆ ಮಾಡಿ ಅವತ್ತು ಗೊಂದಲ ಆಯಿತು. ಇಷ್ಟೊಂದು ಗೊಂದಲ ಆಯಿತು ಎಂದರೆ ಅಲ್ಲಿರತಕ್ಕ ಯಾರೂ ಒಂದು ಕಡೆಯ ದರ್ಶನಕ್ಕೆ ಅಥವಾ ಸಂಸ್ಕಾರ ಮಾಡುವಂತಹ ಸಂದರ್ಭದಲ್ಲಿ ಎಲ್ಲರೂ ಇರಬೇಕು ಎಂದು ಕಾತುರದಿಂದ ಇದ್ದರೋ ಅವರು ಯಾರೂ ಕೂಡ ಅಲ್ಲಿ ಇರಲು ಸಾಧ್ಯವಾಗಲಿಲ್ಲ ಯಾರೂ ಕೂಡ ಇರಲಿಲ್ಲ. ಎಲ್ಲರೂ ಕೂಡ ಹೋಗಿ ಪ್ರಸಾದ್ ಸ್ಟುಡಿಯೋಸ್‌ನ ಹಿಂದುಗಡೆ ಹೆಣ್ಣು ಮಕ್ಕಳನ್ನೆಲ್ಲಾ ಕರೆದುಕೊಂಡು ಅಲ್ಲಿಗೆ ಹೋಗಿ ಆ ಕಡೆ ಗೇಟ್‌ನೊಳಗೆ ಬಿಟ್ಟುಬಿಟ್ಟರು ತಾವೂ ಕೂಡ ಬಂದಿದ್ದೀರಿ. ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅವರೂ ಕೂಡ ಆ ಸಂದರ್ಭದಲ್ಲಿ ಇದ್ದರು. ಇಷ್ಟೊಂದು ಭೀಕರವಾಗಿ, ಭಯಾನಕವಾಗಿ ಅವತ್ತಿನ ಘಟನೆ ನಡೆದು ಹೋಯಿತು. ಅವತ್ತು ಯಾರು ಸರ್ಕಾರದ ಪರವಾಗಿ ಬರುತ್ತಾರೋ, ಅವರ ಮೇಲೆಯೂ ಧಾಳಿ ಮಾಡಬೇಕೆನ್ನುವ ಹಂತಕ್ಕೆ ಹೋದಂತಹ ವಾತಾವರಣ ಸೃಷ್ಟಿಯಾಗಿತ್ತು. ಕಡೆಗೆ ಅಲ್ಲಿರತಕ್ಕಂತಹ ಚಿತ್ರಕಲಾವಿದರು ಹಾಗೂ ಜನ ಪ್ರತಿನಿಧಿಗಳು ಸೀನಿಯರ್ಸ್ ಯಾರ್‍ಯಾರು ಇದ್ದರು ಎಲ್ಲರೂ ಸೇರಿ ಪೋಲಿಸ್‌ನವರಿಗೆ ವಿನಂತಿ ಮಾಡಿಕೊಂಡೆವು. "ನೀವು ಮುಂದೆ ಹೋದರೆ, ನಿಮಗೆ ಹೊಡೆಯುವುದಕ್ಕೆ ಯಾರೂ ಹೇಸುವುದಿಲ್ಲ, ದಯಮಾಡಿ ತಾವೆಲ್ಲರೂ ಒಂದು ಕಡೆ ಇರಬೇಕು" ಎಂದು ಹೇಳುವಷ್ಟರಲ್ಲಿ ಸುಮಾರು ಒಂದು ಲಕ್ಷ ಜನ ಆ ಜಾಗಕ್ಕೆ ನುಗ್ಗಿ ಬಿಟ್ಟರು. ನುಗ್ಗಿ ಆದ ಮೇಲೆ ಅಲ್ಲಿ ಒಂದು ಇಂಚೂ ಕೂಡ ಜಾಗ ಇಲ್ಲ. ಯಾರಿಗೂ ಕೂಡ ಒಳಗಡೆ ಹೊರಗಡೆ ಹೋಗಲಿಕ್ಕಾಗಲಿಲ್ಲ. ಪೋಲಿಸ್‌ನವರೂ ಕೂಡ ತಮ್ಮ ಸಂಪೂರ್ಣವಾದ ಪ್ರಯತ್ನವನ್ನು ಮಾಡಿದರು. ಆದರೆ ಅಲ್ಲಿ ಇದ್ದಂತಹ ಪೋಲೀಸರಿಂದ ಅಲ್ಲಿ ನಡೆಯತಕ್ಕಂತಹ ಗಲಭೆಯನ್ನು ಕಂಟ್ರೋಲ್ ಮಾಡುವುದಕ್ಕೆ ಆಗಲಿಲ್ಲ. ಎಷ್ಟೋ ಜನ ತಲೆ ಒಡೆದು ಕೊಂಡಿದ್ದಾರೆ ಕೈ ಮುರಿದುಕೊಂಡಿದ್ದಾರೆ, ಅಲ್ಲಲ್ಲಿ ರಾಜ್‌ಕುಮಾರ್ ಅಭಿಮಾನಿಗಳು ಕೂಡ ಕೈ ಮುರಿದುಕೊಂಡಿದ್ದಾರೆ, ಈ ತರಹದ ಹತ್ತು ಹಲವಾರು ಸಮಸ್ಯೆಗಳು ಅಲ್ಲಿ ಉದ್ಭವವಾದವು. ಇದಾದ ಮೇಲೆ ಅಂತ್ಯಕ್ರಿಯೆ ಯಾರು ಮಾಡಿದರು ಏನು ಮಾಡಿದರು ಎಲ್ಲರೂ ಸೇರಿ ಮಣ್ಣು ಹಾಕಬೇಕೆಂದು ಹಾಕಿದರು, ಎಲ್ಲಾ ಆಗಿ ಹೋಯಿತು. ಹೋಗಬೇಕಾದರೆ, ನಾನು ತಮ್ಮ ಕಾರ್ಯದರ್ಶಿಯವರಿಗೆ ದೂರವಾಣಿ ಮಾಡಿದೆ, ಪ್ರಸಾದ್‌ರವರಿಗೆ ಫೋನ್ ಮಾಡಿದೆ, ಒಎಸ್‌ಡಿಯವರಿಗೂ ಫೋನ್ ಮಾಡಿದೆ, ಪೆಟ್ರೋಲ್ ಬಂಕ್‌ಗೆ ಬೆಂಕಿ ಹಚ್ಚುತ್ತಿದ್ದಾರೆ, ಇಮ್ಮೀಡಿಯೆಟಾಗಿ ಫೈರ್ ಇಂಜಿನ್, ಮತ್ತು

ಪೋಲಿಸ್‌ರನ್ನು ಇಮ್ಮೀಡಿಯೆಟ್ಟಾಗಿ ಕಳೂಹಿಸಿ ಎಂದು ಹೇಳಿದೆ. ಏಕೆಂದರೆ ವಾಪಾಸ್ ಹೋಗುವುದಕ್ಕೆ ಸಮಸ್ಯೆ ಆಯಿತು. ಅಂತ್ರಕ್ರಿಯೆ ಇಲ್ಲಿ ನಡೆಯುತ್ತಿದೆ, ಆದರೆ ಗಲಾಟೆ ಮಾಡುವವರು ಯಾವ ಯಾವ ರೋಡ್‌ನಲ್ಲಿ ವೆಹಿಕಲ್ಸ್‌ಗಳು ವಾಪಾಸ್ ಹೋಗುತ್ತವೆ ಆ ವೆಹಿಕಲ್‌ಗಳನ್ನು ಹೊಡೆಯುವುದಕ್ಕೆ ಅಲ್ಲಿ ಹೋಗಿ ಕಾದು ಕುಳಿತಿದ್ದರು. ಹಾಗಾಗಿ ಎಲ್ಲರೂ ಮತ್ತೆ ಒಂದು ಸಮೂಹ ತರಹ ಮಾಡಿಕೊಂಡು ಮುಂದೆ ಹಿಂದೆ ಎರಡೆರಡು ಬಸ್ಸುಗಳನ್ನು ಇಟ್ಟುಕೊಂಡು ಸುಮಾರು 30–40 ವೆಹಿಕಲ್ಸ್‌ಗಳನ್ನು ಉದ್ದಕ್ಕೆ ನಿಲ್ಲಿಸಿಕೊಂಡು ಹಿಂದಿರುಗಿ ಹೋಗಲು ತಯಾರಾಗಿದ್ದೆವು, ಅಷ್ಟರಲ್ಲಿ ನಮ್ಮ ಉಪ ಮುಖ್ಯಮಂತ್ರಿಗಳು ಬಂದರು. ಅದು ಎಷ್ಟೇ ತೊಂದರೆ ಆದರೂ ಸರಿ ತಾವು ಒಂದು ಸಾರಿ ತಮ್ಮ ಜವಾಬ್ದಾರಿಯನ್ನು ನಿಭಾಯಿಸಬೇಕೆಂಬ ದೃಷ್ಟಿಯಿಂದ ಬಂದಿರಿ. ತಮಗೆ ಕೂಡ ಒಳಗಡೆ ಹೋಗುವುದಕ್ಕೆ ಅಷ್ಟೇ ಕಷ್ಟವಾಯಿತು. ತಾವೂ ಕೂಡ ಅಲ್ಲಿ ಏನು ಮಾಡಿದಿರಿ ಎಂದೂ ಕೂಡ ನಮಗೆ ಗೊತ್ತಾಗಲಿಲ್ಲ. ಆ ರಶ್‌ನಲ್ಲಿ ಯಾರೂ ಕೂಡ ಅಲ್ಲಿ ಒಳಗಡೆ ಹೋಗದೇ ಇರುವಂತಹ ಪರಿಸ್ಥಿತಿ ಇತ್ತು. ತಾವು ಬಂದು ಕೊನೆಯ ಗಳಿಗೆಯಲ್ಲಿ ಅಂತ್ಯ ಸಂಸ್ಕಾರಕ್ಕೆ ಏನು ವ್ಯವಸ್ಥೆ ಮಾಡಬೇಕಿತ್ತು, ಅದನ್ನು ಮಾಡತಕ್ಕಂತಹ ಪ್ರಯತ್ನವನ್ನು ಮಾಡಿದಿರೇನೋ. ಏಕೆಂದರೆ ನಾವುಗಳೆಲ್ಲರೂ ಅಲ್ಲಿ ಇದ್ದೆವು. ಈ ಒಂದು ವಾತಾವರಣದಲ್ಲಿ ತಾವು ಸ್ಟೇಟ್ ಫ್ಯೂನರಲ್ ಎಂದು ತಾವು ಘೋಷಣೆ ಮಾಡಿದಿರಿ I think state funeral ಅಂದರೆ ಎಷ್ಟೋ ಜನ ರಾಜಕಾರಣಿಗಳು ಇರಬಹುದು, ಎಷ್ಟೂ ಪ್ರತಿಷ್ಠಿತ ಜನ ಇರಬಹುದು, ಅವರು ತೀರಿಕೊಂಡಂತಹ ಸಂದರ್ಭದಲ್ಲಿ ಉತ್ತಮವಾದ ವಾತಾವರಣವನ್ನು ಸೃಷ್ಟಿ ಮಾಡತಕ್ಕಂಥದ್ದು ಸರ್ಕಾರದ ಜವಾಬ್ದಾರಿಯಾಗುತ್ತದೆ when you declare as a State/ funeral. ಸ್ಟೇಟ್ ಫ್ಯೂನರಲ್ ಅಲ್ಲವೆಂದು ಹೇಳಿ ಯಾರೋ ಒಬ್ಬರು ಗಲಾಟೆ ಮಾಡಿದರೆ ನಮ್ಮ ಜವಾಬ್ದಾರಿ ಏನಿತ್ತು law and order protection ಮಾಡತಕ್ಕಂಥದ್ದು ಏನು ಇತ್ತು, ಅದು ಅವರ ಸಂಸಾರಕ್ಕೆ ಸೀಮಿತವಾದುದಾಗುತ್ತದೆ. ಆದರೆ ಸ್ಟೇಟ್ ಫ್ಯೂನರಲ್ ಎಂದು ಘೋಷಣೆ ಮಾಡಿದ ಮೇಲೆ ಅದಕ್ಕೆ ಪೋಲಿಸ್‌ನವರಿಗೂ ಅವತ್ತು ಪ್ರೊಟೆಕ್ಷನ್ ಕೊಡತಕ್ಕಂತಹ ಅವಶ್ಯಕತೆ ಇತ್ತು. ಇವತ್ತು ಎಂಟು ಜನ ತೀರಿಕೊಂಡಿದ್ದಾರೆ. ಬಹುಶ: ಫ್ಯಾನ್ಸ್ ಅಸೋಸಿಯೇಷನ್‌ರವರು ಅಲ್ಲಿ ಇರಲಿಲ್ಲ ವೆಂದರೆ ಇನ್ನು 80–100 ಜನ ಸತ್ತು ಹೋಗುತ್ತಿದ್ದರು. ಅವರುಗಳು ಪೋಲಿಸ್‌ನವರಿಗೆ ಪ್ರೊಟೆಕ್ಷನ್ ಕೊಟ್ಟಿದ್ದಾರೆ. ಒಬ್ಬೊಬ್ಬರು ಒಬ್ಬೊಬ್ಬ ಪೋಲೀಸ್‌ನವರನ್ನು ಕರೆದುಕೊಂಡು ಬಂದು ರಕ್ಷಣೆ ಕೊಡತಕ್ಕಂಥಾದ್ದು ಆಗಿದೆ. ಹಾಗಾಗಿ ಇವತ್ತು ಏನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರರು ಏನು ಕಾಂಪೆನ್‌ಸೇಷನ್

ಕ್ಲೇಮ್ ಮಾಡುತ್ತಿದ್ದಾರೆ. ಒಂದು ಕಡೆಗೆ ಯಾರು ಅಭಿಮಾನಿಗಳು ಎಂದು ನಾವು ಕಾಂಪೆನ್‌ಸೇಷನ್ ಕ್ಲೇಮ್ ಮಾಡುತ್ತೇವೆ, ಅದಕ್ಕಿಂತ ಹೆಚ್ಚಾಗಿ ಇವತ್ತು ಏನೂ ಕೂಡ ಕೇಳದೇ, ಹೊಡೆತ ತಿಂದು ಪೋಲಿಸ್ ಇಲಾಖೆಯವರಿಗೆ ಏನು ಹಾನಿ ಯಾಗಿದೆ, ಅವರಿಗೂ ಕೂಡ ಅಷ್ಟೇ ಪ್ರಮಾಣದಲ್ಲಿ ಕಾಂಪೆನ್‌ಸೇಷನ್ ಕೊಡುವ ಅವಶ್ಯಕತೆ ಇದೆ. ಏಕೆಂದರೆ, ಯಾರ್‍ಯಾರು ಪೋಲಿಸ್‌ನವರು ಅಂದು ಕೆಲಸ ಮಾಡಿದ್ದರು, ನೀವು ನಂಬುತ್ತೀರೋ ಇಲ್ಲವೋ ವಾಪಸ್ ಹೋಗತಕ್ಕಂತಹ ಸಂದರ್ಭದಲ್ಲಿ ಪೋಲಿಸ್‌ನವರೇ ಮೊದಲು ಹೋಗಿ ವ್ಯಾನ್‌ನೊಳಗೆ ಕುಳಿತುಕೊಳ್ಳತಕ್ಕಂತಹ ಪರಿಸ್ಥಿತಿ ಬಂದಿತ್ತು. ಅಲ್ಲಿ ಮೂಲೆಯಲ್ಲಿರತಕ್ಕಂತಹ ಪೆಟ್ರೋಲ್ ಬಂಕ್‌ಗೆ ಬೆಂಕಿ ಹಚ್ಚಿದ್ದರು. ಕರ್ನಾಟಕ ಸ್ಟೇಟ್ ಟೂರಿಸಂ ಬಸ್‌ಗಳು ಅಲ್ಲಿಯೇ ಪಾರ್ಕ್ ಮಾಡುತ್ತಾರೆ. ಅಲ್ಲಿ ಕಲ್ಲು ಮರಳು ಯಾರ್ಡ್ ಇದೆ. ಅಲ್ಲಿ ನಿಲ್ಲಿಸಿದ್ದ ಸುಮಾರು ನಾಲ್ಕು ಬಸ್ಸುಗಳಿಗೆ ಹೋಗಬೇಕಾದರೆ ಬೆಂಕಿ ಹಚ್ಚಿದರು. ರಸ್ತೆಗೆ ಅಡ್ಡ ಹಾಕಿ ಪೋಲಿಸ್‌ನವರಿಗೆ ಅಟ್ಯಾಕ್ ಮಾಡಬೇಕೆಂದು ಅಥವಾ ವೆಹಿಕಲ್ಸ್ ಯಾವ್ಯಾವುವು ಹೋಗುತ್ತವೆ, ಅವುಗಳಿಗೆ ಅಟ್ಯಾಕ್ ಮಾಡಬೇಕೆಂದು ಹೇಳುವಂತಹ ಒಂದು ವಾತಾವರಣ ಅಂದು ಸೃಷ್ಟಿಯಾಗಿತ್ತು. ನಮ್ಮ ಹಿರಿಯರಾದ ಮಾನ್ಯ ರಮೇಶ್‌ಕುಮಾರ್‌ರವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇಂತಹ ಕೆಟ್ಟ ಕೃತ್ಯವನ್ನು ಮಾಡುವುದರಲ್ಲಿ ಯಾರು ಪಾಲುದಾರರಾಗಿದ್ದಾರೆ, ಅವರನ್ನು ಶಿಕ್ಷೆಗೆ ಒಳಪಡಿಸಬೇಕೆಂಬ ಮಾತನ್ನು ಆಡಿದ್ದಾರೆ, ಅಂದಿನ ಮಾಹಿತಿಯನ್ನು ಸಂಪೂರ್ಣ ಎಲಕ್ಟ್ರಾನಿಕ್ ಮೀಡಿಯಾಗಳು through out ಕರ್ನಾಟಕ ತೋರಿಸಿದ್ದಾರೆ. ಕೆಲವರನ್ನು ಒತ್ತಾಯ ಪೂರ್ವಕವಾಗಿ ಇನ್‌ಕ್ಲೂಡ್ ಮಾಡಿದ್ದಾರೆ. ಹೆಣ್ಣು ಮಕ್ಕಳ ಕೈಯಲ್ಲಿ ಕಲ್ಲು ಕೊಟ್ಟು " ನೀನು ಹೋಗಿ ಹೊಡಿ" ಎಂದು ಹೇಳಿದ್ದಾರೆ. ಎಲಕ್ಟ್ರಾನಿಕ್ ಮೀಡಿಯಾದಲ್ಲಿ it is recorded there ನಾವು ಅಂದು ನೋಡಿದ ಸಂದರ್ಭ ಹೇಳಬೇಕೆಂದರೆ, ಯಾರೋ ವಯಸ್ಸಾಗಿರತಕ್ಕಂತಹ ಅಮ್ಮನವರ ಕೈಯಲ್ಲಿ ಕಲ್ಲು ಕೊಟ್ಟು "ನೀನು ಹೊಡಿ" ಎಂದು ಹೇಳಿದ್ದಾರೆ. ಇದರಲ್ಲಿ ಯಾರ್‍ಯಾರು ಇನ್‌ವಾಲ್ವ್ ಆಗಿದ್ದಾರೆ, ಯಾರು ಇದನ್ನು ಮಾಡಿಸಬೇಕೆಂದು ಇದ್ದರು, ಯಾರು ಇದನ್ನು ಮಾಡಿದ್ದಾರೆ, ಈ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಈ ತರಹದ ಅವಕಾಶಗಳು ಬಹಳಷ್ಟು ಸಾರಿ ಆಗಿವೆ. ಹಿಂದೆ ಕೂಡ ಆಗಿವೆ. 1991–92ರಲ್ಲಿ ಕಾವೇರಿ ಗಲಾಟೆ ಆದಾಗ ಕೂಡ ಇದೇ ತರಹದ ವಾತಾವರಣ ಸೃಷ್ಟಿ ಮಾಡಿದ್ದರು. ಅವತ್ತೂ ಕೂಡ ಮುಂಚಿತವಾಗಿಯೇ ಎಷ್ಟೋ ಜನ ರೌಡಿಗಳನ್ನು ಅರೆಸ್ಟ್ ಮಾಡಿದ್ದರು. ಸುಮಾರು 2000–2500 ಜನರನ್ನು ಅರೆಸ್ಟ್ ಮಾಡಿ ಬಳ್ಳಾರಿ ಜೈಲಿಗೆ ಕಳುಹಿಸಿದ್ದರು. These are all the responsibilities. ಲಾ ಅಂಡ್ ಆರ್ಡರ್

ನಾವು ಪ್ರೊಟೆಕ್ಟ್ ಮಾಡಬೇಕು ಅಂದ ತಕ್ಷಣ ಕ್ರಿಮಿನಲ್ಸ್‌ಗಳ ಲೀಸ್ಟ್ ನಮ್ಮೆಲ್ಲರ ಬಳಿ ಇರುತ್ತದೆ. ಯಾರ್‍ಯಾರು ರೌಡಿ ಲಿಸ್ಟ್‌ನಲ್ಲಿ ಇದ್ದಾರೆ ಯಾರ್‍ಯಾರು ಈ ಕೃತ್ಯವನ್ನು ಮಾಡುತ್ತಾರೆಂದು ಮಾಹಿತಿ ಇರುತ್ತದೆ. ಏಕೆಂದರೆ, ನಾವು ಲಾ ಅಂಡ್ ಆರ್ಡರ್ ಪ್ರೂಟೆಕ್ಟ್ ಮಾಡಬೇಕೆಂದರೆ ಕನೇ ಪಕ್ಷ ರೌಡಿಗಳ ಲಿಸ್ಟ್‌ನ್ನು ಮಾಡಿ ಇಟ್ಟು ಕೊಳ್ಳ ಬೇಕಾಗುತ್ತದೆ. who are charge sheeted who are listed out for criminal activities ಇದು ಯಾವುದೂ ಓವರ್ ನೈಟ್ ಆಗಿರುವುದಂತೂ ಅಲ್ಲ. It was developed through minutes, hours and day, So the responsibility was more on the Government. ಡಾ: ರಾಜ್‌ಕುಮಾರ್ ರವರು ಯಾವುದೆ ಒಂದು ಜನರೇಷನ್‌ಗೆ ಸೀಮಿತವಾಗಿರಲಿಲ್ಲ. ಸಣ್ಣ ಮಕ್ಕಳಿಂದ ಹಿಡಿದು ದೊಡ್ಡ ಯಜಮಾನರವರೆಗೂ ಅವರ ಅಭಿಮಾನಿಗಳು ಇದ್ದರು. ಎಷ್ಟೋ ಜನ ಈ ಗಲಾಟೆ ನೋಡಿಕೊಂಡು ರಾಜ್ಯದ ನಾನಾ ಭಾಗಗಳಿಂದ ಬೆಂಗಳೂರಿಗೆ ಬರುವುದಕ್ಕೇ ಹೋಗಲಿಲ್ಲ. ಅವರುಗಳೂ ಏನಾದರೂ ಪರಿಸ್ಥಿತಿ ಶಾಂತಿಯುತವಾಗಿರುತ್ತದೆ ಎಂದು ಬೆಂಗಳೂರಿಗೆ ಬಂದಿದ್ದರೆ ಇನ್ನೂ ತೊಂದರೆಯಾಗುತ್ತಿತ್ತು. ಮೀಡಿಯಾದವರು ಇಡೀ ಸನ್ನಿವೇಶವನ್ನು ತಪ್ಪು ಚಿತ್ರಣ ಮಾಡಿ ಇದನ್ನು ಇಡೀ ರಾಜ್ಯಕ್ಕೆ ತೋರಿಸುತ್ತಿದ್ದಾರೆಂದು ಮೊದಲು ನಮಗೆ ಅನ್ನಿಸಿತ್ತು. ಮೀಡಿಯಾದವರು ಏನಾದರೂ ಮಾಹಿತಿ ಕೊಡದೇ ಇದ್ದಿದ್ದರೆ ರಾಜ್ಯದಿಂದ ಇನ್ನೂ ಲಕ್ಷ ಲಕ್ಷ ಜನ ಬೆಂಗಳೂರಿಗೆ ಬಂದು ಇನ್ನೂ ಏನು ಅನಾಹಿತಗಳು ಆಗುತ್ತಿದ್ದವೋ ಏನೋ ಮೆರವಣಿಗೆ ಇಲ್ಲಿಂದ ಇಲ್ಲಿ ಹೋಗುತ್ತದೆ ಎಂದು ರೂಟುಗಳನ್ನು ಪ್ರೀಯಾಂಬಲ್ ಆಗಿ ಮೀಡಿಯಾ ಮೂಲಕ ಕೊಡುತ್ತಾ ಹೋದೆವೋ ಅಲ್ಲಲ್ಲಿಯೇ ಗುಂಪುಗಳು ಪ್ರಿಪೇರ್ ಆಗಿ ಕುಳಿತುಕೊಳ್ಳತಕ್ಕಂತಹ ಪರಿಸ್ಥಿತಿಗಳು ನಿರ್ಮಾಣವಾದವು. ರೂಟ್ ಹೀಗೆ ಹೋಗುತ್ತದೆ ಎಂದು ಗೊತ್ತಾದ ತಕ್ಷಣ ಎಲ್ಲರೂ ಒಂದು ಕಡೆಯ ಗಳಿಗೆಯ ದರ್ಶನಕ್ಕಾಗಿ ನಿಲ್ಲಬೇಕಾದಂತಹ ಸಂದರ್ಭದಲ್ಲಿ ಏನಾದರೂ ಮಾಡಿ ಎಲ್ಲರನ್ನೂ ಲೂಟಿ ಮಾಡಿಬಿಡಬೇಕು, ಏನಾದರೂ ಮಾಡಿ ಎಲ್ಲವನ್ನೂ ಸುಟ್ಟು ಹಾಕಿ ಬಿಡಬೇಕೆನ್ನುವಂತಹ ವಾತಾವರಣ ನಿರ್ಮಾಣವಾಗಿತ್ತು. ಇದರಿಂದ ಎಲ್ಲರಿಗೂ ಬಹಳ ತೊಂದರೆಗಳಾದವು. ಈ ವಿಚಾರದಲ್ಲಿ ನಮ್ಮ ಹಿರಿಯರಾದ ಮಲ್ಲಿಕಾರ್ಜುನ ಖರ್ಗೆಯವರು ತನಿಖೆಗಾಗಿ ಸಿಬಿಐಗೆ ವಹಿಸಬೇಕೆಂದು ಹೇಳಿದ್ದಾರೆ. ತಾವುಗಳೆಲ್ಲರೂ ಎಲ್ಲವನ್ನೂ ಹೇಳಿದ್ದೀರಿ, ಮಾಹಿತಿಗಳು ಇವೆ, ಪ್ರೀಯಾಂಬಲ್ ಆಗಿ ಎಲ್ಲಾ ಮಾಹಿತಿಗಳು ನಮ್ಮಲ್ಲಿ ಇವೆ ಇದನ್ನು ಯಾರ್‍ಯಾರು ಮಾಡಿಗದ್ದಾರೆಂದು ಮಾಹಿತಿಗಳು ಇವೆ. ನೇರವಾಗಿ ತಾವು ಇದನ್ನು ಸಿಬಿಐ

ಎನ್‌ಕ್ವೈರಿಗೆ ವಹಿಸಬೇಕು. ಯಾವ್ಯಾವುದಕ್ಕೋ ನಾವು ಸಿಬಿಐ ಎನ್‌ಕ್ವೈರಿ ಮಾಡಿಸುತ್ತೇವೆ. ಡಾ: ಚಿತ್ತರಂಜನ್‌ರವರ ಕೊಲೆಯನ್ನು ಸಿಬಿಐಗೆ ವಹಿಸಿದ್ದೆವು ರಾಜ್ ಕುಮಾರ್‌ರವರ ಘಟನೆ ಬಗ್ಗೆ ಎಲ್ಲಾ ಸೂಕ್ತವಾದ ದಾಖಲೆಗಳಿವೆ. ವಿತ್ ರೆಕಾಡ್ಸ್ ಇದೆ. ಉಳಿದಿರುವುದಕ್ಕೆ ರೆಕಾರ್ಡ್ಸ್ ಇರುವುದಿಲ್ಲ. ಸಿಂಗಲ್‌ಮ್ಯಾನ್ ಯಾರೋ ಒಬ್ಬ ಮರ್ಡರ್ ಮಾಡಿರುತ್ತಾನೆ. But this is with reference to records Entire issue is on the record. ಎಲ್ಲದಕ್ಕೂ ಕೂಡ ಮೀಡಿಯಾ ರೆಕಾರ್ಡ್ ಇರುವುದರಿಂದ ಇದನ್ನು ಸಿಬಿಐಗೆ ವಹಿಸಬೇಕೆಂದು ಒತ್ತಾಯ ಮಾಡುತ್ತೇವೆ. ಇದರಲ್ಲಿ ಒಂದು ಮಾತ್ರ ಸ್ಪಷ್ಟವಾಗಿದೆ. ಡಾ: ರಾಜ್‌ಕುಮಾರ್‌ರವರ ಸಂಸಾರದಿಂದ ಸರ್ಕಾರದ ಮೇಲೆ ಯಾವುದೇ ತರಹದ ಅಲಿಗೇಷನ್ಸ್ ಮಾಡಿಲ್ಲ. ಈ ದಿನದವರೆಗೂ ಅವರು ಅವತ್ತಿನ ದಿವಸ ಸಹಕಾರ ಕೊಟ್ಟರು ಎನ್ನುವಂತಹ ಮಾತನ್ನು ಹೇಳುತ್ತಿದ್ದಾರೆ. ಆದರೆ ಉಳಿದಿರತಕ್ಕಂತಹ ಜವಾಬ್ದಾರಿಗಳಲ್ಲಿ ಸರ್ಕಾರ ಎಲ್ಲಿ ತಪ್ಪು ಹೆಜ್ಜೆ ಇಟ್ಟಿದೆ, ಅಥವಾ ಜವಾಬ್ದಾರಿಗಳು ಎಲ್ಲಿ ಅವರ ಕೈ ತಪ್ಪಿ ಹೋಗಿದೆ, ಅದಕ್ಕೆಲ್ಲಾ ಸೂಕ್ತವಾದ ಉತ್ತರ ಸಿಗಬೇಕೆನ್ನುವುದಾದರೆ ಸಿಬಿಐ ತನಿಖೆಗೆ ಕೊಡಬೇಕೆಂಬ ವಿನಂತಿಯನ್ನು ಉಪಾಧ್ಯಕ್ಷರ ಮೂಲಕ ನಾನು ಸರ್ಕಾರಕ್ಕೆ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್(ಸಾತನೂರು) : ಮಾನ್ಯ ಉಪಾಧ್ಯಕ್ಷರೆ, ಬೆಳಿಗ್ಗೆಯಿಂದ ಇದರ ಬಗ್ಗೆ ಚರ್ಚೆಯಾಗಿದ್ದರೆ, ಬಹುಶಃ ಈ ಚರ್ಚೆಗೆ ಇನ್ನಷ್ಟ ಶಕ್ತಿ ಬರುತ್ತಿತ್ತೆಂದು ನಾನು ಭಾವಿಸುತ್ತೇನೆ. ನಮ್ಮ ನಾಯಕರಾದ ಖರ್ಗೆ ಸಾಹೇಬರು, ರಮೇಶ್‌ಕುಮಾರ್‌ರವರು ಮತ್ತು ಕುಮಾರ್ ಬಂಗಾರಪ್ಪನವರು ಮಾತನಾಡುತ್ತಾ, ಜನ, ಜನರ ಅಭಿಪ್ರಾಯ, ಸರ್ಕಾರದ ವಿಚಾರ ಏನಿತ್ತು ಎನ್ನುವುದನ್ನೆಲ್ಲಾ ಅವರದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ನನಗೆ ಮುಖ್ಯವಾಗಿ ಬಹಳ ನೋವುಂಟು ಮಾಡಿದ್ದು ಏನೆಂದರೆ, ನಮ್ಮ ರಾಜ್ಯದ ಗೌರವ. ಈ ರಾಜ್ಯದಲ್ಲಿರುವ ಪೊಲೀಸ್ ಇಲಾಖೆಯ ಗೌರವ. ಇಡೀ ಕರ್ನಾಟಕ ರಾಜ್ಯ, ಅದರಲ್ಲೂ ಇವೊತ್ತು ಅಂತ್ರಾರಾಷ್ಟ್ರೀಯ ಮ್ಯಾಪ್‌ನಲ್ಲಿ ಇಂಡಿಯಾಗಿಂತಲೂ ಮುಖ್ಯವಾಗಿ ಬೆಂಗಳೂರು ಕಾಣುತ್ತಿರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ. ಹಾಗೆ ನೋಡುತ್ತಿರುವಂತಹ ಸಂದರ್ಭದಲ್ಲಿ ಈ ಮೂರ್ನಾಲ್ಕು ದಿವಸಗಳ ಕಾಲ ಇಡೀ ರಾಜ್ಯ ಬೆಂಗಳೂರು ನಿಶ್ಯಬ್ಧವಾಗಿತ್ತು, ಬಂದ್ ಇತ್ತು ಯಾರೂ ಬರುವುದಕ್ಕಾಗಲಿಲ್ಲ. ಇಲ್ಲಿ ಲಾ ಅಂಡ್ ಆರ್ಡರ್ ವ್ಯವಸ್ಥೆ ಇರಲಿಲ್ಲ. ಒಬ್ಬ ಚಿತ್ರನಟರು ತೀರಿಲಕೊಂಡರಂತೆ, ಈ ರಾಜ್ಯದ ಮುಖ್ಯಮಂತ್ರಿಗಳು ಅಂತಿಮ ದರ್ಶನ ಮಾಡುವುದಕ್ಕೆ ಆಗಲಿಲ್ಲ ಸರ್ಕಾರದ

State Funeral ಏನು ಕೊಡಬೇಕಾಗಿತ್ತು, ಅದನ್ನು ಸರಿಯಾದ ರೀತಿಯಲ್ಲಿ ಕೊಡುವುದಕ್ಕಾಗಲಿಲ್ಲ. ಅವರ ಕುಟುಂಬದವರಿಗೆ ಹತ್ತು ಅಡಿ ಜಾಗ ಬಿಡಿಸಿಕೊಟ್ಟು ಅಂತಿಮ ಸಂಸ್ಕಾರದಲ್ಲಿ ಯಾವ ರೀತಿ ಪೂಜೆ ಮಾಡಬೇಕು, ಯಾವ ರೀತಿ ಧರ್ಮ ಕಾಪಾಡಬೇಕಿತ್ತೋ, ಆ ಧರ್ಮವನ್ನೂ ಉಳಿಸಿಕೊಳ್ಳುವುದಕ್ಕೂ ಆಗಲಿಲ್ಲವೆನ್ನುವುದು ಇಡೀ ರಾಷ್ಟ್ರೀಯ, ಅಂತಾರಾಷ್ಟ್ರೀಯ ಜನರು ನಮ್ಮನ್ನು ನೋಡಿ ನಾವೆಲ್ಲರೂ ನಗೆಪಾಟಲಿಗೀಡಾಗುವ ಪರಿಸ್ಥಿತಿ ಒದಗಿ ಬಂತು. ನಮ್ಮ ರಾಜ್ಯದ ಪೊಲೀಸ್ ಅಧಿಕಾರಿಗಳು ಇಡೀ ರಾಷ್ಟ್ರದಲ್ಲಿ ಉತ್ತಮ ಹೆಸರು ಪಡೆದಿದ್ದಾರೆ. ತೆಲಗಿ ವಿಚಾರಕ್ಕೆ ಹಿಂದೆ ಯಡಿಯೂರಪ್ಪನವರು ಬೇಕಾದಷ್ಟು ವಾದಗಳನ್ನು ಮಾಡಿದ್ದಾರೆ. ಸಿಬಿಐಗೆ ಕೊಡಬೇಕು, ಮತ್ತೊಂದಕ್ಕೆ ಕೊಡಬೇಕೆಂದು ಬೇಕಾದಷ್ಟು ಸಲ ವಿಚಾರಗಳು ಪ್ರಸ್ತಾಪವಾದ ಸಂದರ್ಭದಲ್ಲಿ ನಮ್ಮ ರಾಜ್ಯದ ಅಧಿಕಾರಿಗಳು ಈ ಜವಾಬ್ದಾರಿ ತೆಗೆದುಕೊಂಡು ನಾವು ಸಮರ್ಥರಿದ್ದೇವೆ, ಯಾವ ಸಿಬಿಐ ಬೇಕಾಗಿಲ್ಲ, ನಮ್ಮ ಕೈಯಿಂದಲೇ ಆಗುತ್ತದೆಂದು ಬಹುಕೋಟಿ ಹಗರಣ ತಂದಿಟ್ಟು, ಇವೊತ್ತು ಜನರ ಮುಂದೆ ಸತ್ಯಾಂಶ ಮುಂದಿಟ್ಟು, ಪೊಲೀಸ್ ಗೌರವ ಏನು ಎನ್ನುವುದನ್ನು ರಾಜ್ಯದ ಜನತೆಗೆ ತೋರಿಸಿದ್ದಾರೆ. ಅಂತಹ ಗೌರವ ಉಳಿಸಿಕೊಂಡಂತಹ ಪೊಲೀಸರ ಪರಿಸ್ಥಿತಿ ಈ ಸರ್ಕಾರ ಬಂದ ನಂತರ ಏನಾಯಿತು? ಎಲ್ಲಿಗೆ ಹೋಯಿತು? ಇದಕ್ಕೆ ಯಾರು ಕಾರಣ? ಪೊಲೀಸಿಗೆ ಮೊರೇಲ್ ಇತ್ತೇ? ಸಣ್ಣ ಪೊಲೀಸ್ ಕಾನ್‌ಸ್ಟೇಬಲ್‌ನನ್ನು ಅಟ್ಟಿಸಿಕೊಂಡು ಹೋಗಿ ಹೊಡೆಯುತ್ತಾರೆ. ಇದನ್ನು ಟಿವಿ ಮಾಧ್ಯಮದಲ್ಲಿ ತೋರಿಸಿದರು. ಇಂತಹ ಪರಿಸ್ಥಿತಿ ಯಾರು ಕಾರಣರು? ಇದರ ಜವಾಬ್ದಾರಿ ಯಾರು ತೆಗೆದುಕೊಳ್ಳಬೇಕು? ಇಷ್ಟನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

"ಎರಡು ಗಂಟೆಗಳ ಕಾಲ ಬೀದಿಯಲ್ಲೇ ಉಳಿದ ವರನಟರ ಶವ"

ಅಧ್ಯಕ್ಷರೆ,ಇದರ ಬಗ್ಗೆ ಸರ್ಕಾರಕ್ಕೊಂದು ಪ್ಲಾನಿಂಗ್ ಬೇಡವೇ? ಈಗ ನಮ್ಮಂತಹವರನ್ನೇ ತೆಗೆದುಕೊಂಡರೆ, ನಾವು ಎಲ್ಲಿಗೆ ಹೋಗುತ್ತೇವೆ, ಬರುತ್ತೇವೆ, ಇತ್ಯಾದಿ ಮಾಹಿತಿಗಳೆಲ್ಲವೂ ಸರ್ಕಾರದ ಬಳಿ ಇರುತ್ತದೆ. ಡಾ:ರಾಜ್ ಕುಮಾರ್ ರವರು ಸತ್ತ ತಕ್ಷಣ ಏನಾಯಿತು? ಈಗ ಉದಾಹರಣೆಗೆ ಎಂಜಿಆರ್ ಅವರನ್ನು ತೆಗೆದುಕೊಳ್ಳೋಣ. ರಾಜ್ ಕುಮಾರ್ ಅವರಿಗೆ ಎಷ್ಟು ಘನತೆ, ಗೌರವ ಇತ್ತೋ ಅಷ್ಟೇ ಘನತೆ, ಗೌರವ ಎಂಜಿಆರ್ ಅವರಿಗೂ ಇತ್ತು ಎಂಜಿಆರ್ ಅವರು ಸತ್ತ ತಕ್ಷಣ ಅಪೋಲೋ ಆಸ್ಪತ್ರೆಯವರು ಅವರಿಗೆ ರಕ್ಷಣೆ ಕೊಟ್ಟರು, ಸೂಕ್ತ ಬಂದೋಬಸ್ತ್ ಮಾಡಿದರು ಮತ್ತು ರೂಟ್ ಫಿಕ್ಸ್ ಮಾಡಿದರು ಹಾಗೂ ಸಕಾಲದಲ್ಲಿ ಅಂತ್ಯಸಂಸ್ಕಾರ ಮಾಡಿದರು. ಮತ್ತು ಆ ಸಮಯದಲ್ಲಿ

ಯಾರ್ಯಾರನ್ನು ಹೇಗೆಗೆ ವೈಂಡ್-ಅಪ್ ಮಾಡಬೇಕಿತ್ತೋ, ಮಾಡಿದರು. ಒಳ್ಳೆಯ ಪ್ಲಾನ್ ಮಾಡಿದ್ದರಿಂದ ರಾಜಕೀಯದಲ್ಲಿದ್ದ ರಾಷ್ಟ್ರದ ಜನರೆಲ್ಲರೂ ಹೋಗಿ ಅವರಿಗೆ ಯಾವ ರೀತಿ ಅಂತಿಮ ಗೌರವ ಸಲ್ಲಿಸಬೇಕಿತ್ತೋ, ಸಲ್ಲಿಸಿದರು ಆದರೆ, ಇಲ್ಲಿ ಯಾರೂ ಕೂಡ ಅಂತಿಮ ಗೌರವ ಸಲ್ಲಿಸುವುದಕ್ಕಾಗಲಿಲ್ಲ. ಬೆಂಗಳೂರಿನಲ್ಲಿದ್ದಂತಹ ಒಂದಷ್ಟು ಜನರು ನೂಕು-ನುಗ್ಗಲಿನಲ್ಲಿ ಬಂದು ಅಂತಿಮ ಗೌರವ ಸಲ್ಲಿಸಲು ಪ್ರಯತ್ನ ಮಾಡಿದರೆ, ಇಡೀ ರಾಜ್ಯದ ಜನತೆ ಏನು ಆಸೆ ಇಟ್ಟುಕೊಂಡಿದ್ದರು, ಕೊನೇ ಗಳಿಗೆಯಲ್ಲಿ ಡಾ:ರಾಜ್‌ರವರ ಮುಖವನ್ನು ಏನು ನೋಡಬೇಕೆಂದಿದ್ದರು, ಯಾರಿಗೂ ಕೂಡ ರಾಜ್‌ರವರ ಮುಖವನ್ನು ನೋಡುವುದಕ್ಕಾಗಲಿಲ್ಲ. ಸರ್ಕಾರ ಕೂಡ ತನ್ನ ಆಸೆ ತೀರಿಸಿಕೊಳ್ಳುವುದಕ್ಕಾಗಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸ್ಥಳಕ್ಕೆ ಹೋಗುವುದಕ್ಕಾಗಲಿಲ್ಲ. ಲಾಲ್‌ಕೃಷ್ಣ ಅಡ್ವಾನಿಯವರು ಬಂದಿದ್ದರು. ಅವರು ಈ ರಾಷ್ಟ್ರದ ಡೆಪ್ಯುಟಿ ಪ್ರೈಮ್ ಮಿನಿಸ್ಟರ್ ಮತ್ತು ಹೋಮ್ ಮಿನಿಸ್ಟರ್ ಆಗಿದ್ದವರು. ಅಂತಹವರಿಗೆ ಡಾ:ರಾಜ್ ಅವರ ಮುಖವನ್ನು ನೋಡುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡುವುದಕ್ಕಾಗಲಿಲ್ಲವಲ್ಲಾ. ಅಲ್ಲದೆ, ಚಂದ್ರಬಾಬು ನಾಯ್ಡು ಬಂದಿದ್ದರು. ಅವರೂ ಹೋಗುವುದಕ್ಕಾಗಲಿಲ್ಲ. ಅವರು ನನ್ನ ಮನೆಯಿರುವ ರಸ್ತೆಯ ಮತ್ತೊಂದು ಮನೆಯಲ್ಲಿ ಉಳಿದಿದ್ದರು. ನಮ್ಮವರ ಕ್ಷೇತ್ರದ ಎಂ.ಪಿ.ರವರ ಮನೆಯಲ್ಲಿ ಉಳಿದುಕೊಂಡಿದ್ದರು. ಪಾಪ! "ಆಗ ಬುಲಾವ್ ಬರುತ್ತದೆ, ಈಗ ಬುಲಾವ್ ಬರುತ್ತದೆಂದು" ಎಂದು ಕಾಯ್ದುಕೊಂಡು ಕುಳಿತಿದ್ದರು. ಮುಖ್ಯಮಂತ್ರಿಗಳೂ ಹೋಗುವುದಕ್ಕಾಗಲಿಲ್ಲ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ನಾನು ಒಂದು ದೊಡ್ಡ ಹೊಣೆ ಹೊರಿಸುತ್ತಿದ್ದೇನೆಂದು ಹೇಳಲು ತಯಾರಿಲ್ಲ. ಇಲ್ಲಿ ನಾವು ಆತ್ಮಶೋಧನೆ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ, ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ, ಜನನ ಉಚಿತ, ಮರಣ ಖಚಿತ. ಹುಟ್ಟು-ಸಾವುಗಳ ಮಧ್ಯದಲ್ಲಿ ನಾವು ಏನು ಸಾಧನೆ ಮಾಡುತ್ತೇವೋ, ಅದು ಬಹಳ ಮುಖ್ಯವಾದುದು. ನಾನು ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಇವೊತ್ತು ಏನು ತಪ್ಪಾಗಿದೆ, ಎಲ್ಲಿ ತಪ್ಪಾಗಿದೆ, ಅದನ್ನು ಒಪ್ಪಿಕೊಳ್ಳಬೇಕು. ಯಾರು ತಪ್ಪನ್ನು ಒಪ್ಪಿಕೊಳ್ಳುತ್ತಾರೋ, ಆ ಮನುಷ್ಯ ಎತ್ತರಕ್ಕೆ ಏರುತ್ತಾನೆ. ನನಗೆ ಅನುಭವದ ಕೊರತೆ ಇತ್ತೋ, ಪೊಲೀಸರು ವಿಫಲರಾಗಿದ್ದಾರೋ, ಇಲ್ಲವೇ ಯಾರಾದರೂ ದುಷ್ಕೃತ್ಯ ಮಾಡಿದ್ದಾರೋ, ಏನೆಂಬುದನ್ನು ದಯವಿಟ್ಟು ಹೇಳಬೇಕಾಗುತ್ತದೆ. ಮಾಧ್ಯಮದಲ್ಲಿ ಹೇಳಿದರು. "I know a lot, but won't reveal"Mr. Kumaraswamy ಮುಖ್ಯಮಂತ್ರಿಗಳಿಗೆ ಎಲ್ಲಾ ಗೊತ್ತಿದೆಯಂತೆ. ಹೇಳಲಿ ಯಾರು ಬೇಡವೆಂದು ಹೇಳಿದವರು? ಇದು

ಬೇಕು. ಈ ರಾಜ್ಯದ ಚರಿತ್ರೆಯಲ್ಲಿ ಬಹುಶ ಕಳೆದ 20–25 ವರ್ಷಗಳಲ್ಲಿ ಇಂತಹ ಘಟನೆ ಬೆಂಗಳೂರಿನಲ್ಲಿ ನಡೆದಿರಲಿಲ್ಲ. ವೀರಪ್ಪನ್ ರಾಜ್ ಕುಮಾರ್ ಅವರನ್ನು ರಾತ್ರಿ ಹೊತ್ತು ಅಪಹರಿಸಿದ ಸಂದರ್ಭ ನಮಗೆ ಗೊತ್ತಾದ ತಕ್ಷಣ, ವಿರೋಧ ಪಕ್ಷದವರನ್ನು ಬೆಳಗಿನ ಜಾವ ಯಾವ ರೀತಿ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂದು ಗೊತ್ತಿತ್ತು. ಅದೇ ರೀತಿ ತೆಗೆದುಕೊಂಡೆವು. ಆದರೆ, ಈ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಇರಲಿಲ್ಲವೇ? ಅವರುಗಳನ್ನು ಹಾಗೂ ಇತರೆ ಬೇರೆ ಪಕ್ಷಗಳ ಮುಖಂಡರುಗಳನ್ನು ಕರೆಸಿ, ಈ ರೀತಿಯಾಗಿದೆ, ಏನು ಮಾಡಬೇಕೆಂದು ಕೇಳಿದ್ದರೆ, ಬಹುಶಃ ಎಲ್ಲರೂ ಸಲಹೆಗಳನ್ನು ನೀಡುತ್ತಿದ್ದರು. ಆದರೆ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ, ಕ್ಯಾಬಿನೆಟ್ ಕರೆದು ಯಾರನ್ನೂ ಕೇಳುವುದಕ್ಕಾಗಲಿಲ್ಲ, ಹಿರಿಯರನ್ನೂ ಕೇಳುವುದಕ್ಕಾಗಲಿಲ್ಲ. ಇದರ ತೀರ್ಮಾನವನ್ನು ಯಾರು ತೆಗೆದುಕೊಂಡರು? ಪರಿಸ್ಥಿತಿ ನಿಮ್ಮ ಕಂಟ್ರೋಲ್‌ನಲ್ಲಿ ಇರಲಿಲ್ಲವೆಂದರೆ, ಪೊಲೀಸರಿಗೆ ಹೇಗೆ ನಿಶ್ಯಕ್ತಿ ಬಂತು? ಪೇಪರ್‌ನಲ್ಲಿ ಒಂದು ಕಡೆ ಓದಿದೆವು. ಪೋಲೀಸರು ಹೇಳಿದ್ದಾರೆ. ಇದು ಬಹಳ ಶಾಂತ ರೀತಿಯಿಂದ ಆಯಿತು ಎಂದು. ಒಳ್ಳೆಯದೇ ಆಯಿತು. ಆದರೆ ಕೊನೆಗೆ ಇಷ್ಟರಮಟ್ಟಿಗೆ ಪೊಲೀಸರನ್ನು ಬಿಡುವುದಾದರೆ, ಈ ರಾಜ್ಯದ ಕಾನೂನು ವ್ಯವಸ್ಥೆ ಯಾವ ಮಟ್ಟಕ್ಕೆ ಹೋಯಿತೆಂದರೆ, ಅವರು ಏನು ಮೊರೇಲ್ ತೆಗೆದುಕೊಂಡಿದ್ದಾರೆ, ಈ ಪೊಲೀಸ್ ಅಧಿಕಾರಿಗಳು ಇನ್ನು ಇಪ್ಪತ್ತು ವರ್ಷಗಳಾದರೂ ನಾವು ಮೊರೇಲ್ build up ಮಾಡುವುದಕ್ಕಾಗುವುದಿಲ್ಲ. ಇಲ್ಲಿ ಅಜಯ್‌ಕುಮಾರ್‌ಸಿಂಗ್‌ರಂತಹ ಅಧಿಕಾರಿಗಳಿದ್ದಾರೆ, I am very proud of such officers which Karnataka has ಅಂತಹ efficient ಅಧಿಕಾರಿಗಳು ಈ ರಾಜ್ಯದಲ್ಲಿದ್ದಾರೆ. ನಮ್ಮಲ್ಲಿ ಒಂದು ಕಡೆ ಒಂದು ಸ್ಟೇಟ್‌ಮೆಂಟ್ ಕೂಡ ಇಲ್ಲ. " ನಮಗೆ ಪೋಲೀಸರ ಶಾರ್ಟೇಜ್ ಇತ್ತು, ನಾವು ತಮಿಳುನಾಡಿಗೆ ಕಳೂಹಿಸಿದ್ದೆವು, ಕೇರಳಕ್ಕೆ ಕಳೂಹಿಸಿದ್ದೆವು ಅಂತ" ಯಾವ ಸ್ಟೇಟ್‌ಮೆಂಟ್ ಕೂಡ ಇಲ್ಲ. Bangalore is a base for the defence. ಏನೇನು ಬೇಕಾಗಿತ್ತೋ, ಅದೆಲ್ಲ ಇದೆ ಬಿಎಸ್‌ಎಫ್ ಇದೆ, ಸಿಆರ್‌ಎಫ್ ಇದೆ ಮತ್ತೆ ಏನು ಬೇಕೋ, ಐದು ನಿಮಿಷಕ್ಕೆ ಐವತ್ತು ಸಾವಿರ ಪೋಲೀಸರು ಬಂದು ನಿಮಗೆ ರಕ್ಷಣೆ ಕೊಡುತ್ತಾರೆ. ಈ ರಾಜ್ಯದ ನೆಲ, ಜಲ, ಭೂಮಿಗೆ ರಕ್ಷಣೆ ನೀಡುತ್ತಾರೆ. ಏರ್ ಕಂಡಿಷನ್ಡ್ ಸಿಟಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ಅವರು ಇಲ್ಲಿಗೆ ಬಂದು ಸೇವೆ ಮಾಡುವುದಕ್ಕೆ ಸಿದ್ಧರಿಲ್ಲವೆ? ಅವರನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ಎರಡು ನಿಮಿಷದಲ್ಲಿ ಕರೆದಿದ್ದರೆ, within half an hour, they would have deployed. ರಾತ್ರಿ

ನಿಮಗೆ ಅವಕಾಶವಿತ್ತು, ಸಾಯಂಕಾಲ ಗಲಾಟೆಯಾಗಿದ್ದು ಗೊತ್ತಾಯಿತು. ಪೊಲೀಸರಿಗೆ ಏಟು ಬಿತ್ತು. ಕಮೀಷನರ್‌ಗೆ ಏಟು ಬಿತ್ತು ಇನ್ನೊಬ್ಬರಿಗೆ ಏಟು ಬಿತ್ತು ರಾಜ್‌ರವರ ಮನೆ ಮುಂದೆ ಗಲಾಟೆಯಾಯಿತು. ಸ್ಟೇಡಿಯಂನಲ್ಲಿ ಶವವನ್ನು ಇಟ್ಟಿರಿ. Whole night you could have planned. Well plan ಮಾಡಬಹುದಿತ್ತಲ್ಲಾ. ನಿಮಗೆ ಬೇಡವೆಂದು ಯಾರು ಹೇಳಿದ್ದು? ನಿಮ್ಮ ಕೈಯನ್ನು ಕಟ್ಟಿದವರು ಯಾರು? ಇವೆಲ್ಲವೂ ದೊಡ್ಡ ಅನುಮಾನಕ್ಕೊಳಗಾಗಿದೆ. ಈಗಾಗಲೇ ಉಪ ಮುಖ್ಯಮಂತ್ರಿಗಳು ಅವರದೇ ಭಾಷೆಯಲ್ಲಿ ಹೇಳಿದರು. ಅವರ ಭಾಷೆ ಏನೆಂದು ನನಗೆ ಅರ್ಥವಾಗಲಿಲ್ಲ. ಷಡ್ಯಂತ್ರ, ಮತ್ತೊಂದು ಎಂದರು. ಆ ಷಡ್ಯಂತ್ರವೇನೆಂದು ನನಗೆ ಅರ್ಥವಾಗುತ್ತಿಲ್ಲ. ಪ್ರಕಾಶ್‌ರವರೆ, ನನಗೆ ನೆನಪು ಬರುತ್ತದೆ. ಪ್ಲೂಟೋ ಒಂದೆಡೆ ಹೇಳುತ್ತಾನೆಃ "Oh God give me strength to be protected from my friends, so that I can take care of enemies." ಸ್ನೇಹಿತರುಗಳಿಂದ ಏನಾದರೂ ಹೆಚ್ಚು-ಕಡಿಮೆಯಾಯಿತೇ? ಪಕ್ಕದ ಮನೆಯವರಿಂದ ಏನಾದರೂ ಹೆಚ್ಚು-ಕಡಿಮೆಯಾಯಿತೇ? ಜೊತೆಯಲ್ಲಿದ್ದವರಿಂದ ಏನಾದರೂ ಹೆಚ್ಚು-ಕಡಿಮೆಯಾಯಿತೇ? ಇಲ್ಲವೇ ಎದುರುಗಡೆಯಿಂದ ಏನಾದರೂ ಹೆಚ್ಚು-ಕಡಿಮೆಯಾಯಿತೇ? ತನ್ನ ಸ್ನೇಹಿತರುಗಳಿಂದಲೇ ಏನಾದರೂ ತೊಂದರೆಯಾಗುತ್ತದೆಂದು ಹೊರಗಡೆಯಿಂದ ಹೋರಾಟ ಮಾಡುವಷ್ಟು ಶಕ್ತಿ ನನಗೆ ಸಿಗಲೆಂದು, ಸ್ನೇಹಿತರಿಂದ ರಕ್ಷಣೆ ಮಾಡು ಎಂದು ಭಗವಂತನನ್ನು ಕೇಳಿದರು. ಹಾಗೇನಾದರೂ ನಿಮ್ಮಲ್ಲಿ ಹೆಚ್ಚು-ಕಡಿಮೆಯಾಯಿತೇ? ನಿಮ್ಮ ಸ್ನೇಹಿತರಿಂದ, ನಿಮ್ಮದೇ own party ಯಿಂದ ಹೆಚ್ಚು-ಕಡಿಮೆಯಾಯಿತೇ? ದಯವಿಟ್ಟು ರಿವೀಲ್ ಮಾಡಿ. ನಮಗೇನೂ ಬೇಜಾರಿಲ್ಲ. ನಿಮ್ಮ-ನಿಮ್ಮ ಮೇಲೇ ಹಾಕಿಕೊಂಡರೂ, ಸತ್ಯಾಂಶವಿದ್ದರೆ ಹೇಳಿ. ನಾವು ಅದನ್ನು ಕ್ವೆಶ್ಚನ್ ಮಾಡಲು ಹೋಗುವುದಿಲ್ಲ. ಜನರಿಗೆ ಇವೊತ್ತು ಸತ್ಯಾಂಶ ಬೇಕಾಗುತ್ತದೆ. ನಾನು ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುವುದಿಷ್ಟೆ. ದಯವಿಟ್ಟು ಎಡಿಟೋರಿಯಲ್ ನೋಡಿ. ನಾವೆಲ್ಲರೂ ರಾಜಕಾರಣದ ದೃಷ್ಟಿಯಿಂದ ಮಾತನಾಡುತ್ತೇವೆ. ನಮ್ಮಲ್ಲಿ ಏನೋ ಒಂದು ಉದ್ದೇಶವಿಟ್ಟುಕೊಂಡು ಮಾತನಾಡುತ್ತೇವೆ. ನಿಮ್ಮ ಆಡಳಿತ ಸರಿಯಿಲ್ಲವೆಂದು ನಾವು ಮಾತನಾಡುತ್ತೇವೆ. ತಾವು ಮಾಧ್ಯಮದಲ್ಲಿ ಆ ಸಂದರ್ಭದಲ್ಲಿ ಇಂಟರ್‌ನ್ಯಾಷನಲ್ ಮಾಧ್ಯಮವಿರಬಹುದು, ರಾಷ್ಟ್ರೀಯ ಮಾಧ್ಯಮಗಳಿರಬಹುದು, ಕರ್ನಾಟಕದ ಮಾಧ್ಯಮಗಳಿರಬಹುದು, ಎಡಿಟೋರಿಯಲ್ ತೆಗೆದು ನೋಡಿ. ತಮಗೆ ಅನುಭವವಾಗಲಿ. ಇದೇನು ಕೊರತೆಯಾಯಿತು, ದಯವಿಟ್ಟು ತಾವು ಎಡಿಟೋರಿಯಲ್ ಓದಿ. ಎಲ್ಲಾ ಪೇಪರ್‌ಗಳಲ್ಲೂ ಬರೆದಿದ್ದಾರೆ ಏನೇನು

ಎಡಿಟೋರಿಯಲ್ ಬರೆದಿದ್ದಾರೆ, ಎಲ್ಲೆಲ್ಲಿ ನೀವು ವಿಫಲರಾಗಿದ್ದೀರಿ, ಏನು ಮಾಡಬೇಕಾಗುತ್ತದೆ, ದಯವಿಟ್ಟು ಅಷ್ಟನ್ನೂ ನೋಡಿದರೆ ಸಾಕು ಇನ್ನೇನೂ ಬೇರೆ ಹೇಳಲು ತಯಾರಿಲ್ಲ. ಇದು ಸಿಬಿಐ ತನಿಖೆಯಾದರೆ ಮಾತ್ರ ನ್ಯಾಯ ಒದಗಿಸಿಕೊಡಲು ಸಾಧ್ಯ. ಎಂಟು ಜನರು ಏನು ಸತ್ತಿದ್ದಾರೆ, ಅದು ಒಂದು ಕಡೆ ಬೇರೆ ಪ್ರಶ್ನೆ ಎಲ್ಲಿ ವಿಫಲರಾಗಿದ್ದೇವೆ? ಇಂತಹ ವರನಟನ ಅಂತಿಮ ಸಂಸ್ಕಾರದ ಕಾಲದಲ್ಲಿ ಪರಿಸ್ಥಿತಿಯನ್ನು ನಾವು ಸರಿಯಾಗಿ ನಡೆಸಿಕೊಳ್ಳುವುದಕ್ಕಾಗದೆ, ಅವರ ಕುಟುಂಬಕ್ಕೂ ನೋಡಲು ಅವಕಾಶ ಆಗದೇ, ಈ ರಾಜ್ಯದ ಮುಖ್ಯಮಂತ್ರಿಗಳಾದ ಒಬ್ಬ ದೊರೆಗೆ ಅವರ ಅಂತಿಮ ದರ್ಶನದ ಅವಕಾಶ ಸಿಗಲಿಲ್ಲವೆಂದರೆ ಈ ರಾಜ್ಯದಲ್ಲಿ ಆಡಳಿತ ಎಲ್ಲಿದೆ? ಆಡಳಿತ ಎಲ್ಲಾ ಕುಸಿದು
ಹೋಗಿದೆ.ಜನರ

8.00 AM

ಕೈಯಲ್ಲಿ ಅಧಿಕಾರ ಇಲ್ಲ, ನಿಮ್ಮ ಕೈಯಲ್ಲಿ ಅಧಿಕಾರ ಇದೆ. ಅಧಿಕಾರ ನಡೆಸಲು ಆ ಭಗವಂತ ನಿಮಗೆ ಅವಕಾಶ ಕೊಟ್ಟಿದ್ದಾನೆ. ಇವತ್ತೂ ಕೂಡ ಏನು ತಪ್ಪಾಗಿದೆಯೋ, ಆ ತಪ್ಪನ್ನು ಒಪ್ಪಿಕೊಂಡು ತಮ್ಮ ಹೃದಯ ಶ್ರೀಮಂತಿಕೆಯನ್ನು ತೋರಿಸಬೇಕೆಂದು ಹೇಳಿ, ಇದರ ಬಗ್ಗೆ ಸಿ.ಬಿ.ಐ. ತನಿಖೆ ಮಾಡಬೇಕೆಂದು ಒತ್ತಾಯಿಸುತ್ತೇನೆ. ಇನ್ನೂ ಅನೇಕ ವಿಚಾರಗಳನ್ನು ನಾನು ಹಂಚಿಕೊಳ್ಳಬೇಕೆಂದಿದ್ದೆ. ಆದರೆ ಬೇರೆ ಸಂದರ್ಭದಲ್ಲಿ ಅವುಗಳನ್ನು ತಿಳಿಸುತ್ತೇನೆ. ಇನ್ನೂ ಕೆಲವು ನನ್ನ ಸ್ನೇಹಿತರು ಆ ವಿಚಾರಗಳನ್ನು ಹೇಳುವವರಿದ್ದಾರೆ. ಈ ಘಟನೆ ಬಗ್ಗೆ ಸಿ.ಬಿ.ಐ. ತನಿಖೆಗೆ ಒತ್ತಾಯ ಮಾಡಿ ನಾನು ನನ್ನ ಮಾತುಗಳನ್ನು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಸನ್ಮಾನ್ಯ ಅಧ್ಯಕ್ಷರೆ, ನಿಯಮ 69ಕ್ಕೆ convert ಮಾಡಿ ನಮಗೆಲ್ಲಾ ಮಾತನಾಡಲು ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸುತ್ತೇನೆ. ಏಕೆಂದರೆ, adjourment motionಗೆ ಅವರು ಮಾತ್ರ ಸಹಿ ಮಾಡಿದ್ದರು, ನಾವು ಮಾಡಿರಲಿಲ್ಲ. ಮಾನ್ಯ ಅಧ್ಯಕ್ಷರೆ, ನಿನ್ನೆ ಮಾತನಾಡುತ್ತಲೇ ನಾವು ಇದರ ಬಗ್ಗೆ ಹೇಳಿದ್ದೆವು, ಇದು ಏಕೆ ಆಯಿತು. ಎಂದು ಒಂದು ಆಲೋಚನೆ ಮಾಡುವುದಕ್ಕೆ ಹೋದಾಗ ಅನೇಕ ಅಂಶಗಳ ಬಗ್ಗೆ ನಾವು ಮಾತನಾಡಬೇಕಾಗುತ್ತದೆ. ಮಾನ್ಯ ಶಿವಕುಮಾರ್‌ರವರು ಮಾತನಾಡುತ್ತಾ ಎಂ.ಜಿ.ಆರ್. ಸತ್ತ ದಿವಸ ನಡೆದಂತಹ ಘಟನೆಗಳ ಬಗ್ಗೆಯೂ ಸಹ ಹೇಳಿದರು. ಅವತ್ತೂ ಜನ ಸತ್ತರು. ಆದರೆ ಭಾವವೇಶ ಅಥವಾ ಭಾವೋದ್ವೇಗದಲ್ಲಿ ಅವರು ಸತ್ತಿದ್ದರು. ಇವತ್ತೂ ಜನ ಸತ್ತರು. ನಾವು ಅಂದು

ಬೆಂಗಳೂರಿಗೆ ಬರಲಿಕ್ಕಾಗಲಿಲ್ಲ. ಆದರೆ ರಾಜ್‌ಕುಮಾರ್ ಸತ್ತಂತಹ ಘಟನೆಯನ್ನು ಒಂದು ನಿಮಿಷವನ್ನೂ ಬಿಡದೆ ಊರುಗಳಲ್ಲಿ ಕುಳಿತು ಟಿ.ವಿ.ಯಲ್ಲಿ ನೋಡುತ್ತಿದ್ದೆವು. ಮಾನ್ಯ ಕುಮಾರ್ ಬಂಗಾರಪ್ಪನವರು ಹೇಳಿದ್ದಕ್ಕಿಂತ ಹೆಚ್ಚು ನೋಡಿದವರು ನಾವು ಇದರಲ್ಲೇನೂ ಎರಡು ಮಾತಿಲ್ಲ. ಇಲ್ಲಿ ರಾಜ್‌ಕುಮಾರ್ ಸತ್ತರು ಎಂದು ಯಾರೂ ಸೀಮೆಎಣ್ಣೆ ಹಚ್ಚಿಕೊಂಡು ಸಾಯಲಿಲ್ಲ. ರಾಜ್‌ಕುಮಾರ್ ಸತ್ತರು ಎಂದು ಯಾರೂ ನೇಣು ಹಾಕಿಕೊಳ್ಳಲಿಲ್ಲ. ರಾಜ್ ಕುಮಾರ್ ಸತ್ತರು ಎಂದು ಯಾರೂ ಕುತ್ತಿಗೆ ಹಿಸುಕಿಕೊಂಡು ಸಾಯಲಿಲ್ಲ. ಆ ಅಭಿಮಾನ, ಆ ಪ್ರೀತಿ, ಆ ಭಾವನೆ ಕರ್ನಾಟಕದಲ್ಲಿ ವ್ಯಕ್ತವಾಗಲಿಲ್ಲ. ಕರ್ನಾಟಕದಲ್ಲಿ ರಾಜ್‌ಕುಮಾರ್‌ರನ್ನು ವೀರಪ್ಪನ್ ಹೊತ್ತುಕೊಂಡು ಹೋದಾಗ, ಏನೋ ಒಂದು ಗಂಡಾಂತರ ಆಗುತ್ತದೆಂದು ನಾವು ಕಾದಿದ್ದೆವು, ಆದರೆ ಆಗ ಅದು ಆಗಲಿಲ್ಲ. ಅಷ್ಟು ದಿವಸ ಅವರು ವೀರಪ್ಪನ್‌ರವರ ಕ್ಯಾಂಪ್‌ನಲ್ಲಿದ್ದಾಗ ಕೂಡ ಆಗಲಿಲ್ಲ. ಆಗ ಸರ್ಕಾರದವರು ಸುಪ್ರೀಂ ಕೋರ್ಟ್ ಮುಂದೆ affidavit ಹಾಕಿದ್ದರು. ಕರ್ನಾಟಕದಲ್ಲಿ Law and Order ಸ್ಥಿತಿ maintain ಮಾಡುವ ಸ್ಥಿತಿ ಬಹಳ ಕಷ್ಟ ಇದೆ, ಒಂದಷ್ಟು under trail ಖೈದಿಗಳನ್ನು ವೀರಪ್ಪನ್ ಬೇಡಿಕೆಯಂತೆ ತಾವು release ಮಾಡಿ ಎಂದು affidavit ಹಾಕಲಾಗಿತ್ತು. ಅವತ್ತೂ ಕೂಡ ಸುಪ್ರೀಂ ಕೋರ್ಟ್ ಗಲಾಟೆ ಎಲ್ಲಿ ಆಗುತ್ತದೆ? ಹೇಗಾಗುತ್ತದೆ? ಹೇಳಿ ಎಂದು ಕೇಳಿತ್ತು. ಏನೇ ನಿರೀಕ್ಷೆ ಮಾಡಿದ್ದರೂ ಕರ್ನಾಟಕದ ಜನ ಸಂಯಮವನ್ನು ಮೀರಿ ವರ್ತಿಸಿದಂತಹ ಘಟನೆಗಳಿಲ್ಲ. ಡಾ: ರಾಜ್‌ಕುಮಾರ್‌ರವರು ಸತ್ತಾಗ, ನಿಜ, ಆ ಕ್ಷಣಕ್ಕೆ ತೀರ್ಮಾನ ತೆಗೆದುಕೊಳ್ಳುವುದು ಸ್ವಲ್ಪ ಕಷ್ಟವಾಗಿತ್ತು. ಆ ಕುಟುಂಬದವರು ತೆಗೆದುಕೊಳ್ಳಬೇಕೋ? ಇನ್ನೊಂದು ಸರ್ಕಾರದವರು ತೆಗೆದುಕೊಳ್ಳಬೇಕಾ? ಸರ್ಕಾರದವರೇ ತೆಗೆದುಕೊಂಡರೆ ಕುಟುಂಬದವರ ಭಾವನೆ ಏನಾಗುತ್ತದೆ ಅಥವಾ ಕುಟುಂಬದವರು ತೆಗೆದುಕೊಂಡರೆ ಇಂತಹ ಸನ್ನಿವೇಶಗಳನ್ನು ನಿರ್ವಹಣೆ ಮಾಡುವುದು ಹೇಗಾಗುತ್ತದೆ ಎನ್ನುವಂತಹ ಸಮಸ್ಯೆಗಳು ಕಾಡಿರುತ್ತವೆ. ನಾನು ಇಷ್ಟೇ ಅಂದುಕೊಂಡಿದ್ದು. ನನಗನ್ನಿಸಿದ್ದು ಏನೆಂದರೆ ಒಂದಷ್ಟು ಹೊತ್ತು ತಾವು ಅವರ ಸಾವನ್ನು ಪ್ರಚಾರಪಡಿಸಬಾರದಿತ್ತು. ಆ ಸಮಯದಲ್ಲಿ ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ, ಹೇಗಾದರೂ ಮಾಡಿ ಈ ವಿಷಯವನ್ನು ಹೇಗೆ manage ಮಾಡಬೇಕಾಗಿತ್ತು ಎಂದು ಎಲ್ಲಿಯಾದರೂ ಚರ್ಚೆಯಾಗಬೇಕಾಗಿತ್ತು. ಎರಡನೇಯದಾಗಿ, ತಕ್ಷಣ ಅವರ ಮನೆಯ ಹತ್ತಿರ ತೆಗೆದುಕೊಂಡು ಹೋಗಿದ್ದು, ನಿಜವಾಗಿ ದೊಡ್ಡ

ದುರಂತ. ಇದರಲ್ಲಿ ಎರಡನೆ ಮಾತೇ ಇಲ್ಲ. ಎಲ್ಲಾದರೂ ಸಾರ್ವಜನಿಕವಾಗಿಟ್ಟು, ಒಂದೈದು ಗಂಟೆ, ಹತ್ತು ಗಂಟೆ, ಆ mob ಎಲ್ಲಾ diffuse ಆಗುವವರೆಗೂ ಕಾದು, ಆನಂತರ ಮನೆಗೆ ತೆಗೆದುಕೊಂಡು ಹೋಗಿದ್ದಿದ್ದರೆ, ಇಂತಹ ಸನ್ನಿವೇಶ ಸೃಷ್ಟಿಯಾಗುತ್ತಿರಲಿಲ್ಲ. ಇದು ನನ್ನ ನೇರವಾದಂತಹ ಅಭಿಪ್ರಾಯ. ತಕ್ಷಣ ಅಲ್ಲೇಕೆ ಹೋದರೋ ಎಂದು ನಮಗೆ ಅರ್ಥವಾಗಲಿಲ್ಲ. ಎರಡನೆಯದಾಗಿ, ನಾವು ನೋಡುತ್ತಿದ್ದೆವು, ಯಾರೂ decision ತೆಗೆದುಕೊಳ್ಳುತ್ತಿರಲಿಲ್ಲ. ಜನಗಳೇ decision ತೆಗೆದುಕೊಳ್ಳುತ್ತಿದ್ದರು, body ಅಲ್ಲಿಗೆ ಹೋಗಬೇಕು. ಇಲ್ಲಿಗೆ ಹೋಗಬೇಕು, ನಾವು ಹೋಗಬೇಕು? ಬೆಳಿಗ್ಗೆ ಹೋಗಬೇಕಾ? ಸಾಯಂಕಾಲ ಹೋಗಬೇಕಾ ಎಂದು ಅವರೇ ನಿರ್ಧರಿಸುತ್ತಿದ್ದರು. ನಮ್ಮೆಲ್ಲರ ಮನಸ್ಸಿಗೆ ಬಂದದ್ದು, ಅವರು ಖಾಸಗಿಯಾಗಿ ಇದನ್ನು ಅಂತ್ಯ ಸಂಸ್ಕಾರ ಮಾಡುತ್ತಾರೆ, ಅವರ ಅಣ್ಣಾನವರ ಜಾಗ, ಅವರ ತಾಯಿಯವರ ಜಾಗಕ್ಕೆ ಹೋಗುತ್ತಾರೆ ಎಂದು ಬಹಳ ಪ್ರಬಲವಾಗಿ ನಾವು ನಂಬಿದ್ದೆವು. ಬಹುಶಃ ಆ ಕೆಲಸ ಆಗಿದ್ದರೆ, ಈ ಘಟನೆಗಳು ನಡೆಯುತ್ತಿರಲಿಲ್ಲವೆಂಬುದು ನನ್ನ ಸ್ಪಷ್ಟವಾದಂತಹ ಅಭಿಪ್ರಾಯ. ಏಕೆಂದರೆ, ಇಲ್ಲಿಂದ ಅಲ್ಲಿಯವರೆಗೆ ಹೋಗುವಾಗ ಸುಮಾರು ಜನ ಖಾಲಿಯಾಗಿ ಬಿಡುತ್ತಿದ್ದರು. ಅದರಲ್ಲೇನೂ ಎರಡು ಮಾತಿಲ್ಲ. Heart of the City ನೀವು cremate ಮಾಡಲಿಕ್ಕೆ ತೀರ್ಮಾನ ತೆಗೆದುಕೊಂಡಿದ್ದು ಏಕೋ ನಮ್ಮ ದೃಷ್ಟಿಯಲ್ಲಿ ಸರಿ ಎಂದು ಕಾಣಿಸಲಿಲ್ಲ. ಎಂತಹ ಜಾಗ ಆಯ್ಕೆ ಮಾಡಿಕೊಂಡು ಬಿಟ್ಟಿರಿ ಎಂದರೆ. ಏನೂ ಮಾಡಲಾರದಂತಹ ಸ್ಥಿತಿ ಇರುವಂತಹ ಜಾಗವನ್ನು ನೀವು ಆಯ್ಕೆ ಮಾಡಿಕೊಂಡು ಬಿಟ್ಟಿರಿ. ಎಲ್ಲಾ ಕಡೆಯಿಂದ, ಏನು ಬೇಕಾದರೂ ಅಲ್ಲಿ ಆಗಬಹುದಾಗಿತ್ತು. ಏಕೆಂದರೆ ನಮಗೆ ಗೊತ್ತು, ದಿವಸ ಆ ರೋಡಿನಲ್ಲಿ ಓಡಾಡುವವರಿಗೆ ಆ ಜಾಗದ ಪರಿಸ್ಥಿತಿ ಗೊತ್ತು. ನಾನು Police Commissioner ರವರಿಗೆ ಒಂದು ದಿವಸ ಈ ಬಗ್ಗೆ ಹೇಳಿದ್ದೆ. ತುಮಕೂರಿನಿಂದ ನಾವು ಯಶವಂತಪುರಂ ದಾಟುವುದರೊಳಗೆ ಬಹಳಷ್ಟು ಸಮಯ ಹಿಡಿಯುತ್ತದೆ. ದಿನನಿತ್ಯ ಸಮಸ್ಯೆಗಳು ಇರುವಂತಹ ಜಾಗಗಳು ಅವು. ಸಾರ್, ಇಲ್ಲಿ ಆಯ್ಕೆ ಮಾಡಿಕೊಂಡ ಕಾಲದಲ್ಲಾದರೂ ಒಂದು ಸ್ಪಷ್ಟವಾಗಿ ನಿರ್ಧಾರವಾಗಬೇಕಾಗಿತ್ತು. ನಾವು ಇವತ್ತು ಜನ ಸತ್ತು ಹೋಗಿದ್ದಾರೆ, ನಾವೆಲ್ಲಾ ಇಲ್ಲಿ ಸಂತಾಪವನ್ನು ವ್ಯಕ್ತಪಡಿಸುತ್ತೇವೆ, ಅವರಿಗೆ ಮತ್ತು ಮನೆಯವರಿಗೆ ಏನಾದರೂ ಕೊಡಬೇಕು ಎನ್ನುತ್ತೇವೆ. ನಾನು ಬಹಳ ಪ್ರಾಮಾಣಿಕವಾಗಿ ಹೇಳುತ್ತೇನೆ, ಜನಗಳಿಗಿಂತ ಪೊಲೀಸರ ಸ್ಥಿತಿ ಅವತ್ತು ಆತಂಕಕಾರಿಯಾಗಿತ್ತು. ನಾವು ಇದನ್ನು ನೋಡುತ್ತಿದ್ದೆವು. ಪೊಲೀಸ್‌ನವರ ಸ್ಥಿತಿಯೇ ಜನಗಳಿಗಿಂತ

ಆಂತಕಕಾರಿಯಾಗಿತ್ತು. ಇದು ಭಾವವೇಶ, ಭಾವೋದ್ವೇಗ ಅಲ್ಲ ತಯಾರಿ ಮಾಡಿಕೊಂಡು ಬಂದಿದ್ದರು. ಕೈಯ್ಯಲ್ಲಿ ಕಲ್ಲು ಇತ್ತು ಕೈಯ್ಯಲ್ಲಿ ರಾಡ್ ಇತ್ತು, ಏನೇನು ಬೇಕೋ ಎಲ್ಲಾ ಅವತ್ತು ಇತ್ತು. ರಾಜ್‌ಕುಮಾರ್‌ರವರು ಸತ್ತಿದ್ದಾರೆ, ನಾವು ಇದನ್ನು ಸಮಾಧಾನವಾಗಿ ನಿರ್ವಹಣೆ ಮಾಡಬೇಕು, ನಾವೇನಾದರೂ ಮಾಡಿ ಪರಿಸ್ಥಿತಿಯನ್ನು ಸಮಾಧಾನಕ್ಕೆ ತರಬೇಕು ಎಂದು ಪೋಲೀಸರು ನಿರ್ವಹಣೆ ಮಾಡುವ ಕಾಲ ಆದಾಗಿರಲಿಲ್ಲ. ಪೋಲೀಸ್‌ನವರು ರಾಜಕಾರಣಿಗಳು, ಪೋಲೀಸ್‌ನವರು–ಸ್ವಾಮಿಗಳು ಎಲ್ಲರೂ ಶಾಂತಿ ಸಂದೇಶವನ್ನು ರಾಜ್ಯಕ್ಕೆ ಕೊಡುವುದಕ್ಕಾಗುವುದಿಲ್ಲ. ಒಬ್ಬರು ಬಿಗಿಯಾಗಿರಬೇಕು, ಒಬ್ಬರು ಸಮಾಧಾನವಾಗಿರಬೇಕು. ಅದನ್ನೇ KGB ಯವರು ಮಾಡುತ್ತಾರೆ ಎಂದು ಹೇಳುವುದು. ಒಬ್ಬರು ಒದ್ದಂಗೆ ಮಾಡಬೇಕು, ಒಬ್ರರು ಅತ್ತಂಗೆ ಮಾಡಬೇಕು. ನಾನು ಕುಳಿತುಕೊಂಡು ಅಳಬೇಕು, ಕಮಿಷನವರ್‌ರವರಿಗೆ ಬೇಡ ಕಣಯ್ಯ ನೀನು ಹೊಡೆಯಬೇಡ, ನಾನು ನೋಡಿಕೊಳ್ಳುತ್ತೇನೆ ಬಿಡು ಎನ್ನಬೇಕು. ನೀವು ಇನ್ನೊಂದು ಕಡೆ ಒದೆಯುತ್ತಿದರೆ Law and Order maintain ಆಗುತ್ತಿತ್ತು ಎಲ್ಲರೂ ಶಾಂತಿ ಸಂದೇಶ ಸಾರುವ ದೂತರು ಆಗಿಬಿಟ್ಟೆವು. ನಾವು ನೋಡುತ್ತಿದ್ದೆವು, ನಾಯ್ಡುರವರ ಸ್ಥಿತಿ, ಅಶೋಕ್‌ರವರ ಸ್ಥಿತಿಯನ್ನು ಟಿ.ವಿ.ಯಲ್ಲಿ ನೋಡಿಬಿಟ್ಟು, ಇಷ್ಟು ಗಂಭೀರವಾಯಿತೇ ಎಂದು ನಾವು ಅಂದುಕೊಂಡೆವು. ನಿಜವಾಗಿ ನೋಡುತ್ತಿದ್ದೆವು. ಬೆಂಗಳೂರಿನಲ್ಲಿ ಇದ್ದು ಶಾಸಕರಾಗಿ, ಮಂತ್ರಿಗಳಾಗಿ ಅಸಹಾಯಕರಾಗಿ ನಿಲ್ಲುವ ಸ್ಥಿತಿ ಬಂತು ಎಂದರೆ ಬಹಳ ವ್ಯಸನವಾಗುತ್ತದೆ. ನಾನು ಬಹಳ ಮೂಲಭೂತವಾಗಿ ಹೇಳುತ್ತೇನೆ, ಬೆಂಗಳೂರು ನಮ್ಮ ಹತೋಟಿಯನ್ನು ಮೀರಿ ಹೋಗಿ ಬಹಳ ದಿವಸಗಳಾಯಿತು. ಎಲ್ಲಿಯಾದರೂ ಒಂದು ಕಡೆ ಇದು ಕಂಟ್ರೋಲ್ ಆಗಬೇಕು. ಇದು ಭಾವನೆಗಳನ್ನು ವ್ಯಕ್ತ ಮಾಡಿಸುವಂತಹ ರೀತಿ ಅಲ್ಲವೇ ಅಲ್ಲ. ಇಡೀ ರಾಜ್ಯದ ಗೌರವವನ್ನು, ಇಡೀ ರಾಜ್ಯದ ಮರ್ಯಾದೆಯನ್ನು ಪಣಕ್ಕಿಟ್ಟ ದಿವಸ ಆಗಿ ಬಿಟ್ಟಿತು ಅವತ್ತು ನಾವು ಸತ್ಯವಾಗಿ ತಲೆ ತಗ್ಗಿಸಬೇಕು ಸಾರ್. ಕುಟುಂಬದವರಿಗೆ ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಲಿಕ್ಕೆ ಆಗಲಿಲ್ಲ, ಸನ್ಮಾನ್ಯ ಮುಖ್ಯಮಂತ್ರಿಗಳು ಹೋಗಲಿಕ್ಕೆ ಆಗಲಿಲ್ಲ. ಯಾರನ್ನು ಯಾರು ಹೊಡೆಯುತ್ತಾರೋ? ನಾಯಕತ್ವಕ್ಕೆ ಬೆಲೆಯಿಲ್ಲ ರಾಜ್ಯದ ಮುಖ್ಯಮಂತ್ರಿಗಳು ಅಂದರೆ ಗೌರವವಿಲ್ಲ. ಉಪ ಮುಖ್ಯಮಂತ್ರಿಗಳು ಎಂದರೆ ಗೌರವವಿಲ್ಲ. ಯಾರು ಹೀಗೆ behave ಮಾಡಿದರೋ ಎಂದು ನಮಗೆ ಗೊತ್ತಾಗಲಿಲ್ಲ. ಈಗೇನು ಆಗಬಾರದ್ದು ಆಗಲಿಲ್ಲ. ನಾವೇ ಅವತ್ತು ರೆಕಾರ್ಡ್ ಮಾಡಿ ಇಡುತ್ತಿದ್ದೆವು. ಗ್ರಹಚಾರ ಏನೆಂದರೆ, ಈ DTH ಬಂದ ಮೇಲೆ ಅದು ರೆಕಾರ್ಡ್ ಆಗುವುದಿಲ್ಲ. ಮಾಮೂಲಿ ಟಿ.ವಿ.ಗಳಲ್ಲಿ ಆಗಿದ್ದರೆ ಅವತ್ತು ನೀಟಾಗಿ

ನಮ್ಮ ಕಡೆಯಲ್ಲೇ ಎಲ್ಲಾ ರೆಕಾರ್ಡ್ ಸಿಕ್ಕಿ ಬಿಡುತ್ತಿದ್ದವು. ಹೇಗೆ ಕಾಣುವುದು ಸಾರ್ ನೋಡಿದರೆ. ಆ ಅವೇಶ ಏನು ಹೇಳುತ್ತೀರಿ? ಆ ಹುಮ್ಮಸ್ಸು ಏನು ಹೇಳುತ್ತೀರಿ? ಕಲ್ಲು ತೆಗೆದುಕೊಂಡು ಚಚ್ಚುವುದು ಏನು ಹೇಳುತ್ತೀರಿ? ಸಾಯಿಸಲೇಬೇಕು ಎಂದು ನಗುವುದು ಏನು ಹೇಳುತ್ತೀರಿ? ನೋಡಿಬಿಟ್ಟರೆ ನಾವು ತಲೆ ತಗ್ಗಿಸಬೇಕಾಗುತ್ತದೆ ರಾಜ್ ಕುಮಾರ್‌ರವರಿಗೆ ಕೊಡುವಂತಹ ಗೌರವವಲ್ಲ ಇದು. ಪಾಪ ಆ ದೊಡ್ಡ ಮನುಷ್ಯನ ಶವವನ್ನು ಇಟ್ಟುಕೊಂಡು, ನಾವು ರಾಜ್ಯದ ಸಂಸ್ಕೃತಿಯನ್ನು ಅವತ್ತು ಹಾಳು ಮಾಡಿದೆವು. ಯಾರಾದರೂ ನಮ್ಮನ್ನು ಏನನ್ನುತ್ತಾರೆ? ಒಂದು ರಾಜ್ಯದಲ್ಲಿ ಯಾರಾದರೂ ಒಬ್ಬ ಅತ್ಯಂತ ಪ್ರೀತಿಸುವಂತಹ ವ್ಯಕ್ತಿ ಸತ್ತರೆ, ಜನ ಹೀಗಾಡುತ್ತಾರಾ? ಮನೆಯಲ್ಲಿ ಯಾರಾದರೂ ಸತ್ತರೆ ನಾವು ಹೋಗಿ ಗೋಡೆ ಮುರಿಯುತ್ತೀವಾ? ಮನೆಯಲ್ಲಿ ಇರುವ ಗಾಜು ಒಡೆದು ಹಾಕುತ್ತೇವಾ? ಇದನ್ನು ಎಲ್ಲಾದರೂ ನಿಗ್ರಹಿಸಬೇಕು. ನಾನು ಇಲ್ಲಿ ನಿಂತುಕೊಂಡು ಮಾತನಾಡುವುದೊಂದೇ, ಸನ್ಮಾನ್ಯ ಮುಖ್ಯಮಂತ್ರಿಗಳೇ, ಹೌದು, ಒಳ್ಳೆಯವರಾಗಿರಬೇಕು, ಒಳ್ಳೆಯವರಾಗಿ ಕಾಣಬೇಕು, ಆದರೆ ಒಳ್ಳೆಯತನವೇ ಸರ್ವಸ್ವವಲ್ಲ ದುಷ್ಟರನ್ನು ನಿಗ್ರಹಿಸಬೇಕು, ಶಿಷ್ಟರಿಗೆಗ ರಕ್ಷಣೆ ಕೊಡಬೇಕು. ಅದು ಆಡಳಿತ ನಡೆಸುವವರ ರಾಜಕಾರಣ. ಎಲ್ಲರ ಹತ್ತಿರವೂ ನೀವು ಒಳ್ಳೆಯವರು ಅನಿಸಿಕೊಳ್ಳಲಾಗುವುದಿಲ್ಲ ಅದನ್ನು ಬಿಟ್ಟುಬಿಡಿ. ಒಳ್ಳೆಯವರು ಎನಿಸಿಕೊಳ್ಳಲು ಹೋದರೆ ಇಲ್ಲಿ ಆಡಳಿತ ನಡೆಯುವುದಿಲ್ಲ. ಶಾಂತಿ ಮತ್ತು Law and Order ಅನ್ನು ನೀವು maintain ಮಾಡಲಿಕ್ಕೆ ಸಾಧ್ಯವೇ ಇಲ್ಲ. ದಯಮಾಡಿ ಯಾರು ಜವಾಬ್ದಾರರಿದ್ದಾರೋ, ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಿ. ಇದರಲ್ಲೇನು ಯಾರು ಪಿತೂರಿ ಮಾಡಿದ್ದಾರೋ? ಯಾರು ಏತಕ್ಕೆ ಮಾಡಿದ್ದಾರೋ? ಅವತ್ತೀನ ಸನ್ನಿವೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು, ನಿರ್ದಾಕ್ಷಣ್ಯವಾಗಿ ತಾವು ಏನಾದರೂ ಕ್ರಮ ಜರುಗಿಸಿದರೆ ಈ ರಾಜ್ಯಕ್ಕೆ ಏನಾದರೂ ಹೋಗಿರುವ ಗೌರವ ಸ್ವಲ್ಪ ಉಳಿದುಕೊಳ್ಳುತ್ತದೆ. ಯಾರೂ ಆಚೆಗೆ ಹೋಗುವಂತಹ ಸ್ಥಿತಿ ಇರಿಲಿಲ್ಲವೆಂದರೆ ಏನು ಸಾರ್? ಅಷ್ಟೆಲ್ಲಾ ಅಭಿಮಾನ ಇರುವವರು, ಪಾರ್ವತಮ್ಮನವರನ್ನು ಕಾಲಿಗೆ ಬಿದ್ದು ಕರೆದುಕೊಂಡು ಹೋಗಿ ಕುಳ್ಳಿರಿಸಬೇಕಾಗಿತ್ತು ಜನ? "ಬಾರಮ್ಮ ನಿನಗೆ ಈ ದಿನ ಕಷ್ಟ ಬಂದಿದೆ" ಎಂದು ಯಾರಿದ್ದರು, ಯಾರೂ ಇರಲಿಲ್ಲ ಏಕೆ ಆಯಿತು ಇದು? ಯಾರೋ ಬೇಳೆ ಬೇಯಿಸಿಕೊಳ್ಳಲಿಕೆ. ಈ ರೀತಿ ಆಯಿತು. ಎರಡನೆಯದಾಗಿ ಅಧ್ಯಕ್ಷರೆ, ಇಂತಹ ಕಡೆ ಪೊಲೀಸ್‌ನವರ ಮೇಲೆ bad elements ಅವರ ಎಲ್ಲಾ ಹಳೆಯ ಸೇಡನ್ನು ತೀರಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುವುದು ಸರ್ವೇ ಸಾಮಾನ್ಯ ಯಾವುದೇ ಇಂತಹ ಗಲಾಟೆಯಾದರೆ

ಟಾರ್ಗೆಟ್‌ನವರು ಪೋಲೀಸ್‌ನವರೇ. ನಾವು ಅವತ್ತು ಸಾಕಷ್ಟು ಪೋಲೀಸ್‌ನವರನ್ನು ಹಾಕಲಿಲ್ಲ. ನಿನ್ನೆ ಮಾತನಾಡುತ್ತಾ ಈ ಸಭೆಯಲ್ಲಿ ಈ ಮಾತನ್ನು ನಾನು ಹೇಳಿದ್ದೆ. ಮೊದಲನೇ ದಿವಸದ್ದು ನೀವು ನಿರೀಕ್ಷಣೆ ಮಾಡಲಿಕ್ಕೆ ಆಗುತ್ತಿರಲಿಲ್ಲ. ಯಾರೂ ನಾವು ಏಕದಂ ಪೋಲೀಸ್‌ನವರನ್ನು ದೂಷಣೆ ಮಾಡಲಿಕ್ಕೆ ಆಗುವುದಿಲ್ಲ ರಾಜ್‌ಕುಮಾರ್‌ರವರು ಸಾಯುತ್ತಾರೆ ಎಂದು ತಮಗೆ ಗೊತ್ತಿರಲಿಲ್ಲ ಆಗಿ ಹೋಗಿ ಬಿಟ್ಟಿತು ಅವರ ಸ್ಥಿತಿ, ತಕ್ಷಣ ಅದು ಬಯಲಾಗಿ ಬಿಟ್ಟು ಜನರು ಸೇರಿದರು. ಎರಡನೇ ದಿವಸದ ಕೆಲಸವನ್ನು ತಾವು ಕಂಟ್ರೋಲ್ ಮಾಡಬೇಕಾಗಿತ್ತು. ಯಾರೇ ಆಗಿರಲಿ, ಪೋಲೀಸ್ ಕಮೀಷನರ್‌ರವರ ಬಗ್ಗೆ ನಮಗೂ ಗೌರವ ಇದೆ, ಇಲ್ಲಿ ಪ್ರಶ್ನೆ ಇರುವುದು ಅದಲ್ಲ. ಎರಡನೇ ದಿವಸ ನಾವು ನಿರೀಕ್ಷೆ ಮಾಡಬೇಕಾಗಿತ್ತು ರಾಜ್‌ಕುಮಾರ್ ಅಂತಹವರು ಸತ್ತರೆ ಕನಿಷ್ಟ ಎಷ್ಟು ಜನ ಸೇರುತ್ತಾರೆ? ಎಂತೆಂತಹ ಜನ ಸೇರುತ್ತಾರೆ? ಅವರ ಬಳಗ ಎಂತಹದ್ದು? ಮೆಜೆಸ್ಟಿಕ್‌ನಲ್ಲಿ ಏನು ಮಾಡುತ್ತೆ? ಗಾಂಧಿನಗರದಲ್ಲಿ ಏನು ಮಾಡುತ್ತೆ? ರಾಜಾಜಿನಗರದಲ್ಲಿ ಏನು ಮಾಡುತ್ತೆ? ಈ ಕಲ್ಪನೆ ನಮಗೆ ಇರಬೇಕಾಗಿತ್ತು. ಮತ್ತೆ ಅವರಿಗೆ ಯಾರಾದರೂ enrage ಮಾಡುತ್ತಾರೆ ಅದೂ ಕೂಡ ನಿಮಗೆ ಮಾಹಿತಿ ಇರಬೇಕಾಗಿತ್ತು. ಆ ಬೇಹುಗಾರಿಕೆ ಮಾಹಿತಿ ತಮ್ಮಲ್ಲಿ ಇರಬೇಕಾಗಿತ್ತು. ಅವರನ್ನು ಹೇಗಾದರೂ ಮಾಡಿ ಆ ವಾಹಿನಿಯಿಂದ ಸ್ವಲ್ಪ ಆಚೆ ಇಡಬೇಕಾಗಿತ್ತು. ಇಟ್ಟಿದ್ದಿದ್ದರೆ ಖಂಡಿತ ಈ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ನಾನು ಒತ್ತಾಯ ಮಾಡುವುದು, ಇವತ್ತು ಅವರಿಗೆ ಗೊತ್ತೋ ಗೊತ್ತಿಲ್ಲವೊ, ನನಗೆ ಗೊತ್ತು ಎಂದು ಅವರು ಹೇಳಿದ್ದಾರೊ, ಅಥವಾ ನಿನ್ನೆ ಯಡಿಯೂರಪ್ಪನವರು ಇದೊಂದು ಪಿತೂರಿ, ಷಡ್ಯಂತರ ಎಂದು ಹೇಳಿದ್ದಾರೊ ಅದೆಲ್ಲವೂ ಅಪ್ರಸ್ತುತ. ಈ ರಾಜ್ಯದ ಗೌರವ ಉಳಿದುಕೊಳ್ಳಬೇಕೆಂದರೆ ನಿರ್ದಾಕ್ಷಣ್ಯವಾದ ತನಿಖೆಯಾಗಬೇಕು. ಯಾರ್ಯಾರು ಇದರ ಹಿಂದೆ ಇದ್ದಾರೆ ಅದು ಬಯಲಿಗೆ ಬರಬೇಕು. ರಾಜ್ಯಾಂಗ ತಾಯಿಗೆ ಸಮಾನ. ನಮ್ಮ ಹೆತ್ತ ತಾಯಿಯ ಗೌರವವನ್ನು ಕಾಪಾಡಲು ಅಥವಾ ಕಳೆಯಲು ಯಾರ್ಯಾರು ಕೈಹಾಕುತ್ತಾರೆ, ಕಾಪಾಡುವವರಿಗೆ ಪ್ರೋತ್ಸಾಹ ಕೊಡಬೇಕು, ಕಳೆಯಲು ಮನಸ್ಸು ಮಾಡುವವರನ್ನು ಜೈಲಿಗೆ ಕಳೂಹಿಸದೆ ಹೋದರೆ ಕರ್ನಾಟಕದ ಗೌರವ ಉಳಿಯುವುದಿಲ್ಲ ಈವತ್ತು ಇದರ ಬಗ್ಗೆ ತನಿಖೆಯನ್ನು ಕಡ್ಡಾಯವಾಗಿ ಮಾಡಿಸಬೇಕೆಂದು ನಾನು ಹೇಳುತ್ತೇನೆ. ಯಾರಿಂದ ಮಾಡಿಸುತ್ತೀ ಹೇಗೆ ಮಾಡಿಸುತ್ತೀ ಎಂಬ ಬಗ್ಗೆ ಸಜೆಸ್ಟ್ ಮಾಡುವುದು ನಮ್ಮ ಕೆಲಸವಲ್ಲ. ತನಿಖೆಯಿಂದ ವಿಚಾರ ಆಚೆಗೆ ಬರಬೇಕು. ಬಹಳಷ್ಟು ಮಾತುಗಳು, ಬಹಳ ರೀತಿಯ ಮಾತುಗಳು ಬರುತ್ತಿದೆ. ಅವೆಲ್ಲವನ್ನೂ ಶಾಸನ ಸಭೆಯಲ್ಲಿ ನಾವು

ಮಾತನಾಡಲು ಆಗುವುದಿಲ್ಲ. ಆದರೆ you must come out with a report ಒಂದು investigation ಆಗಲೇ ಬೇಕು. ಆಚೆಗೆ ಬರಬೇಕು. ಯಾರ್ಯಾರು ಅಸ್ತ್ರಗಳನ್ನು ಇಟ್ಟುಕೊಂಡು ಯಾರ್ಯಾರು ಉದ್ದೇಶಪೂರ್ವಕವಾಗಿ ಆ ದೊಂಬಿಯನ್ನು ಮಾಡಿದ್ದಾರೆ, ಅದಕ್ಕೆ ಪ್ರಚೋದನೆ ಮಾಡಿದ್ದಾರೆ ಎಂಬುದು ಹೊರಗೆ ಬರಬೇಕು. ಈವತ್ತು ಅವರು ಹೇಳಿದಂತೆ electronics media ದಲ್ಲಿ ಎಲ್ಲರೂ ಸಿಗುತ್ತಾರೆ. ಏನೂ ತಪ್ಪಿಲ್ಲ. ನಮ್ಮ ಕಿಬ್ಬನಹಳ್ಳಿ ಕ್ರಾಸ್‌ನಲ್ಲಿ ಒಂದು ಗಲಾಟೆಯಾಗಿದ್ದಕ್ಕೆ ಮರದ ಮೇಲೆ ಒಂದು ಕ್ಯಾಮರಾವನ್ನು ಪೊಲೀಸ್‌ನವರು ಇಟ್ಟುಬಿಟ್ಟಿದ್ದರು ಎಂದು ಒಂದೇ ಒಂದು ಮಾತನ್ನು ನಾವು ಹೇಳುವಷ್ಟರಲ್ಲಿ ಜನರು ಓಡಿಬಂದು ಅವತ್ತು ಸರೆಂಡರ್ ಆಗಿಬಿಟ್ಟರು. ಅಲ್ಲಿ ಮೀಡಿಯಾ ಕ್ಯಾಮರಾ ಇಟ್ಟುಬಿಟ್ಟಿದ್ದರು, ನಿಮ್ಮದೆಲ್ಲಾ ರೆಕಾರ್ಡ್ ಆಗಿಬಿಟ್ಟಿದೆಯೆಂದು ನಾವು ಸುಮ್ಮನೆ ಸುಳ್ಳು ಹೇಳಿದೆವು. ಓಡಿಬಂದು ಶರಣಾಗಿದ್ದರು. ಆದರೆ ಈವತ್ತು ಅದನ್ನು ಹಾಕಿಬಿಟ್ಟಿದ್ದಾರೆ. ನಾವು ನೋಡಿದ್ದೇವೆ. ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕು. ಯಾವ್ಯಾವ ಮಾಧ್ಯಮದವರ ಹತ್ತಿರ ಮಾಹಿತಿ ಲಭ್ಯವಿದೆ, ಯಾವ್ಯಾವ ಕ್ಯಾಮಾರಾವನ್ನು ಉಪಯೋಗಿಸಿ ಅದನ್ನು ನೋಡಿದ್ದಾರೆ, ಆ ಫೋಟೊಗ್ರಾಫ್‌ನ್ನು ತೆಗೆದುಕೊಂಡು ತಾವೊಂದು ಇನ್‌ವೆಸ್ಟಿಗೇಷನ್‌ನನ್ನು ಆರಂಭ ಮಾಡಬೇಕು. ಯಾರೇ ಪಿತೂರಿ ಮಾಡಿರಲಿ, ಅವರು ಎಷ್ಟೇ ದೊಡ್ಡವರಿರಲಿ ಈ ರಾಜ್ಯದ ಹಿತಾಸಕ್ತಿಯಿಂದ ಅವರನ್ನು ಬಯಲಿಗೆ ಎಳೆಯಬೇಕೆಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಡಾ: ರಾಜ್‌ಕುಮಾರ್‌ರವರ ಶವ ಸಂಸ್ಕಾರದ ದಿವಸ ನಡೆದ ಗೋಲಿಬಾರ್ ಘಟನೆ ಮತ್ತು ಸತ್ಯ ಜನರ ಪರಿಸ್ಥಿತಿ, ಈ ಬಗ್ಗೆ ನಿಲುವಳಿ ಸೂಚನೆಯನ್ನು ತಮಗೆ ಸಲ್ಲಿಸಿ ಅಂತಿಮವಾಗಿ ನಿಯಮ 69ರ ಪ್ರಕಾರ ಚರ್ಚೆ ಮಾಡುತ್ತಿದ್ದೇವೆ. ಈ ಚರ್ಚೆ ಬೆಳಿಗ್ಗೆಯೇ ಆಗಬೇಕಾಗಿತ್ತು. ಬೆಳಿಗ್ಗೆಯೇ ಚರ್ಚೆಯಾಗಿದ್ದರೆ ಚರ್ಚೆಗೆ ಇನ್ನೂ ಹೆಚ್ಚಿನ ಮಹತ್ವ ಬರುತ್ತಿತ್ತು ಮತ್ತು ಶಕ್ತಿ ಬರುತ್ತಿತ್ತು ಜೊತೆಗೆ ಇದನ್ನು ಬಹಳ ದಿವಸಗಳಾದಮೇಲೆ ಚರ್ಚೆ ಮಾಡುತ್ತಿದ್ದೇವೆ. ಆ ತಕ್ಷಣವೇ ಶಾಸನ ಸಭೆ ಸೇರಿದ್ದರೆ ಅದಕ್ಕೆ ಇನ್ನೂ ಹೆಚ್ಚು ಶಕ್ತಿ ಬರುತ್ತಿತ್ತು ಈಗ ಬಹಳ ದಿವಸವಾಗಿದೆ. ಬಹಳ ಪ್ರಾಮುಖ್ಯವಾಗಿ ನಾವೆಲ್ಲಾ ಘಟನೆಗಳನ್ನು ದೂರದರ್ಶನದಲ್ಲಿ ಏನೇನು ನೋಡಿದೆವೋ ಅದನ್ನು ಈ ರಾಜ್ಯದ ಜನ ಮತ್ತು ಈ ದೇಶದ ಜನರಲ್ಲಾರೂ ನೋಡಿದ್ದಾರೆ. ಆವತ್ತು ಮೆರವಣಿಗೆಯಾದದ್ದು, ಸ್ಟೇಡಿಯಂ ಹತ್ತಿರ ಅವರ ಶವ ಇದ್ದದ್ದು ಶವ ಸಂಸ್ಕಾರ ನಡೆದದ್ದು ಸಮಗ್ರವಾಗಿ ಎಲ್ಲರೂ ನೋಡಿದ್ದಾರೆ. ನನಗೆ ಆಮೇಲೆ ಗೊತ್ತಾಗಿದ್ದು ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮನೆಯ ಹಿಂದೆ

ಇದ್ದರು ಎಂಬುದು. ನನಗೆ ಅದೂ ಗೊತ್ತಿರಲಿಲ್ಲ ಯಾರೋ ಹೇಳಿದರು, ಮಹಾಲಕ್ಷ್ಮಿ ಬಡಾವಣೆಯಲ್ಲಿ ಇದ್ದರು ಎಂದು. ನಾನು ಮನೆಯಲ್ಲೇ ಇದ್ದೆ ಎಲ್ಲವನ್ನು ಟಿ.ವಿ.ಯಲ್ಲಿ ಸಂಪೂರ್ಣವಾಗಿ ನೋಡುತ್ತಿದ್ದೆ. ನನಗನ್ನಿಸುತ್ತದೆ ಈ ಪರಿಸ್ಥಿತಿ ಬರುವುದಕ್ಕೆ ಕಾರಣ ಪೊಲೀಸ್‌ನವರು ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳದೆ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಅದರಲ್ಲಿ ಬೇರೆ ಮಾತಿಲ್ಲ ನಾವು ಇಲ್ಲಿ ಏನು ಯಾರ ಬಗ್ಗೆಯು ವೈಯಕ್ತಿಕವಾಗಿ ಮಾತನಾಡಬೇಕೆಂದಲ್ಲ. ಈ ಸದನದಲ್ಲಿ ಬಹಳ ಹಿಂದೆ ಅನೇಕ ಚರ್ಚೆಗಳು ನಡೆದಿರುವುದರಲ್ಲಿ, ಒಂದೆರಡು ನಾನು ಸಮ್ಮನೆ ತಮಗೆ ಹೇಳುತ್ತೇನೆ. ಹಿಂದೆ ಮಧುಗಿರಿ ಪ್ರಕರಣ ನಡೆಯಿತು. ಬಹಳ ದೊಡ್ಡ ದುರಂತ ಮಧುಗಿರಿಯಲ್ಲಿ ನಡೆಯಿತು. ಮಹಿಳೆಯರ ಮೇಲೆ ಅತ್ಯಾಚಾರವಾಯಿತು. ಭಾರಿ ದೊಡ್ಡ ದುರಂತ ನಡೆದುಹೋಯಿತು. ಎಂ.ವಿ. ರಾಮರಾಯರು ಗೃಹ ಮಂತ್ರಿಗಳಾಗಿದ್ದರು, ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು, ಇಲ್ಲಿ ದೊಡ್ಡ ಚರ್ಚೆಯಾಯಿತು. ನಾನು ಆಗ ಶಾಸಕನಾಗಿರಲಿಲ್ಲ. ಅದು ನಡೆದದ್ದು 1962ರಲ್ಲಿ ನಾನು 1967ರಲ್ಲಿ ಶಾಸಕನಾಗಿ ಬಂದೆ. ಇಲ್ಲೆ ಕುಳಿತು ಶಾಂತವೇರಿ ಗೋಪಾಲಗೌಡರು ಮಧುಗಿರಿ ಪ್ರಕರಣದ ಬಗ್ಗೆ ಏನೇನು ನಡೆಯಿತು, ಯಾವ್ಯಾವ ರೀತಿ ಆಯಿತು ಎಂಬ ಬಗ್ಗೆ ಎಳೆ ಎಳೆಯಾಗಿ ಮಾತನಾಡುತ್ತಾರೆ. ಮಹಿಳೆಯರ ಮೇಲೆ ನಡೆದಂಥ ಅತ್ಯಾಚಾರ, ಅನ್ಯಾಯ, ಘೋರ ದುರಂತದ ಬಗ್ಗೆ ಎಲ್ಲವನ್ನು ಹೇಳಿ ಕೊನೆಗೆ ಗೋಪಾಲಗೌಡರು ಒಂದು ಮಾತನ್ನು ಹೇಳಿ "ನನ್ನ ಮಾತನ್ನು ಮುಗಿಸುತ್ತೇನೆ ಗೃಹ ಮಂತ್ರಿಗಳೇ ರಾಮರಾಯರೇ" ಎಂದು ಹೇಳುತ್ತಾರೆ ಕೊನೆಯ ಆ ಮಾತು ಏನು? ಅಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ನಡೆದಿದೆ, ಅದೇ ಅತ್ಯಾಚಾರ ನಿಮ್ಮ ಮಗಳ ಮೇಲೆ ನಡೆದಿದ್ದರೆ ನಿಮ್ಮ ಪತ್ನಿ ಮೇಲೆ ನಡೆದಿದ್ದರೆ ನಿಮಗೆ ಯಾವ ರೀತಿಯಾಗುತ್ತಿತ್ತು ಎಂದು ಇಷ್ಟು ಹೇಳಿ" ನನ್ನ ಭಾಷಣವನ್ನು ಮುಗಿಸುತ್ತೇನೆ" ಎಂದು ಕುಳಿತುಕೊಳ್ಳುತ್ತಾರೆ. "ಮಧುಗಿರಿ ಪ್ರಕರಣದಲ್ಲಿ ನಡೆದಂಥ ಎಲ್ಲಾ ಹೊಣೆಗಾರಿಕೆಯನ್ನು ನಾನು ಗೃಹ ಮಂತ್ರಿಯಾಗಿಯೆ ಹೊರುತ್ತೇನೆ, ಮಾನ್ಯ ಗೋಪಾಲಗೌಡರು ಹೇಳಿರತಕ್ಕ ಮಾತನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಈ ಗೃಹ ಮಂತ್ರಿ ಸ್ಥಾನಕ್ಕೆ ನಾನು ತಕ್ಷಣ ರಾಜೀನಾಮೆ ಕೊಡುತ್ತೇನೆ" ಅದನ್ನು ಈ ಸದನದಲ್ಲಿ ನಾವು ನೋಡಿದೆವು. ಮುನಿಯಮ್ಮನ ಪ್ರಕರಣ, ಇಲ್ಲೇ ವೈಯ್ಯಾಲಿಕಾವಲ್‌ನಲ್ಲಿ ಪೊಲೀಸ್ ಲಾಕಪ್‌ನಲ್ಲಿ ಹಾಕಿ ಆ ಮರ್ಮಾಂಗಕ್ಕೆ ಅವರು ನಡೆಸಿದಂಥ ದೊಡ್ಡ ದುರಂತ ಇಡೀ ದೊಡ್ಡ ಇತಿಹಾಸ ನಿರ್ಮಾಣವಾಗುತ್ತದೆ. ಇಲ್ಲಿ ರಾಜ್‌ಕುಮಾರ್‌ರವರಂಥ ಮೇರು ನಟನ ನಿಧನದಿಂದ ಎಷ್ಟೊಂದು ಜನ ಸೇರಬಹುದು ಎಂಬ ಊಹೆ ಸರ್ಕಾರ

ನಡೆಸುವವರಿಗೆ, ಪೊಲೀಸ್ ಇಲಾಖೆಯವರಿಗೆ ಬೇಕು. ಪೊಲೀಸ್ ಇಲಾಖೆ ಎಂದರೆ, ಮುಖ್ಯಮಂತ್ರಿಗಳೇ, ಉಪಮುಖ್ಯಮಂತ್ರಿಗಳೇ ಹೋಗಬೇಕೆಂದಲ್ಲ ಪೊಲೀಸ್ ಇಲಾಖೆಯ ಬೆಂಗಳೂರು ನಗರದ ಜವಾಬ್ದಾರಿ ಹೊತ್ತಿರುವ ಅಧಿಕಾರಿಗಳು ಶವ ಸಂಸ್ಕಾರದ ಸ್ಥಳದಲ್ಲಿ ಯಾವ ರೀತಿ ವ್ಯವಸ್ಥೆ ಮಾಡಬೇಕಾಗಿತ್ತು ಎಷ್ಟು ಜನ ಅಲ್ಲಿ ಶವ ಸಂಸ್ಕಾರಕ್ಕೆ ಬರಬಹುದಾಗಿತ್ತು ಮೆರವಣಿಗೆಯಲ್ಲಿ ಎಷ್ಟು ಜನ ಸೇರಬಹುದು? ಯಾವ ರೀತಿಯಲ್ಲಿ ಮೆರವಣಿಗೆ ನಾವು ರಕ್ಷಣೆ ಕೊಟ್ಟು ಹೋಗಬಹುದಾಗಿತ್ತು? ನಾನು ಕಣ್ಣಾರೆ ನೋಡುತ್ತಿದ್ದೇನೆ ಯಶವಂತಪುರ ಸರ್ಕಲ್‌ನಲ್ಲಿ ಕಾರನ್ನು ಅವರೇ ಬೆಂಕಿ ಇಡುತ್ತಿದ್ದಾರೆ. ಯಾರೂ ಮಾತನಾಡಲು ಆಗುತ್ತಿಲ್ಲ ಪರಿಸ್ಥಿತಿಯೂ ಹಾಗೆಯೇ ಇತ್ತು. ಮಾತನಾಡಲು ಹೋದರೆ ಬೇರೆ ದಿಕ್ಕೇ ತಲುಪುತ್ತಿತ್ತು. ಆದ್ದರಿಂದ ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ, ಮುಖ್ಯಮಂತ್ರಿಗಳು ಹೋಗಲು ಆಗಲಿಲ್ಲ ಉಪಮುಖ್ಯಮಂತ್ರಿಗಳು ಹೋಗಿ ಓಡುತ್ತಿರುವುದನ್ನು ನಾವು ನೋಡುತ್ತಿದ್ದೆವು. ಉಪಮುಖ್ಯಮಂತ್ರಿಗಳು, ಆ ಪರಿಸ್ಥಿತಿಯಲ್ಲಿ ಓಡುತ್ತಿರತಕ್ಕದ್ದನ್ನು ನಾವು ಟಿ.ವಿ.ಯಲ್ಲಿ ನೋಡುತ್ತಿದ್ದೆವು. ಇದು ನಮಗೆ ನಿಜಕ್ಕೂ ಬಹಳ ನೋವಾಗಿದೆ. ನಾವೆಲ್ಲರೂ ತಲೆ ತಗ್ಗಿಸತಕ್ಕ ವಿಚಾರ ಈ ಬಗ್ಗೆ ನಾವು ಸುದೀರ್ಘವಾಗಿ ಮಾತನಾಡುವುದಕ್ಕಿಂತ ಒಂದು ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು. ತಾವೆ ನಿನ್ನೆ ಮಾತನಾಡುವಾಗ ಹೇಳಿದ್ದೀರಿ. ನಿನ್ನೆ ಉಪಮುಖ್ಯಮಂತ್ರಿಗಳು ಮಾತನಾಡುವಾಗ ಒಂದು ಮಾತನ್ನು ಬಹಳ ಪ್ರಾಮಾಣಿಕವಾಗಿ ಹೇಳಿದಿರಿ "ಇದರ ಹಿಂದೆ ಪಿತೂರಿ ಇದೆ ನಮ್ಮ ಹತ್ತಿರ ವರದಿ ಇದೆ" ಎಂದು ಎರಡನ್ನು ತಾವೇ ಹೇಳಿದ್ದೀರಿ. ಸ್ಪಷ್ಟವಾಗಿ ಹೇಳಿದ್ದೀರಿ. ಮತ್ತೊಂದು ಕಡೆ ಪೊಲೀಸ್ ಕಮಿಷನರ್‌ರವರು ಎಲ್ಲಾ ಪತ್ರಿಕೆಗಳಲ್ಲಿ ಸ್ಟಾಂಪ್ ರೀತಿ ಫೋಟೋಗಳನ್ನು ಹಾಕಿಸಿ ಇವರನ್ನೆಲ್ಲಾ ಹಿಡಿದುಕೊಡಿ ಎಂದು ದಿನಾ ಬರುತ್ತಿತ್ತು ಇವರೆಲ್ಲಾ ಭಾಗಿಗಳಾಗಿದ್ದಾರೆ ಎಂದು ಜಾಹಿರಾತುಗಳು ಬರುತ್ತಿತ್ತು ಎಷ್ಟು ಜನ ಬಂಧನ ಮಾಡಿದ್ದಾರೆ ಎಷ್ಟು ಜನರನ್ನು ಬಿಡುಗಡೆ ಮಾಡಿದ್ದಾರೆ, ಎಷ್ಟು ಜನ ಭಾಗಿಗಳಾಗಿದ್ದಾರೆ, ಇದರ ಹಿಂದೆ ಯಾರಿದ್ದಾರೆ ಎಂಬುದರ ಬಗ್ಗೆ ನಿಮಗೆ ಇರತಕ್ಕ ಮಾಹಿತಿ, ಉಪಮುಖ್ಯಮಂತ್ರಿಗಳಿಗೆ ಇರತಕ್ಕ ಮಾಹಿತಿ, ನಿಮಗೆ ಇರತಕ್ಕ ವರಿದಿ ಇದನ್ನು ತಾವು ಸಭೆಯ ಮುಂದೆ ಹೇಳುವ ವಿಚಾರ ಬಂದಾಗ ಮತ್ತೊಂದನ್ನು ನಾನು ತಮಗೆ ಹೇಳುತ್ತಿದ್ದೇನೆ, ನಿಮಗೆ ಯಾವ ವಿಧದಲ್ಲೂ ಹೆದರಿಕೆ ಬೇಡ, ಅಂಜಿಕೆ ಬೇಡ, ರಾಜಕೀಯ ಪ್ರಶ್ನೆ ಬೇಡ ಈ ಸದನದಲ್ಲಿ ತಮಗೆ ಹೇಳುತ್ತಿದ್ದೇನೆ ನೀವು ಸದನದ ಸಮಿತಿಯನ್ನಾದರೂ ಮಾಡಿ ಸಿ.ಬಿ.ಐ. ಗೆ ಆದರೂ ಕೊಡಿ. ಇವೆರಡರಲ್ಲಿ ಯಾವುದಾದರೂ ಮಾಡಿ. ನನಗನ್ನಿಸುತ್ತದೆ, ಇದು

ಸಮಗ್ರ ಬಹಿರಂಗವಾಗಲಿ ನೀವು ಸುಮ್ಮನೆ ಮಾಡಲಿಲ್ಲ ಮಾಡಿದರು, ಪಿತೂರಿ ಇದೆ ಪಿತೂರಿ ಇಲ್ಲ ಎಂದರೆ ಸರಿಯಲ್ಲ ಹಾಗಾದರೆ ಪಿತೂರಿಯನ್ನು ಯಾರು ನಡೆಸಿದ್ದಾರೆ? ನಾವು ಸುಮ್ಮನೆ ಸುತ್ತಿಬಳಸಿ ಮಾತನಾಡುತ್ತಿದ್ದೇವೆ. ಇದಕ್ಕೆ ಕಾರಣ ಯಾರು? ಹೊಣೆಗಾರಿಕೆ ಯಾರು? ಪರಿಸ್ಥಿತಿ ಏನು? ಇವೆಲ್ಲ ಹೊರಗಡೆ ಬರಬೇಕಲ್ಲಾ? ಆದ್ದರಿಂದ ನಾವು ಈಗ ನಿಲುವಳಿ ಸೂಚನೆಯನ್ನು ಮಾಡಿದ್ದೇವೆ, ನಾನು ಜಾಸ್ತಿ ಸತ್ತಿಬಳಸಿ ಸಮಗ್ರ ವಿಚಾರವನ್ನು ನಾನು ಹೇಳಲು ಹೋಗುವುದಿಲ್ಲ. ಪಿತೂರಿ ನಡೆದಿದೆ ಎನ್ನುವ ಪದವನ್ನು ತಾವು ಉಪಯೋಗಿಸಿದ್ದೀರಿ. ನಮ್ಮ ವರದಿ ಇದೆ ಎಂದು ಎರಡನ್ನೂ ಹೇಳಿದ್ದೀರಿ. ನಿಮಗೆ ಎಂದರೆ ಸರ್ಕಾರಕ್ಕೆ ವರದಿ ಇದೆಯೆಂದು ಹೇಳಿದ್ದೀರಿ ಆದ್ದರಿಂದ ನೀವು ಸ್ಪಷ್ಟವಾಗಿ ನಿಮ್ಮ ವರದಿಯ ಆಧಾರದ ಮೇಲೆ ಇಲ್ಲಿ ಬೆಳಕನ್ನು ಚೆಲ್ಲಿ ಇಲ್ಲಿ ಯಾರ್ಯಾರು ಇದಕ್ಕೆ ಕಾರಣಕರ್ತರಾಗಿದ್ದಾರೆ ಪರಿಸ್ಥಿತಿ ಏನು ಎಂಬುದನ್ನು ಸಮಗ್ರವಾಗಿ ವರದಿಯನ್ನು ಸಲ್ಲಿಸಬೇಕು. ಸತ್ತು ಇಷ್ಟು ದಿನ ಆಗಿದೆ ಸುಮಾರು ಎಂಟು ಜನರು ಸತ್ತಿದ್ದಾರೆ. ನಾನು ತಮಗೆ ಹೇಳುತ್ತಿದ್ದೇನೆ, ಸತ್ತಿರತಕ್ಕವರು ಅಮಾಯಕರು. ಸರ್ಕಾರ ಅವರ ಕುಟುಂಬದವರಿಗೆ 5 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಈಗಲೂ ಕೂಡ ಅದೇ ಒತ್ತಾಯವನ್ನು ಮಾಡುತ್ತೇನೆ. ನೀವು ಎಷ್ಟು ಕೊಡಬೇಕೆಂದು ತೀರ್ಮಾನ ಮಾಡಿದ್ದೀರೋ ಅದನ್ನು ಕೂಡಲೇ ಸತ್ತಿರತಕ್ಕಂಥ ಅಮಾಯಕರ ಕುಟುಂಬದವರಿಗೆ ಕೊಟ್ಟು ಅವರ ಕುಟುಂಬದ ಒಬ್ಬರಿಗೆ ಉದ್ಯೋಗ ಕೊಡತಕ್ಕಂಥ ಕೆಲಸವನ್ನು ಮಾಡಬೇಕಾಗಿತ್ತು. ಈ ಸದನದಲ್ಲಿ ಹಿಂದೆ ಸತ್ಯದ ಪ್ರತಿಪಾದನೆಗಳು ನಡೆದು ಮಂತ್ರಿಗಳು ರಾಜೀನಾಮೆ ಕೊಟ್ಟಿರತಕ್ಕಂಥ ನಿದರ್ಶನಗಳಿವೆ. ನಾನು ತಮಗೆ ಹೇಳುವುದಾದರೆ ಆರ್.ಡಿ.ಕಿತ್ತೂರ್ ಎನ್ನತಕ್ಕಂಥವರು ಗೃಹಮಂತ್ರಿಗಳಾಗಿದ್ದರು. ಅವರ ಮನೆಯಲ್ಲಿ ಯಾರೋ ಒಬ್ಬ ಹೆಣ್ಣು ಮಗಳು ಮಾತನಾಡುವುದಕ್ಕೆ ಹೋದದ್ದೇ ಅಪರಾಧ ಎಂದು ಹೇಳಿ ದೇವರಾಜ ಅರಸುರವರ ಕಾಲದಲ್ಲಿ ಮಂತ್ರಿ ರಾಜೀನಾಮೆ ಕೊಟ್ಟರು. ನಾನೇ ಅದನ್ನು ತೀವ್ರವಾಗಿ ಇದೇ ಸದನದಲ್ಲಿ ಚರ್ಚೆಗೆ ತಂದದ್ದು. ಇಂದು ದಿವಂಗತರಾಗಿರುವ ಸಂಯುಕ್ತ ಕರ್ನಾಟಕ ಪತ್ರಿಕೆಯ ದೊಡ್ಡ ವರದಿಗಾರರಾಗಿದ್ದ ಮಾನ್ಯ ರಾಜಾರಾವ್ ರವರು ಪತ್ರಿಕೆಯಲ್ಲಿ ದೊಡ್ಡದಾಗಿ ವರಿದಿ ಮಾಡಿದ್ದರು. ಇಂಥ ಆದರ್ಶವಾದಂಥ ನಿದರ್ಶನಗಳು ನಮ್ಮಲ್ಲಿ ನಮ್ಮ ರಾಜ್ಯದಲ್ಲಿವೆ. ಅದನ್ನೇ ನಾನು ತಮಗೆ ಹೇಳುತ್ತಿದ್ದೇನೆ. ನೀವು ನೇರವಾಗಿ ಇದಕ್ಕೆ ಹೊಣೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಪೋಲಿಸ್ ವ್ಯವಸ್ಥೆ ಬಗ್ಗೆ ನಾಳೆ ಕೇಳಬಹುದು. ಅಂದು ಪೋಲಿಸ್ ಸಂಖ್ಯೆ ಕಡಿಮೆ ಇತ್ತು ಎಂದು ನೀವು

ಹೇಳಬಹುದು. ಆದರೆ ವಿಧಾನಸೌಧಕ್ಕೆ ನುಗ್ಗಿದ್ದರೆ ನೀವೇನು ಮಾಡುತ್ತಿದ್ದಿರಿ? ವಿಧಾನಸೌಧಕ್ಕೆ ಇದೇ ಜಾಗಕ್ಕೆ ನುಗ್ಗಿದ್ದರೆ ಮಂತ್ರಿಗಳೆಲ್ಲರೂ ಬೇರೆ ಕಡೆಗೆ ಹೋಗುತ್ತಿದ್ದರೆ? ರಕ್ಷಣೆ ಯಾರು ಕೊಡುತ್ತಿದ್ದರು ವಿಧಾನಸೌಧಕ್ಕೆ ನಾಳೆ ಪರಿಸ್ಥಿತಿ ಏನಾಗುತ್ತಿತ್ತು? ಈ ರಾಜ್ಯದ ಕೇಂದ್ರ ಸ್ಥಾನವಾದ ವಿಧಾನಸೌಧಕ್ಕೆ ಜನರು ನುಗ್ಗಿದ್ದರೆ ಏನು ಮಾಡುತ್ತಿದ್ದಿರಿ ಅಂಥ ಪರಿಸ್ಥಿತಿಯಲ್ಲಿ? ನಾನು ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡುವುದೇನೆಂದರೆ ನೀವು ನಿನ್ನೆ ದಿವಸ ಏನು ಹೇಳಿದ್ದೀರಿ, ಆ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಪಿತೂರಿ ನಡೆದಿದ್ದರೆ ಅದು ಬಹಿರಂಗವಾಗಿ ಬಿಡಲಿ. ಅದರ ಹಿಂದೆ ಯಾರೇ ಇರಲಿ ಆ ಬಗ್ಗೆ ಪ್ರಶ್ನೆ ಬೇಡ. ಅದು ಬಹಿರಂಗವಾಗಲಿ. ಅದರ ಬಗ್ಗೆ ತನಿಖೆಯಾಗಲಿ. ಈ ತನಿಖೆಯಾಗುವ ಮೊದಲೇ ಈಗ ನಿಮ್ಮ ಹತ್ತಿರ ತನಿಖಾ ವರದಿ ಇದ್ದರೆ ಆ ವರದಿ ಏನು ಎಂದು ಹೇಳಿ. ಪಿತೂರಿ ಯಾರದ್ದು ನಡೆದಿದೆ ಅದನ್ನೂ ತಾವು ಬಹಿರಂಗ ಮಾಡಿ. ಅದನ್ನು ಬಿಟ್ಟು ಸುಮ್ಮನೇ ಪಿತೂರಿ ನಡೆದಿದೆ ವರದಿ ಇದೆ ಎಂದು ಹೇಳಿದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಹಾಗೆಯೇ ಹೇಳುವುದಾದರೆ ಇವೊತ್ತೇ ನೀವು ಒಂದು ಸದನ ಸಮಿತಿಯನ್ನು ನೇಮಕ ಮಾಡಿದ್ದೇವೆ. ಇದು ಒಂದು ವಾರದಲ್ಲೋ ಹದಿನೈದು ದಿವಸದಲ್ಲೋ ಸಮಗ್ರವಾದಂಥ ಒಂದು ವರಿದಿಯನ್ನು ಕೊಡುತ್ತದೆ ಎಂದು ನೀವು ಸದನದಲ್ಲಿಯೇ ಹೇಳಿ. ಅದಿಲ್ಲದಿದ್ದರೆ ಸಿ.ಬಿ.ಐ. ಗೆ ಕೊಡುವುದಾದರೆ ಸಿ.ಬಿ.ಐ.ಗೇ ಕೊಡಿರಿ ಇದರಲ್ಲಿ ಯಾರ ಮುಲಾಜು ನಿಮಗೆ ಬೇಡ. ಉನ್ನತ ಮಟ್ಟದ ನ್ಯಾಯಾಂಗ ತನಿಖೆಗೆ ನಿವೃತ್ತ ನ್ಯಾಯಾಧೀಶರು ಅಥವಾ ಹೈಕೋರ್ಟ್ ನ್ಯಾಯಾಧೀಶರಾಗಬಹುದು ಅಥವಾ ಸದನ ಸಮಿತಿಯನ್ನೇ ತಾವು ನೇಮಕ ಮಾಡಬಹುದು, ಅಥವಾ ಸಿ.ಬಿ.ಐ. ತನಿಖೆಯಾಗಬಹುದು, ಯಾವ ತನಿಖೆಗಾದರೂ ತಾವು ಅವಕಾಶ ಮಾಡಿಕೊಡಲೇಬೇಕು. ತನಿಖೆಯಾಗಲಿಲ್ಲವೆಂದರೆ ವರದಿ ಬರಲಿಲ್ಲವೆಂದರೆ ಇವೆಲ್ಲವೂ ಗೌಪ್ಯವಾಗಿ ಎಲ್ಲೋ ಒಂದು ಕಡೆ ಮುಚ್ಚಿಹೋಯಿತೆಂದರೆ ಅವೊತ್ತು ನಡೆದಂಥ ಘಟನೆಗೆ ಎಲ್ಲೋ ಒಂದು ಕಡೆ ಉತ್ತರವೇ ಸಿಗುವುದಿಲ್ಲ. ಉತ್ತರ ಸಿಗಬೇಕು ಎನ್ನುವುದಾದರೆ ಯಾರು ಇದನ್ನು ಮಾಡಿದ್ದಾರೆ? ಯಾವ ಕಾರಣಕ್ಕೆ ಮಾಡಿದ್ದಾರೆ? ಇವೆಲ್ಲವೂ ಹೊರಗಡೆ ಬರಬೇಕು. ಹೊರಗಡೆ ಬರಲಿಲ್ಲವೆಂದರೆ ಸರಿಯಾದ ಕ್ರಮವಲ್ಲ. ಆ ದೃಷ್ಟಿಯಿಂದ ಇದು ನ್ಯಾಯಾಂಗ ತನಿಖೆಗೆ ಯೋಗ್ಯವಾಗಿದೆಯೆಂದು ನನಗನ್ನಿಸುತ್ತದೆ. ನ್ಯಾಯಾಂಗ ತನಿಖೆಯೆಂದರೆ ಹಾಲಿ ಇರತಕ್ಕಂಥ ಹೈಕೋರ್ಟಿನ ನ್ಯಾಯಾಧೀಶರಿಂದ ತನಿಖೆ ಮಾಡಿಸಿ. ಅದಿಲ್ಲವೆಂದರೆ ಸದನ ಸಮಿತಿ ಸರ್ವೋಚ್ಛ. ಸದನ ಸಮಿತಿಯನ್ನು ಮಾಡಿ ಅದಕ್ಕೆ

ನಿಮ್ಮವರನ್ನೇ ಅಧ್ಯಕ್ಷರನ್ನಾಗಿ ಮಾಡಿ. ನಮ್ಮದೇನೂ ಅಭ್ಯಂತರವಿಲ್ಲ. ನಿಮ್ಮ ಸಮ್ಮಿಶ್ರ ಸರ್ಕಾರದ ಯಾರೇ ಅಧ್ಯಕ್ಷರಾಗಲಿ. ನೀವು ನಮ್ಮನ್ನು ಸಮಿತಿಯ ಸದಸ್ಯರನ್ನಾಗಿ ಬೇಕಾದರೆ ಮಾಡಿ ಅಥವಾ ಬಿಡಿ. ಅವರೇ ತನಿಖೆಯನ್ನು ಮಾಡಲಿ. ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಒಂದು ತನಿಖೆ ಮಾಡಿಸಿ. ನಿಮ್ಮ ಮೇಲೆ ಬಂದಿರತಕ್ಕಂಥ ಕೆಟ್ಟ ಹೆಸರು ಹೋಗುವುದಕ್ಕೆ, ಅವೊತ್ತಿನ ಪರಿಸ್ಥಿತಿಯಲ್ಲಿ ಪೋಲಿಸರ ಮೇಲೆ ಬಂದಿರತಕ್ಕಂಥ ಕೆಟ್ಟ ಹೆಸರು ಹೋಗಲೇಬೇಕೆಂದರೆ ಒಂದು ತನಿಖೆಯಾಗಲೇಬೇಕು. ಆಗಲಿಲ್ಲವೆಂದರೆ ಅಲ್ಲಿ ಕಪ್ಪು ಛಾಯೆ ಉಳಿಯುತ್ತದೆ. ಆ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಸಮಗ್ರವಾದಂಥ ಒಂದು ತನಿಖೆ ಆದೇಶವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಉಪಾಧ್ಯಕ್ಷರೇ ಈಗಾಗಲೇ ಎಲ್ಲಾ ಹಿರಿಯ ನಾಯಕರೆಲ್ಲರೂ ಮಾತನಾಡಿದ್ದಾರೆ. ಪೋಲಿಸ್ ಕಮಿಶನರ್ ಹೆಸರು ಕೆಟ್ಟು ಹೋಗಬಾರದೆಂದು ಎಂದು ಕೆಲವರು; ಪೋಲಿಸ್ ಕಮಿಶನರ್ ಬಹಳ ಒಳ್ಳೆಯವರು, ಪೋಲಿಸ್ ಕಾನ್‌ಸ್ಟೇಬಲ್‌ಗಳೆಲ್ಲರೂ ಕೆಟ್ಟವರು ಎನ್ನುವ ಪದಗಳನ್ನೆಲ್ಲಾ ಎಲ್ಲರೂ ಹೇಳಿದ್ದಾರೆ. ತಮಗೂ ಗೊತ್ತಿದೆ. ಪೋಲಿಸರು ಒಳ್ಳೆಯವರೇ ಅಥವಾ ಕೆಟ್ಟವರೇ ಎನ್ನುವುದು ಒಂದು ಕಡೆ ಇರಲಿ. ಡಾ: ರಾಜ್‌ಕುಮಾರ್‌ರವರ ಫ್ಯೂನರಲ್‌ನಲ್ಲಿ ಪತ್ರಿಕೆಗಳಲ್ಲಿ ಏನು ಬಂದಿದೆಯೆಂದರೆ "Deputy CM is not able to attend his funeral". It is shame on the part of Government. It is very shameful. ಮುಖ್ಯಮಂತ್ರಿಗಳೇ ನೋಡುವುದಕ್ಕೆ ಆಗುವುದಿಲ್ಲ, ಎಂದರೆ, such a shame. He is the king of the State ಅವರಿಗೇ ರಕ್ಷಣೆ ಇಲ್ಲ. ಏನಾಗಿದೆ? ಹೇಗಾಗಿದೆ ಎಂಬ ಬಗ್ಗೆ ವಿಚಾರಣೆ ಮಾಡಿ, ಮುಖ್ಯಮಂತ್ರಿಯವರೇ. ತಾವು ವಿಚಾರಣೆ ಮಾಡಿಸಲಿಲ್ಲವೆಂದರೂ ನಿಮ್ಮ ಮೇಲೆ ಕ್ರಿಟಿಸೈಸೇ, ವಿಚಾರಣೆ ಮಾಡಿಸಿದರೂ ಕ್ರಿಟಿಸೈಸೇ. ತಾವು ತನಿಖೆ ಮಾಡಿಸಿ ಸಿ.ಬಿ.ಐ. ರಿಪೋರ್ಟ್‌ನಲ್ಲಿ ಹೀಗೆ ಹೇಳಲಾಗಿದೆಯೆಂದರೆ ಪರ್ಪಸ್ ಆಗಿ ನಮ್ಮ ಹೆಸರನ್ನು ಸೇರಿಸಿದ್ದಾರೆ ಎಂದು ಹೇಳುತ್ತಾರೆ. ಅದನ್ನೂ ನೀವು ಫೇಸ್ ಮಾಡಬೇಕು. You must face that also. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಕುಮಾರಿ ಜಯಲಲಿತಾರವರು ಮೊನ್ನೆ ನಡೆದ ಚುನಾವಣೆಯಲ್ಲಿ ಡಿಫೀಟ್ ಆಗಿದ್ದರಿಂದ ಸುಮಾರು 150 ಜನರು ಪೆಟ್ರೋಲ್, ಕೆರೋಸಿನ್ ಹಾಕಿಕೊಂಡು ಬರ್ನ್ ಮಾಡಿಕೊಂಡರು. ಅದು ಪ್ರೀತಿಯೇ ಅಥವಾ ಉದ್ದೇಶಪೂರ್ವಕವಾಗಿಯೇ ಅಥವಾ ದುಡ್ಡಿಗೋಸ್ಕರವೇ ಎಂದು

ಡೆಮಾನಸ್ಟ್ರೇಶನ್ ಮಾಡುವುದಕ್ಕೆ ಹೋಗಬಾರದು. ಅಲ್ಲಿ ಅವರು ಕೇಳಬಹುದು. ಅವ್ರೋತ್ತು ಅವರಿಗೆ ಪೋಲಿಸ್‌ನವರು ರಕ್ಷಣೆಯೇ ಕೊಡಲಿಲ್ಲ ಬರ್ನ್ ಮಾಡಿಕೊಂಡರು ಎಂದು ಹೇಳಬಹುದು ಒಂದೊಂದು ಮನೆಗೂ ಪೋಲಿಸ್‌ನವರು ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲ. But one man is equal to 100 members. ಪೋಲಿಸಿನವರು ಮಫ್ತಿಯಲ್ಲಿ ಹೋಗಿ ನಾನು ಪೋಲಿಸ್ ಕಮಿಶನರ್ ಎಂದರೆ ಸಾಮಾನ್ಯ ಮನುಷ್ಯರಿಗೆ ಆ ವಿಚಾರ ಗೊತ್ತಿಲ್ಲದಿದ್ದರೆ, " ಏ ಹೋಗೋ ಸುಮ್ಮನೆ" ಎಂದು ಅವರನ್ನೇ ತಳ್ಳಿಬಿಟ್ಟು ಹೋಗುತ್ತಾನೆ. ಅದೇ ಅವರು ಯೂನಿಫಾರಂ ಬಟ್ಟೆ ಹಾಕಿಕೊಂಡು ಹೋದರೆ ಎಸ್.ಪಿ. ಬಂದಿದ್ದಾರೆ ಎಂದು ಸಾವಿರ ಜನರು ತಕ್ಷಣ ಸೈಲೆಂಟ್ ಆಗಿಬಿಡುತ್ತಾರೆ. ಅಂದರೆ ಅವರು ಹಾಕಿಕೊಂಡ ಬಟ್ಟೆಗೆ ವ್ಯಾಲ್ಯು. ಫೇಸ್‌ಗೆ ವ್ಯಾಲ್ಯು.ಇಲ್ಲ ಬಟ್ಟೆಗೆ ವ್ಯಾಲ್ಯೂ ನೀವು ಯೋಚನೆ ಮಾಡಿ ಸಾರ್. ಎಲ್ಲಾದರೂ ಒಂದು ಬಸ್‌ಸ್ಟ್ಯಾಂಡ್‌ನಲ್ಲಿ ಒಬ್ಬ ಕಮಿಶನರ್ ಹೋಗಲಿ ಆ ವಿಲೇಜ್‌ನವರಿಗೆ ಗೊತ್ತೇ ಆಗುವುದಿಲ್ಲ. ನಾನು ಕಮಿಶನರ್ ಎಂದು ಹೇಳಿದರೂ "ಲೇ ಹೋಗೋ ಇದು ನನ್ನ ಸೀಟು ಇದು" ಎಂದು ಹೇಳುತ್ತಾನೆ. ಅದೇ ಕಾನ್ಸ್‌ಟೇಬಲ್ ಸುಮ್ಮನೆ ಯೂನಿಫಾರಂ ಹಾಕಿಕೊಂಡು ಹೋದರೆ ಆ ವಿಲೇಜ್‌ನವರು ಬನ್ನಿ ಸಾರ್ ನೀವು ಕುಳಿತುಕೊಳ್ಳಿ ಎಂದು ಹೇಳುತ್ತಾನೆ. That is very important. ಹೀಗಿರುವಾಗ ಈ ಸಿಟಿ ಒಳಗಡೆ ಅಲ್ಲಲ್ಲೇ ಈ ಪೋಲಿಸ್‌ನವರು ನಿಂತಿದ್ದರೆ This problem would not have arisen ಎಲ್ಲರೂ ಮಾತನಾಡುವುದು ಇದನ್ನೇ. ಇನ್ನು ಎರಡನೆಯದಾಗಿ ಪೋಲೀಸರನ್ನೇ ಜನರು ಹೊಡೆಯುವುದಕ್ಕೆ ಹೋಗುತ್ತಾರೆ. ಪೋಲಿಸ್ ಕೂಡ human being ತಮಗೆ ಗೊತ್ತಿರಬಹುದು. ಲಯನ್ ಏನು ಮಾಡುತ್ತದೆ. ಎಂಬುದು ನಮಗೆ ಗೊತ್ತಾಗುತ್ತದೆ. ಆನೆ ಏನು ಮಾಡುತ್ತದೆ ಎಂಬುದು ನಮಗೆ ಗೊತ್ತಾಗುತ್ತದೆ. ಅವುಗಳ ಕ್ಯಾರೆಕ್ಟರ್ ಎಲ್ಲರಿಗೂ ಗೊತ್ತಾಗುತ್ತದೆ ಇನ್ನು ಕೋಬ್ರಾ, ಅದು ಏನು ಮಾಡುತ್ತದೆ ಎಂದು ಮನುಷ್ಯನಿಗೆ ಗೊತ್ತಾಗುತ್ತದೆ. ಆದರೆ ಮನುಷ್ಯನ ಕ್ಯಾರಕ್ಟರ್ ಮಾತ್ರ ಗೊತ್ತಾಗುವುದಕ್ಕೆ ಸಾಧ್ಯವೇ ಇಲ್ಲ. ನಿಜವಾಗಿಯೂ ಗೊತ್ತಾಗುವುದೇ ಇಲ್ಲ. ಸೈಲೆಂಟಾಗಿಯೇ ಇರುತ್ತಾನೆ, ಕರ್ನಾಟಕ ರಾಜ್ಯದಲ್ಲಿ ನಮ್ಮ ಬೆಂಗಳೂರು ಎಂದರೆ ಅಲ್ಲಿ ಬಹಳ ಶಾಂತಿ ಇರುತ್ತದೆ, ಲಾಸ್ಟ್ ಸೆಶನ್‌ನಲ್ಲಿ ಏನಾಯಿತು? ಹೌಸ್‌ನಲ್ಲಿ ಶಾಂತಿಯಾಗಿ ನಡೆದಿದಿಯೇ?ಆದ್ದರಿಂದ ಈ ಮನುಷ್ಯ ಯಾವಾಗ ಯಾವ ರೀತಿಯಲ್ಲಿ ಏನು ಮಾಡುತ್ತಾನೆ ಎಂದು ಗೊತ್ತಾಗುವುದಿಲ್ಲ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳೇ ತಮ್ಮ ನೋಟಿಸ್‌ಗೆ ಒಂದು ವಿಚಾರವನ್ನು ತರಬಯಸುತ್ತೇನೆ. ಭಗವಾನ್ ಬುದ್ಧರವರು ಒಂದು ಗ್ರಾಮಕ್ಕೆ

ಹೋಗುತ್ತಾರೆ. ಅಲ್ಲಿರುವ ಜನರೆಲ್ಲರೂ ಭಗವಾನ್ ಬುದ್ಧರವರನ್ನು ನೋಡಿ ಅವರಿಗೆ ಸ್ವೀಟ್ಸ್, ಫ್ರೂಟ್ಸ್ ಮತ್ತು ಜ್ಯೂಸ್ ಇವೆಲ್ಲವನ್ನೂ ತೆಗೆದುಕೊಂಡು ಬಂದು ಅವರಿಗೆ ಕೊಡುತ್ತಾರೆ. ಆದರೆ ಭಗವಾನ್ ಬುದ್ಧರವರು ಅದ್ಯಾವುದನ್ನೂ ತೆಗೆದುಕೊಳ್ಳದೇ ಅವೆಲ್ಲವನ್ನೂ ಬೇಡ ಎಂದು ಹೇಳುತ್ತಾರೆ. ಅದರಲ್ಲಿ ಒಂದನ್ನೂ ಮುಟ್ಟದೇ ಹಾಗೆಯೇ ಜನರಿಗೆ ನಮಸ್ಕಾರ ಹೇಳಿ ಮುಂದೆ ಹೋಗುತ್ತಾರೆ. ಅವರು ಮುಂದೆ ಇನ್ನೊಂದು ವಿಲೇಜಿಗೇ ಹೋದಾಗ ಅಲ್ಲಿರುವ ಜನರೆಲ್ಲರೂ ಹೋಗುತ್ತಿದ್ದಾನೆ ನೋಡಿ ಕಳ್ಳ, ಇವನು ಬಹಳ ಕೆಟ್ಟವನು, ಇವನು ಸರಿಯಿಲ್ಲ, ಇವನು ಕೊಲೆಗಾರ ಎಂದು ಹಾಗೆ ಹೀಗೆ ಬೈಯುತ್ತಾರೆ.ಅವರ ಶಿಷ್ಯರೆಲ್ಲರೂ ಭಗವಾನ್ ಬುದ್ಧರವರನ್ನು ಕೇಳುತ್ತಾರೆ, "ಎನ್ ಭಗವಾನ್‌ರವರೆ, ಇಷ್ಟೆಲ್ಲಾ ಆ ಜನರು ಬೈಯುತ್ತಿದ್ದರೂ ನೀವು ಸುಮ್ಮನೇ ಬರುತ್ತಿದ್ದೀರಲ್ಲಾ ನಾವೂ ಕೂಡ ಅವರನ್ನು ಬೈಯ್ಯಬೇಕಲ್ಲವೇ, ಆ ವಿಲೇಜಿನವರ ಮೇಲೆ ನಾವು ಅಟ್ಯಾಕ್ ಮಾಡಬೇಕಲ್ಲವೇ, ಅದನ್ನು ಬಿಟ್ಟು ಏಕೆ ನೀವು ಸುಮ್ಮನೇ ಬರುತ್ತಿದ್ದೀರಿ" ಎನ್ನುತ್ತಾರೆ. ಆಗ ಭಗವಾನ್ ಬುದ್ಧರವರು ಶಿಷ್ಯರಿಗೆ ಏನು ಹೇಳುತ್ತಾರೆಂದರೆ, "ಮೊದಲ ವಿಲೇಜಿನಲ್ಲಿ ನಮಗೆ ಆ ಜನರು ಸ್ವೀಟ್ಸ್, ಫ್ರೂಟ್ಸ್ ಕೊಟ್ಟಾಗ ನಾವು ಏನು ಮಾಡಿದ್ದೆವೆಂದರೆ ಅದ್ಯಾವುದನ್ನೂ ನಾವು ತೆಗೆದುಕೊಳ್ಳಲೇ ಇಲ್ಲ. ಆಗ ಅದನ್ನು ಅವರು ಏನು ಮಾಡಿದರೆಂದರೆ ನಾವು ತೆಗೆದುಕೊಳ್ಳಲಿಲ್ಲ ವೆಂದು ಅವರೇ ಅವುಗಳನ್ನೆಲ್ಲವನ್ನೂ ತೆಗೆದುಕೊಂಡು ಹೋದರು. ಅದೇ ತರಹ ಎರಡನೇಯ ವಿಲೇಜಿನವರು ಬೈಯ್ದಿರುವುದನ್ನೆಲ್ಲಾ ನಾವು ಮನಸ್ಸಿಗೆ ತೆಗೆದುಕೊಳ್ಳಬಾರದು, ಏನೇನು ಅವರು ಬೈಯ್ದುರೋ ಅವುಗಳನ್ನೆಲ್ಲವನ್ನೂ ಅವರೇ ತೆಗೆದುಕೊಂಡು ಹೋಗಬೇಕು" ಎಂದು ಶಿಷ್ಯರಿಗೆ ಹೇಳಿದರು. ಆ ತರಹ ಯಾರು ಯಾರು ಏನೇನು ಹೇಳುತ್ತಾರೋ ಅದೆಲ್ಲವನ್ನೂ ನಾವು ತೆಗೆದುಕೊಳ್ಳಬಾರದು. ನೀವು ತೆಗೆದುಕೊಳ್ಳಿ ಎಂದು ಹೇಳಿದರೆ ಅವರೇ ಅದನ್ನು ತೆಗೆದುಕೊಳ್ಳ ಬೇಕು. ಅದನ್ನು ಮನಸ್ಸಿನಲ್ಲಿಟ್ಟು ಕೊಂಡು, where is the lacuna? where is the fact?whether enough Constables were there or not? ತಾವು ಹೇಳಬಹುದು ಬೇರೆ ಕಡೆ ಎಲೆಕ್ಷನ್‌ಗಳು ಆಗುವ ಕಡೆಗೆ ನಾವು ಇಲ್ಲಿಂದ ಪೋಲಿಸರನ್ನು ಕಳುಹಿಸಿದ್ದೆವು ಎಂದು ಹೇಳಬಹುದು. ನಮ್ಮ ಡಿ.ಕೆ. ಶಿವಕುಮಾರ್‌ರವರು ಹೇಳಿದರು, "this is defence city" ಬಹಳ ಗಂಭೀರವಾಗಿ ಹೇಳಿದರು. you could have taken their help also. Whether it is your prestige or not? whether you taken or not? That is left to you. ಅವರ ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಯಾರು ತಪ್ಪು

ಮಾಡಿದ್ದರೂ ಆ ತಪ್ಪನ್ನು ಒಪ್ಪಿಕೊಂಡರೆ ನೀವು ಮೇಲೆ ಹೋಗುತ್ತೀರಿ ಎಂದರು. ನಿಜ ಶ್ರೀಮಾನ್ ರಾಜೀವ್‌ಗಾಂಧಿಯವರನ್ನು ಕೊಲೆ ಮಾಡಿದವರು ತಪ್ಪು ಒಪ್ಪಿಕೊಂಡರೆ ಹ್ಯಾಂಗ್ ಮಾಡಿದ ಮೇಲೆ ಅವನು ಮೇಲೆಯೇ ಹೋಗುವುದು. ಅದನ್ನು ಬಿಟ್ಟು ಕೆಳಗಡೆ ಹೋಗುವುದಿಲ್ಲ. ಕೊಲೆ ಮಾಡಿ ಯಾರು ಆ ತಪ್ಪನ್ನು ಮಾಡಿರುತ್ತಾನೋ ಅವನು ನ್ಯಾಯಾಲಯದ ಮುಂದೆ ಹೋದಾಗ ನಾನು ತಪ್ಪು ಮಾಡಿದ್ದೇನೆಂದು ಹೇಳಿದ ಮೇಲೆ ಅವನು ಮೇಲೆಯೇ ಹೋಗಬೇಕು. Hang him, not leave him. ಆದ್ದರಿಂದ ಯಾವ ತರಹ ಮೇಲೆ ಹೋಗುತ್ತಾನೆ ಎಂಬುದನ್ನು ತಾವೇ ಹೇಳಬೇಕು. ಇದು ಮಾತಿಗೆ ಚೆನ್ನಾಗಿದೆ. ತಪ್ಪು ಮಾಡಿರುವುದು ಯಾರು? ಮಾನ್ಯ ಮುಖ್ಯಮಂತ್ರಿಗಳು ಗಲಾಟೆ ಶುರು ಮಾಡಿ ಎಂದು ಹೇಳಿದರಾ ಅಥವಾ ಬೇರೆಯವರು ಹೇಳಿದರಾ? ಇವರ ಹೆಸರು ಕೆಟ್ಟುಹೋಗಲಿ ಎಂದು ಮಾಡಿದ್ದಾರಾ? ಕಮ್‌ಔಟ್ ಎಂದು ಹೇಳುತ್ತಾರೆ. ಇದೆಲ್ಲಾ ಒಂದು ಕಡೆ ನೀವು ಮಾಡಿಕೊಳ್ಳಿ. you are well aware as to protect your Government. ಆದರೆ ಸಾಮಾನ್ಯ ಮನುಷ್ಯ ತೀರಿಹೋಗಿದ್ದಾನೆ ನೋಡಿ. ಯಾರೋ ಯಾವುದಕ್ಕೋ ಮಾರ್ಕೆಟ್‌ಗೆ ಬಂದಾಗ ಅವರ ಮೇಲೆ ಕಲ್ಲು ಹೊಡೆದು ಗಲಾಟೆ ಮಾಡಿದಾಗ ಸತ್ತು ಹೋಗಿದ್ದಾನೆ, ಅಂತಹವರಿಗೆ ಪರಿಹಾರ ಕೊಡಬೇಕಾಗಿರುವುದು, ಕೇವಲ ಎಂಟು ಜನರಿಗೆ ಮಾತ್ರ. ಆ ಎಂಟು ಜನರಿಗೆ ಪರಿಹಾರ ಕೊಡುವುದಕ್ಕೆ ನಿಮಗೆ ಎಷ್ಟು ದಿವಸ ಬೇಕು? ನಿಮಗೆ ಒಳ್ಳೆಯ ಪಬ್ಲಿಸಿಟಿ ಆಗುತ್ತದೆ ಅಲ್ಲವೇ ಸತ್ತು ಹೋಗಿರುವಂತಹ ಎಂಟು ಜನರಿಗೆ ಇಷ್ಟು ಲಕ್ಷ ರೂಪಾಯಿ ಪರಿಹಾರ ಕೊಟ್ಟರು ಎಂದು. ನೀವು ದುಡ್ಡು ಕೊಟ್ಟರೂ ಕೂಡ ಕೆಟ್ಟ ಹೆಸರೇ ಬರುತ್ತದೆ. ಎಂಟು ಜನರಿಗೆ ಪರಿಹಾರವನ್ನು ಒಬ್ಬೊಬ್ಬರಿಗೆ ಕೇವಲ 50 ಸಾವಿರ ರೂಪಾಯಿ ಅಥವಾ ಒಂದು ಲಕ್ಷ ರೂಪಾಯಿ ಕೊಡುತ್ತಾರೆ. ಒಂದು ಮನುಷ್ಯನ ವ್ಯಾಲ್ಯೂ ಕೇವಲ ಒಂದು ಲಕ್ಷ ರೂಪಾಯಿಯೇ? ಒಬ್ಬೊಬ್ಬರಿಗೆ ಹಾಗಾದರೆ ಹತ್ತು ಕೋಟಿ ರೂ ಕೊಡಿ. ಆಗ ಕೂಡ ಕೇವಲ ಒಬ್ಬ ಮನುಷ್ಯನ ವ್ಯಾಲ್ಯೂ ಹತ್ತು ಕೋಟಿ ರೂಪಾಯಿ ಎಂದು ಹೇಳುತ್ತಾರೆ. ಹಾಗಾದರೆ ಒಬ್ಬ ಮನುಷ್ಯನ ವ್ಯಾಲ್ಯೂ ಎಷ್ಟು ಕೋಟಿ ರೂಪಾಯಿ ಆಗುತ್ತದೆಂದು ಯಾರಾದರೂ ಹೇಳಿ. ನೂರು ಕೋಟಿ ರೂಪಾಯಿ ಕೊಡಿ, ಒಬ್ಬ ಮನುಷ್ಯನ ವ್ಯಾಲ್ಯೂ ನೂರು ಕೋಟಿ ರೂಪಾಯಿ ಕೊಟ್ಟಿದ್ದಾನೆ ಎಂದು ಹೇಳುತ್ತಾರೆ. ಹಾಗಾದರೆ ಎಷ್ಟು ಕೋಟಿ ರೂಪಾಯಿ ಕೊಡಬೇಕು? Nobody can assess the value of human being. ಅದನ್ನು ನೀವು ಯೋಚನೆ ಮಾಡಿ. ಪರಿಹಾರವನ್ನು ಒಂದು ಲಕ್ಷ ರೂಪಾಯಿ ಕೊಡುತ್ತೀರೊ 2 ಲಕ್ಷ ರೂಪಾಯಿ

ಕೊಡುತ್ತಾರೊ, 3 ಲಕ್ಷ ರೂಪಾಯಿ ಕೊಡುತ್ತೀರೋ ಅದನ್ನು ಬೇಗ ಕೊಡಿ. ಪಕ್ಕದ ರಾಜ್ಯಗಳಲ್ಲಿ ನೋಡಿ, ತಕ್ಷಣ ಒಂದು, ಒಂದೂವರೆ ಲಕ್ಷ ರೂಪಾಯಿಕೊಡುತ್ತಾರೆ. ಇಲ್ಲವೆಂದರೆ ಎರಡು ಲಕ್ಷ ರೂಪಾಯಿ ಕೊಡುತ್ತಾರೆ. ನೀವು ಎರಡೂವರೆ ಲಕ್ಷ ರೂಪಾಯಿ ಕೊಡಿ. ಇನ್ನೂ ಒಳ್ಳೆಯ ಹೆಸರು ಬರುತ್ತದೆ. ಇಲ್ಲವೆಂದರೆ ಕಡಿಮೆ ಕೊಡಿ ಕೆಟ್ಟ ಹೆಸರು ಬರುತ್ತದೆ ಯಾವ ರೀತಿಯಲ್ಲಾದರೂ ಮಾಡಿ Dispose it fast. ಪರಿಹಾರ ಕೊಡಿ. Don't trust the police man. He will give the statement. "ಸಾರ್ ನಾವು ಮಾಡಿಲ್ಲ ಸಾರ್ ಜನ ಮಾಡಿದ್ದಾರೆ " ಎಂದು. ಪೋಲಿಸ್‌ನವರಿಗೂ ಹೃದಯ ಇದೆ. ಅವರು ಕೂಡ ಅಯ್ಯೋ ಡಾ: ರಾಜ್‌ಕುಮಾರ್ ತೀರಿ ಹೋಗಿದ್ದಾರೆ, "ನಾನೇಕೆ ಕೆಲಸ ಮಾಡಬೇಕು" ಎಂದು ಅವರಿಗೂ ಫೀಲಿಂಗ್ ಆಗಿದೆ ಆ ಫೀಲಿಂಗ್‌ನಲ್ಲಿ "ನಾನು ಯಾವ ಕೆಲಸವನ್ನು ಮಾಡುವುದಿಲ್ಲ" ಎಂದು ಹೇಳಬಹುದು. ಏಕೆಂದರೆ ಅವರು ಮನುಷ್ಯರು ತಾನೆ? ಡಾ: ರಾಜ್‌ಕುಮಾರ್‌ರವರಿಗೆ ಅವರೂ ಅಭಿಮಾನಿಗಳು ತಾನೇ? ಇದನ್ನೆಲ್ಲಾ ತಾವು ನೋಡಬೇಕು. But according to newspaper version and general public version police have failed ಅವರು ಯಾವ ರೀತಿ ಫೇಲ್ ಆಗಿದ್ದಾರೆ? ಬಹುಶಃ ನಾವು ಹೋಗಿ ಜನರನ್ನು ತಡೆ ಹಿಡಿದರೆ ಜನರಿಗೆ ನಮ್ಮ ಮೇಲೆ ಕೋಪ ಬಂದು ಬಿಡುತ್ತದಾ? ಅಥವಾ ಫೀಲಿಂಗ್‌ನಲ್ಲಿ ಇರುವಂತಹ ಜನರನ್ನು ನಾವು ಫೋರ್ಸ್ ಮಾಡಬಹುದೇ? ಅಥವಾ ಜನರ ಮಧ್ಯೆ ಯಾರಾದರೂ ಜಾಯಿನ್ ಆಗಿಬಿಟ್ಟು ಪರ್ಪಸ್ ಆಗಿ ತೊಂದರೆ ಕ್ರಿಯೇಟ್ ಮಾಡಿ ಕೇಡಿ ಹಾಗು ರೌಡಿಗಳ ಜೊತೆಯಲ್ಲಿ ಸೇರಿ ಲೂಟಿ ಮಾಡಬೇಕೆಂದು ಶಾಮೀಲಾಗಿದ್ದಾರಾ? ಇದು ನಡೆಯುತ್ತಿದೆ. ಪೋಲಿಸ್‌ನವರೇ ಅವರ ಜೊತೆ ಸೇರಿ "ಹೊಡಿರಿ, ನುಗ್ಗಿರಿ ಹೋಗಿ"ಎಂದು ಹೇಳುತ್ತಾರೆ. ಇಂತಹವರು ಇದ್ದಾರೆ. ಆದರೆ ಎಲ್ಲಾ ಪೋಲಿಸರು ಇಂತಹವರು ಇದ್ದಾರೆ ಎಂದು ಹೇಳುವುದಕ್ಕಾಗುವುದಿಲ್ಲ This is a fact. ನನ್ನ ಕಾನ್ಸ್ ಟಿಟ್ಯೂಯರನ್ಸಿಯಲ್ಲಿ ಏನು ನಡೆಯುತ್ತಿದೆ ಎಂದು ನನಗೆ ಗೊತ್ತಿದೆ. ಪೋಲಿಸ್‌ನವರು ಕಳ್ಳರ ಜೊತೆಯಲ್ಲಿ ಇದ್ದಾರೆ. ಅಂತಹವರನ್ನೆಲ್ಲಾ ಹುಡುಕಿ Suspend and dismiss them. No excuse for them. The entire House has given you permission. You take serious action. ಯಾವ ಕಾರಣಕ್ಕೂ ಅವರನ್ನು ಸೇರಿಸಿಕೊಳ್ಳದೆ ತಪ್ಪು ಮಾಡಿದವರನ್ನು ಬಿಡಬಾರದು. ಆಮೇಲೆ ನಿಮಗೆ ಕೆಟ್ಟ ಹೆಸರು ಬಂದೇ ಬರುತ್ತದೆ. ಮುಖ್ಯಮಂತ್ರಿಗಳು ಪರ್ಪಸ್ ಆಗಿ ಅವರ vengeance politics ನಿಂದ ನಮ್ಮನ್ನು ಸೇರಿಸಿಕೊಂಡು ಬಿಟ್ಟರು ಎಂದು

ಬೇಕಾದರೆ ಹೇಳಿಕೊಂಡು ಹೋಗಲಿ. ಇವರೇ ತಾನೆ ನಿಮಗೆ ಸದನದಲ್ಲಿ ಹೇಳಿದ್ದು ಪರ್ಮಿಷನ್ ಕೊಟ್ಟಿದ್ದು ಕಲೆಕ್ಟಾಗಿ ಮಾಡಿ ಎಂದರೆ ಇದನ್ನೇ ಕರೆಕ್ಟ್ ಎಂದು ಕರೆಕ್ಟಾಗಿ ಮಾಡಿ ಆಮೇಲೆ ನೋಡೋಣ. Do that and see that the compensation to the families of the poor people who died at the time of the funeral is released after your arrival. ತಕ್ಷಣ ಆ ಎಂಟು ಜನರ ಕುಟುಂಬಗಳನ್ನು ಕರೆದು ಕನ್‌ಸೋಲ್ ಮಾಡಿ ಅವರಿಗೆ ಎಷ್ಟು ಪರಿಹಾರ ಕೊಡಬೇಕೆಂದು ನೋಡಿ ಪರಿಹಾರ ಕೊಡಿ. Then, what is the action against the police? ಕಮಿಷನರನ್ನು ಕೇಳಿ, ಯಾರ್‍ಯಾರ ಮೇಲೆ ತಪ್ಪಿದೆ ಎಂದು. ಒಬ್ಬರೇ ಕಮಿಷನರ್ ಎಲ್ಲಾ ಕಡೆ ನೋಡುವುದಕ್ಕೆ ಆಗುವುದಿಲ್ಲ. ಹೇಗೆ ನೋಡುವುದಕ್ಕಾಗುತ್ತದೆ? ಈಗ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಒಂದು ಮಾತು ಹೇಳಿದರು, ಹತ್ತು ಸಾವಿರ ಪೋಲಿಸ್ ಮನೆಗೆ ಒಬ್ಬ ಐಜಿ ಬೇಕು ಅಂತ ಅವರು ಹಾಗೆ ಹೇಳಿದ್ದು. He can command. ಹತ್ತು ಸಾವಿರ ಜನರನ್ನು ಎಂದು ಹೇಳುತ್ತಾರೆ. ಈ ಕಾಲದಲ್ಲಿ ಆ ರೀತಿ ಆಗುವುದಿಲ್ಲ. ಪೋಲಿಸ್ ಕಮಿಷನರ್ ಪಕ್ಕದಲ್ಲಿ ಇರುವವನನ್ನು "ಸುಮ್ಮನಿರು" ಎಂದು ಆ್ಯಕ್ಷನ್‌ನಲ್ಲಿ ಓಡಿಬಿಡು ಎಂದು ಹೇಳುತ್ತಾನೆ. ಅಂತಹವರು ಇದ್ದಾರೆ. you have to find good and confident officer. You have to take the necessary statment and take necessary action ನನಗೆ ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಉಪಾಧ್ಯಕ್ಷರಿಗೆ ಧನ್ಯವಾದಗಳು.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಉಪಾಧ್ಯಕ್ಷರೆ, ಕನ್ನಡಿಗರ ಹೃದಯ ಸಾಮ್ರಾಜ್ಯದ ಅನಭಿಷಿಕ್ತ ದೊರೆ ಡಾ: ರಾಜ್‌ಕುಮಾರ್ ಅವರ ನಾವು ಹಾಗೂ ಆ ಸಾವಿನ ಸಂದರ್ಭದಲ್ಲಿ ನಡೆದಂತಹ ಘಟನೆ ಇಡೀ ವಿಶ್ವಕ್ಕೆ ಎಲೆಕ್ಟ್ರಾನಿಕ್ ಮಾಧ್ಯಮದ ಮುಖೇನ ಗೊತ್ತಾದ ಕೂಡಲೇ ಸುನಾಮಿ ಅಲೆಯಂತೆ ಆ ಜನ ತಮ್ಮ ಹೃದಯ ಸಾಮ್ರಾಟನನ್ನು ಹಾಗು ಆ ಮಹಾನ್ ಕಲಾವಿದನ ದರ್ಶನವನ್ನು ಮಾಡುವುದಕ್ಕೆ ಚಿಕ್ಕ ವಯಸ್ಸಿನಲ್ಲಿ ಹುಡುಗರಿಂದ ಹಿಡಿದು ವಯೋವೃದ್ಧರವರೆಗೂ, ಮುಖ್ಯಮಂತ್ರಿಯಿಂದ ಹಿಡಿದು ಸಾಮಾನ್ಯ ವ್ಯಕ್ತಿಯವರೆಗೂ ಹಾಗೂ ಪ್ರಧಾನ ಮಂತ್ರಿಯವರಿಗೂ ಅವರನ್ನು ನೋಡಬೇಕು ಎನ್ನುವಂತಹ ತವಕ ಆ ಸಂದರ್ಭದಲ್ಲಿ ಇರುವುದನ್ನು ನಾವು ನೀವೂ ಕೂಡ ಕಂಡೆವು. ದಿನಾಂಕ ಏಪ್ರಿಲ್ 12 ಹಾಗೂ 13ನೇ ಎರಡು ದಿನ ಜನ ಆ

ಮಹಾನ್ ನಟನ ಅಂತಿಮ ಸಂಸ್ಕಾರ ನೋಡಬೇಕು ಹಾಗೂ ಅವರ ಅಂತಿಮ ದರ್ಶನ ಭಾಗ್ಯವನ್ನು ಪಡೆಯಬೇಕು ಎಂದು ಹೇಳಿ ಕರ್ನಾಟಕ ಸಮಸ್ತ ಜನ ನೋಡಬೇಕು ಎನ್ನುವ ಹೆಬ್ಬಯಕೆಯನ್ನು ಹೊಂದಿದ್ದರು. ಬಹುಶಃ ಅವರ ಸಾವಿನ ಸುದ್ದಿಯನ್ನು ಯಾರು ನಿರೀಕ್ಷಣೆ ಮಾಡಿರಲಿಲ್ಲ. ನಾನೂ ಸಹ ಪೀಣ್ಯದಲ್ಲಿ ಒಂದು ಸತ್ಯನಾರಾಯಣ ಪೂಜೆಗೆ ಹೋಗುತ್ತಿದ್ದೆ. ಆಗ ಯಾರೋ ಒಬ್ಬರು ಮೊಬೈಲ್‌ಗೆ ಈ ರೀತಿ ಆಗಿದೆ ಎಂದು ನ್ಯೂಸ್ ಕೊಟ್ಟರು. ಕೂಡಲೇ ಎರಡೂವರೆ ಗಂಟೆಗೆ ಅವರ ಮನೆ ಹತ್ತಿರ ನಾನು ನನ್ನ ತಾಯಿ ಮತ್ತು ಒಂಬತ್ತು ವರ್ಷದ ಮಗ ನೋಡಬೇಕೆಂದು ಒಳಗಡೆ ಹೋದಾಗ ಅಷ್ಟೊತ್ತಿಗಾಗಲೇ ಜನ ತುಂಬಿಕೊಂಡು ಬಿಟ್ಟಿದ್ದರು. ಆದರೂ ಒಳಗಡೆ ಹೇಗೋ ಹೋಗುವುದಕ್ಕೆ ಸಾಧ್ಯವಾಯಿತು. ಆದರೆ ಅಲ್ಲಿ ಹೋಗಿ ಅಲ್ಲಿನ ಸ್ಥಿತಿ ನೋಡಿದಾಗ ನನಗೆ ಆಶ್ಚರ್ಯವಾಯಿತು. ಅಷ್ಟೊತ್ತಿಗಾಗಲೇ ಸತ್ತು ಒಂದೂವರೆ ಎರಡು ಗಂಟೆ ಸಮಯವಾಗಿಬಿಟ್ಟಿತ್ತು. ಆಗಲೆ ಬಹುಶಃ ಡಾ: ರಾಜ್‌ಕುಮಾರ್‌ರವರ ಕಣ್ಣನ್ನು ತೆಗೆದಿದ್ದರು. ಅವರ ಪಾರ್ಥೀವ ಶರೀರವನ್ನು ಆಂಬ್ಯುಲೆನ್ಸ್‌ನಲ್ಲಿ ಇಟ್ಟಿದ್ದರು. ಆಗ ನನಗೆ ಅನಿಸಿದ್ದು, ಇದೇನಿದು ಇಂತಹ ಒಂದು ಸ್ಥಿತಿಯಲ್ಲಿ ಹಾಗೂ ವ್ಯವಸ್ಥೆಯಲ್ಲಿ ಡಾ: ರಾಜ್‌ಕುಮಾರ್‌ರವರನ್ನು ಇಲ್ಲಿಗೆ ತಂದಿದ್ದು ಮೊದಲನೇ ತಪ್ಪು. ಅವರ ಸಾವಿನ ವಿಷಯವನ್ನು N.D.T.V. ಗೆ. ಡಾ: ರಮಣರಾವ್ ಅವರು ಹೇಳಿದರೋ ಅಥವಾ ಯಾರೂ ವಿಷಯ ಕೊಟ್ಟರೋ ಗೊತ್ತಿಲ್ಲ N.D.T.V ಯಲ್ಲಿ ಫಸ್ಟ್ ಫ್ಲಾಶ್ ಆಯಿತು. ನಂತಹ ನಮ್ಮ ಕನ್ನಡ ಮಾಧ್ಯಮದ ಬೇರೆ ಬೇರೆ ಚಾನೆಲ್‌ಗಳಲ್ಲಿ ಬರುವುದಕ್ಕೆ ಪ್ರಾರಂಭವಾಯಿತು. ಬಹುಶಃ ಅಲ್ಲಿ ಮಾಡಿದಂತಹ ಆ ಒಂದು ತಪ್ಪಿನಿಂದಾಗಿ ಇಡೀ ಜಗತ್ತಿನ ಅದರಲ್ಲೂ ವಿಶೇಷವಾಗಿ ಕರ್ನಾಟಕ ಜನ ಡಾ: ರಾಜ್‌ಕುಮಾರ್‌ರವರನ್ನು ನೋಡಬೇಕು ಎಂದು ಆ, ಅಲೆಗಳಲ್ಲಿ ಅಂದರೆ ಸುನಾಮಿ ಅಲೆಯ ರೀತಿಯಲ್ಲಿ ಬರುವುದಕ್ಕೆ ಶುರುವಾಗುತ್ತದೆ. ಆಗ ಅಲ್ಲಿ ಇದ್ದಂತಹ ಪೋಲಿಸ್ ಸಂಖ್ಯೆಯನ್ನು ನೋಡಿದಾಗ ನನಗೆ ಅನಿಸಿದ್ದು, ಬಹುಶಃ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಪೋಲಿಸ್ ಕಮಿಷನರ್ ಕೂಡ ಅಲ್ಲಿದ್ದರು. ಬಹಳಷ್ಟು ಹಿರಿಯ ಪೋಲಿಸ್ ಅಧಿಕಾರಿಗಳೂ ಕೂಡ ಅಲ್ಲಿದ್ದರು. ಡಾ: ರಾಜ್‌ಕುಮಾರ್ ಅವರ ದೇಹವನ್ನು ಮನೆಯಿಂದ ತೆಗೆದುಕೊಂಡು ಹೋದಂತಹ ಸಂದರ್ಭದಲ್ಲಿ ಗೊತ್ತಾಯಿತು, ಪ್ಯಾಲೇಸ್ ಗ್ರೌಂಡ್ ನಲ್ಲಿ ಇಡುವುದಕ್ಕೆ ಆರೇಂಜ್ ಮಾಡುತ್ತಿದ್ದಾರೆ ಎಂದು. ಅಲ್ಲಿಯವರೆಗೂ ಕ್ರಾಡ್ ಸ್ವಲ್ಪ ಕಂಟ್ರೋಲ್ ಆಗಿ ಇತ್ತು. ಪ್ಯಾಲೇಸ್‌ಗೆ ತೆಗೆದುಕೊಂಡು ಹೋದರು ಎಂದಾಗ

ನಾವೂ ಕೂಡ ಅಲ್ಲಿ ಪ್ಯಾಲೇಸ್ ನಲ್ಲಿ ಆರೆಂಜ್ ಮಾಡಿರಬೇಕು ಎಂದುಕೊಂಡು ಕೇಳಿದಾಗ ಸ್ವಲ್ಪ ಹೊತ್ತಿನ ನಂತರ ನಮಗೆ ವಿಷಯ ಬಂತು ಅದೇನೆಂದರೆ ಇಲ್ಲ, ಅಲ್ಲಿ ಆರೆಂಜ್ ಮಾಡಿಲ್ಲ. ಸುಮ್ಮನೇ ತೆಗೆದುಕೊಂಡು ಹೋಗಿದ್ದಾರೆ ಪೂರ್ಣಪ್ರಜ್ಞದಲ್ಲಿ ಆರೆಂಜ್ ಮಾಡುತ್ತಾರಂತೆ ಆಗ ಅಲ್ಲಿ ನೋಡಬಹುದು ಎಂದು. ಆಗ ನನಗೆ ಅನಿಸಿತು ಎಂತಹ ಬಾಲ ಶವಾದಂತಹ ನಿರ್ಧಾರ ಇದು, ಡಾ: ರಾಜ್‌ಕುಮಾರ್ ಅವರ ಪಾರ್ಥಿವ ಶರೀರವನ್ನು ಈ ಒಂದು ಸಣ್ಣ ಮೈದಾನಲ್ಲೇ ಇಟ್ಟರೆ ಸುತ್ತಮುತ್ತ ಇರುವಂತಹ ಮನೆಗಳ ಗತಿ ಏನಾಗಬೇಕು ಎಂದು ನನಗೂ ಹಾಗು ಪೋಲಿಸ್ ಕಮಿಷನರ್ ಮತ್ತು ಬಹಳಷ್ಟು ಜನ ಪೊಲೀಸ್ ಅಧಿಕಾರಿಗಳಿಗೆ ಅನಿಸಿತು. ಅಷ್ಟೊತ್ತಿಗಾಗಲೇ ಆ ಒಂದು ಬಾಡಿ ಇಟ್ಟಿದ್ದಂತಹ ವ್ಯಾನು ಪ್ಯಾಲೇಸ್ ಕಡೆಯಿಂದ ಬಿಟ್ಟು ಸುಮಾರು ಮೂರು ನಾಲ್ಕು ಗಂಟೆ ಹೊತ್ತಿಗೆ ಗಾಡಿ ಬಂತು. ಬಂದು ಪಾರ್ಥಿವ ಶರೀರವನ್ನು ಅಲ್ಲಿ ಇಡುತ್ತಿದ್ದ ಹಾಗೆ ಅಲ್ಲಿಯ ಜನರು ಪೊಲೀಸ್‌ನವರ ಮಾತನ್ನಾಗಲೀ ಅಥವಾ ಬೇರೆ ಯಾರ ಮಾತನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಶಾಮಿಯಾನ ಬೇಕು ಎಂದಾಗ ಕಾರ್ಪೊರೇಷನ್‌ಗೆ ಪೋನ್ ಮಾಡಿದೆವು. ಆ ವಿಷಯ ಜನರಿಗೆ ಗೊತ್ತಾಯಿತು. ಆಗ ಆಕ್ರೋಶಕ್ಕೆ ಒಳಗಾದರು ಏನ್ರೀ ಯಾರೊ ಒಬ್ಬರು ರಾಜಕಾರಣಿ ಸತ್ತರೆ ಯಾವ ರೀತಿ ಅಂತ್ಯ ಸಂಸ್ಕಾರ ಮಾಡುತ್ತೀರಿ? ಯಾವ ರೀತಿ ಇಡುತ್ತೀರಿ? ನೀವು ರಾಜಕಾರಣಿಗಳು, ಎಂ.ಎಲ್.ಎ.ಗಳು ಎಂದೇಳಿ ನಮಗೆ ಹಾಗೂ ಡೆಪ್ಯೂಟಿ ಮೇಯರ್ ಗೆ ಹೀನಾಮಾನವಾಗಿ ಬೈದು ಅಮಾನುಷವಾಗಿ ವರ್ತಿಸಿದರು.

ಒಬ್ಬರು ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೆ, ಆ ಬಾಡಿ ಯಾರು ತೆಗೆದುಕೊಂಡು ಹೋಗಿದ್ದರು ಎಂಬುದು ಗೊತ್ತಾಗಬೇಕು. ಆ ಬಾಡಿ ಮೂರು ಗಂಟೆ ಯಾರ ಕೈಯಲ್ಲಿ ಇತ್ತು ಎಂಬುದನ್ನು ಹೇಳಿ.

ಶ್ರೀ ನೆ.ಲ. ನರೇಂದ್ರ ಬಾಬು : ನಾನು ಆ ಬಾಡಿಯನ್ನು ನೋಡುವಷ್ಟರಲ್ಲಿ ಆ ಅಂಬ್ಯುಲೆನ್ಸ್ ಗ್ಲಾಸ್ ಒಡೆದು ಹಾಕಿ, ಒಳಗಡೆ ಡಾ: ರಾಜ್‌ಕುಮಾರ್ ಅವರ ಬಾಡಿಗೆ ಕೋಲ್ಡ್ ಸ್ಟೋರೇಜ್ ಒದಗಿಸಿರಲಿಲ್ಲ ಬಾಡಿ ಹೀಟ್ ಆಗುತ್ತಿದೆ, ಜಗ್ಗೇಶ್ ಒಬ್ಬರು ಮಾತ್ರ ಆ ಬಾಡಿ ಪಕ್ಕದಲ್ಲಿ ಕುಳಿತಿದ್ದರು. ಇನ್ನು ಉಳಿದ ಅವರ ಅಭಿಮಾನಿ ಬಳಗ ಇತ್ತು. ಅಲ್ಲಿಗೆ ಬಂದಾಗ ನನಗೆ ಅನಿಸಿತು. ಬಹುಶಃ ನಾನು ಅಲ್ಲಿಗೆ ಬಂದು ನೋಡಿಕೊಂಡು ಹೋಗಬೇಕು ಎಂದು ಬಂದವನು ಒಬ್ಬ ಜನ ಪ್ರತಿನಿಧಿಯಾಗಿ ನಾನು ಹೇಡಿ ರೀತಿಯಲ್ಲಿ ಹೋದರೆ ಸರಿಯಲ್ಲವೆಂದು ಪೋಲಿಸ್ ಜೊತೆ ಕೈಜೋಡಿಸಿ ಹೇಗಾದರೂ ಮಾಡಿ ಪರಿಸ್ಥಿತಿಯನ್ನು

ಕಂಟ್ರೋಲ್‌ಗೆ ತರಬೇಕು ಎನ್ನುವಂತಹ ಪ್ರಯತ್ನವನ್ನು ಮಾಡಿದೆವು. ಆಗ ಇಲ್ಲೇ ಬಾಡಿ ಇಡುತ್ತಾರೆ ಎನ್ನುವ ಶಂಕೆ ಬಂದು ಗಲಾಟೆ ಶುರುವಾಯಿತು. ಆಗ ಮೊದಲು ಪೋಲಿಸ್ ಗಾಡಿಗೆ ಬೆಂಕಿ ಹಚ್ಚುವಂತಹ ಪ್ರಕರಣ ಅಲ್ಲಿಂದ ಪ್ರಾರಂಭವಾಯಿತು. ಆಗಲೇ ಜನ ಆಕ್ರೋಶಗೊಂಡು "ಏನು ಇನ್ನೂ ನಿರ್ಧಾರ ಮಾಡಿಲ್ಲವೇ? ಇಷ್ಟು ಬಾಲಿಶವಾಗಿ ಸರ್ಕಾರದ ವ್ಯವಸ್ಥೆ ಇದೆಯಾ ಎಂದು" ಕೂಗಾಡಿದರು. ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವ ಉದ್ದೇಶದಿಂದ ಒಬ್ಬರು ಸ್ನೇಹಿತರ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಕಂಟಾಕ್ಟ್ ಮಾಡಿದೆ. ಅವರಿಗೆ ಹೇಗಾದರೂ ಮಾಡಿ ದೂರದಲ್ಲೆ ವಿಶಾಲವಾದ ಜಾಗಕ್ಕೆ ಶಿಫ್ಟ್ ಮಾಡಬೇಕೆಂದು ಹೇಳಿದೆ. ಅವರಿಗೆ ವಿಷಯವನ್ನು ತಿಳಿಸಿದೆ. ಕೃಷ್ಣಯ್ಯನವರಿಗೂ ನಾನು ಮೆಸೇಜ್‌ನ್ನು ಕೊಟ್ಟೆ. ಇದು ಸೂಕ್ತ ಸ್ಥಳ ಅಲ್ಲ ಸಾರ್ ಬಹಳ ಕಷ್ಟವಾಗುತ್ತದೆ ಕಂಟ್ರೋಲ್ ಮಾಡುವುದಕ್ಕೆ ಎಂದು ಹೇಳಿದೆ. ಅಷ್ಟೊತ್ತಿಗೆ ಆಗಲೇ ಕಂಠೀರವ ಸ್ಟೇಡಿಯಂ ಎಂದು ತೀರ್ಮಾನವಾಯಿತು. ಜನ ಅಷ್ಟೊತ್ತಿಗಾಗಲೇ ಬಹಳ ಸಿಟ್ಟಿಗೆದ್ದಿದ್ದರು, ಅದು ಸಾತ್ವಿಕ ಸಿಟ್ಟು ಎಂದು ಹೇಳಬೇಕೋ ಅಥವಾ ಆ ಜನಗಳಿಗೆ ಬರುತ್ತಿದ್ದಂತಹ ಆಕ್ರೋಶ ನೋಡಿದರೆ ಏನು ಇದು ಎಂದು ನನಗೆ ಮನಸ್ಸಿನಲ್ಲಿ ಬಂತು. ಇದೇನು ಇಷ್ಟು ಜನ ಐಎಎಸ್ ಆಫೀಸರ್ ಇದ್ದಾರೆ, ಇಷ್ಟು ಜನ ಪೋಲಿಸ್ ಆಫೀಸರ್ ಇದ್ದಾರೆ, ಮಾನ್ಯ ಮುಖ್ಯಮಂತ್ರಿಗಳು ಹೊಸಬರಾದರೂ ಹಿರಿಯ ಅಧಿಕಾರಿಗಳು ಒಂದು ಪೂರ್ವ ಭಾವಿಯಾಗಿ ಒಂದು ಪ್ಲಾನಿಂಗ್ ಏಕೆ ಮಾಡಿಕೊಳ್ಳಲಿಲ್ಲವೆಂದು ನೋವು ನನಗೆ ಆಯಿತು. ಆವತ್ತು ರಾತ್ರಿ ಒಂದೂವರೆ ಗಂಟೆಗೆ ನಾನು ಮನೆಗೆ ಹೋಗಿದ್ದು. ತಿರುಗಿ ಬೆಳಿಗ್ಗೆ ಎದ್ದು ಜೊತೆಯಲ್ಲಿ ಇದ್ದು, ಅವರ ಬಾಡಿ ತೆಗೆದುಕೊಂಡು ಹೋದಂತಹ ಸಂದರ್ಭದಲ್ಲಿ ಆದಂತಹ ಅವಮಾನಗಳು ನೋಡಿದರೆ, ನನ್ನ ಮೇಲೆ ಕೈ ಒಂದು ಮಾಡಲಿಲ್ಲ ಅಷ್ಟೇ ಪೂರ್ತಿ ಇದು ನಾರಾಯಣಗೌಡರಿಗೆ ಗೊತ್ತು ಅಲ್ಲಿದ್ದಂತಹ ಪೋಲಿಸ್ ಅಧಿಕಾರಿಗೆ ಗೊತ್ತು, ರಾಮಮೂರ್ತಿಯವರಿಗೆ ಗೊತ್ತು ಅಲ್ಲಿ ಯಾವ್ಯಾವ ರೀತಿ ಜನ ನಡೆದುಕೊಳ್ಳುತ್ತಿದ್ದರು ಎಂದು. ಆದರೂ ಕೂಡ "ಬರ್ರಪ್ಪ ಆಯಿತು, ಏನೋ ಆಗಿದೆ ಮೊದಲು ಬಾಡಿಯನ್ನು ಎಲ್ಲರ ದರ್ಶನಕ್ಕೆ ಇಡೋಣ" ಎಂದು ಪ್ರೀತಿಯಿಂದ ಹೇಗೇಗೋ ಮಾಡಿದರೂ ಆದರೂ ರಸ್ತೆಯಲ್ಲಿ ಪಕ್ಕದಲ್ಲೇ ನಿಂತಿದ್ದಂತಹ ವಾಹನಗಳಿಗೆ ಹೊಡೆದುಕೊಂಡು ಹೋಗುತ್ತಿದ್ದುದ್ದನ್ನು ನೋಡಿದಾಗ ಅನಿಸಿತು ಇದೇನು ಸಮೂಹ ಸನ್ನಿ ಆಗಿದೆಯಾ ಎನ್ನುವ ಭಾವನೆ ನನಗೆ ಬಂತು; ಇದು ನಾನು ಮನಸ್ಸಿನ ಅಂತರಾಳದಿಂದ ಏಳುತ್ತಿರತಕ್ಕಂಥ ಮಾತು. ಯಾವುದೇ ರಾಜಕೀಯ ಪ್ರೇರಿತನಾಗಿ ನಾನು ಈ ಮಾತನ್ನಾಡುತ್ತಿಲ್ಲ.

ಸಮೂಹ ಸನ್ನಿಯ ವಾತಾವರಣ ಉಂಟಾಗಿತ್ತು. ರಾಜಕುಮಾರ್‌ರವರು ಸತ್ತರು ಎನ್ನುವ ವಿಷಯ ಯಾವಾಗ ನಮಗೆ ಗೊತ್ತಾಯಿತೋ, ಇಂಥ ಒಬ್ಬ ಮಹಾನ್ ನಟ ಅಥವಾ ಮಹಾನ್ ವ್ಯಕ್ತಿ, ಜನಪ್ರಿಯ ವ್ಯಕ್ತಿ, ಜನಗಳಿಗೆ ಬೇಕಾಗಿರತಕ್ಕಂಥ ವ್ಯಕ್ತಿ ಸತ್ತರು ಎಂದು ಗೊತ್ತಾದ ತಕ್ಕಣ ಅದರ ಬಗ್ಗೆ ಪೂರ್ವಭಾವಿಯಾಗಿ ಚಿಂತನೆ ಮಾಡಬೇಕಾದುದು ಈ ವ್ಯವಸ್ಥೆಯ ಕರ್ತವ್ಯ, ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದಾಗ ಈ ಎಲ್ಲಾ ಚಿಂತನೆಯನ್ನು ಮುಂಚಿತವಾಗಿ ಏಕೆ ಮಾಡುವುದಿಲ್ಲ ಎಂದು ನನಗನ್ನಿಸಿತು. ಇನ್ನು ಮುಂದಿನ ದಿನಗಳಲ್ಲಾದರೂ, ಯಾರಾದರೂ ಮಹಾನ್ ವ್ಯಕ್ತಿ ಸತ್ತಾಗ ಹೇಗೆ ಮಾಡಬೇಕು ಎನ್ನುವ ಪೂರ್ವಬಾವಿ ಯೋಜನೆಗಳಿಲ್ಲದೇ ಹೋದರೆ, ನಾವು ಈ ವ್ಯವಸ್ಥೆಯನ್ನು ಹೇಗೆ ನಿಭಾಯಿಸಲು ಸಾಧ್ಯವಾಗುತ್ತದೆ? ಹಿಂದೆ ಇಂಥ ಪರಿಸ್ಥಿತಿಗಳಲ್ಲಿ ಏನು ವ್ಯವಸ್ತೆ ಮಾಡಿದ್ದಾರೆನ್ನುವುದನ್ನು ನಾನು ನೋಡಿದ್ದೇನೆ. ಇಂದಿರಾಗಾಂಧಿಯವರು ಸತ್ತಾಗ ನಾವು ಚಿಕ್ಕ ವಯಸ್ಸಿನ ಹುಡುಗರು ರಾಜೀವ್‌ಗಾಂಧಿಯವರು ಸತ್ತಾಗಲೂ ನಾವು ನೋಡಿದ್ದೇವೆ. ಇತ್ತೀಚಿನ ದಿನಗಳಲ್ಲಿ ಸತ್ತಂಥ ನಾಯಕರುಗಳು ಅಥವಾ ಎಂಜಿಆರ್‌ರವರು ಸತ್ತಾಗ ಅವರ ಕೊನೆಯ ದರ್ಶನದ ವ್ಯವಸ್ಥೆಗೆ ಮಾಡತಕ್ಕಂಥ ಪ್ಲಾನಿಂಗ್ ಹೇಗಿತ್ತು, ಮಿಲಿಟರಿಯವರನ್ನು ಅಥವಾ ರ್‍ಯಾಪಿಡ್ ಟಾಸ್ಕ್‌ಫೋರ್ಸ್‌ನವರನ್ನು ಹೇಗೆ ಉಪಯೋಗಿ ಸಿಕೊಂಡರು, ಇದ್ಯಾವುದನ್ನೂ ನಾವು ಇಲ್ಲಿ ನೋಡಲಿಲ್ಲ. ನನಗೆ ಆಶ್ಚರ್ಯವಾಗಿದ್ದು ಏನೆಂದರೆ ಕಂಟ್ರೋಲ್ ಮಾಡುವ ಸ್ಥಿತಿಯಲ್ಲಿ ಪೋಲಿಸರು ಇರಲಿಲ್ಲ. ಕೊನೆಯವರೆಗೂ ಪಾರ್ಥಿವ ಶರೀರವನ್ನು ಎಲ್ಲಿ ಇಡುತ್ತಾರೆ ಎನ್ನುವ ಡಿಸಿಷನ್ ಪೋಲಿಸ್ ಆಫೀಸರ್‌ಗಳಿಗೆ ಗೊತ್ತಿಲ್ಲ. ಕಮೀಷನರ್‌ರವರಿಗೆ ಗೊತ್ತಿಲ್ಲ. ನಾನು ಅಲ್ಲಿ ಕ್ಷಣಕ್ಷಣಕ್ಕೂ ನಿರಂತರವಾಗಿ, "ಎಲ್ಲಿ ಇಡುತ್ತೀರಿ, ಜನಗಳು ನನ್ನನ್ನು ಪ್ರಶ್ನೆ ಮಾಡುತ್ತಿದ್ದಾರೆ " ಎಂದು ಕೇಳುತ್ತಿದ್ದೆ. ಜನಗಳು ನನ್ನನ್ನು ಕೇಳುತ್ತಿದ್ದರು. ನಾನು ಅವರನ್ನು ಕೇಳುತ್ತಿದ್ದೆ. ಅವರ ಕುಟುಂಬದವರ ಜೊತೆ ಮಾತನಾಡಿ ನಿರ್ಧಾರ ತೆಗೆದುಕೊಳ್ಳುವುದರಲ್ಲಿಯೂ ವಿಳಂಬವಾಗಿದೆ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ ಸ್ಟೇಟ್ ಫ್ಯೂನರಲ್ ಎಂದ ತಕ್ಷಣ ಅದರ ಜವಾಬ್ದಾರಿ ನಮಗೆ ಬರುತ್ತದೆ, ರಾಜ್ಯ ಸರ್ಕಾರಕ್ಕೆ ಬರುತ್ತದೆ. ಆದರೆ ಏಕೆ ಆ ಕ್ಷಣದಲ್ಲಿ ಎಡವಿದರು. ಏಕೆ ಆ ಕ್ಷಣದಲ್ಲಿ ನಾವು ಗ್ರಹಿಸಲಿಲ್ಲ ಎನ್ನತಕ್ಕಂಥಾದ್ದು ಬಹುಶಃ ಈ ಎಲ್ಲಾ ಅನಾಹುತಕ್ಕೆ ಪ್ರೇರಣೆಯಾಯಿತೇನೋ ಎನ್ನುವ ಭಾವನೆಯನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಬಹಳಷ್ಟು ಜನ ಊಟ ತಿಂಡಿ ಬಿಟ್ಟುಹುಚ್ಚರ ಹಾಗೆ ಆಡುತ್ತಿದ್ದರು. ಹುಡುಗರು ಮಾತ್ರವಲ್ಲ, ಹೆಂಗಸರುಗಳೂ ಇದ್ದರು. ಯಾರಾದರೂ ತಮ್ಮ ಕುಟುಂಬದವರು ಸತ್ತರೆ ಹೂವು

ಹಿಡಿದುಕೊಂಡು ಬರುವ ಹಾಗೆ ಹೂವು ತಂದು ನಾವು ಅಣ್ಣಾವ್ರಿಗೆ ಹೂವು ಹಾಕಬೇಕೆಂದು ಹೇಳುತ್ತಿದ್ದರು. ಈ ರೀತಿಯ ಒಂದು ವಿಚಿತ್ರವಾದ ಸಮೂಹ ಸನ್ನಿಯ ವಾತಾವರಣವನ್ನು ನಾನು ಸಮಗ್ರವಾಗಿ ನೋಡುತ್ತಾ ಬಂದೆ. ಇದನ್ನೆಲ್ಲ ಕೇಳಿದರೆ ಕೆಲವರಿಗೆ ಆಶ್ಚರ್ಯವಾಗಬಹುದು. ದಿವಂಗತ ರಾಜಕುಮಾರ್‌ರವರು ಎಲ್ಲರಿಗೂ ಒಂದು ರೀತಿಯ ಪ್ರೇರಣೆ ನೀಡುತ್ತಿದ್ದರು. ನಮ್ಮ ಕುಟುಂಬದಲ್ಲಿ ಯಾರಾದರೂ ಸತ್ತರೆ ಅವರನ್ನು ನೋಡಬೇಕು ಎನ್ನುವ ಭಾವನೆ ಇರುವ ಹಾಗೆ ಇಲ್ಲೂ ರಾಜಕುಮಾರ್‌ರವರನ್ನು ನೋಡಬೇಕು ಎನ್ನುವ ಭಾವನೆ ಎಲ್ಲರಿಗೂ ಇತ್ತು. ಎಲೆಕ್ಟ್ರಾನಿಕ್ ಮಾಧ್ಯಮದವರು ಬಿತ್ತರಿಸದಿದ್ದರೆ, ಬಹಳಷ್ಟು ಜನ ಬೇರೆ ಕಡೆಗಳಿಂದ ವೆಹಿಕಲ್‌ಗಳನ್ನು ಮಾಡಿಕೊಂಡು ಬೆಂಗಳೂರಿಗೆ ಬರುತ್ತಿದ್ದರೇನೋ ಎಂದು ನಾನು ಹೇಳುತ್ತೇನೆ. ಇಷ್ಟೊಂದು ಗುಂಪು ಸೇರಿರುವ ವಾತಾವರಣವಿದೆ ಎಂದು ತಿಳಿದ ಮೇಲೆ ಬಹಳಷ್ಟು ಜನರು ಬರಲಿಲ್ಲ ಇಲ್ಲದಿದ್ದರೆ, ಇದಕ್ಕಿಂತ ಹತ್ತರಷ್ಟು ಜನರು ಬರುತ್ತಿದ್ದರೋ ಏನೋ?ನನಗೆ ಗೊತ್ತಾದ ಹಾಗೆ ಹೆಸರುಘಟ್ಟದಲ್ಲಿರುವ ಫಿಲ್ಮ್ ಸಿಟಿ ವಿಶಾಲವಾಗಿದ್ದು, ಅಲ್ಲಿಗೆ ಪಾರ್ಥಿವ ಶರೀರವನ್ನು ತೆಗೆದುಕೊಂಡು ಹೋಗುತ್ತಾರೆ ಎನ್ನುವ ಸುದ್ದಿ ಇತ್ತು, ಪುನೀತ್ ಫಾರಂಗೆ ತೆಗೆದು ಕೊಂಡು ಹೋಗುತ್ತಾರೆ ಎನ್ನತಕ್ಕಂಥಾದ್ದೂ ಇತ್ತು, ಆಮೇಲೆ ಕಂಠೀರವ ಸ್ಟುಡಿಯೋ ಎಂದು ನಿರ್ಧಾರ ಮಾಡಿದ ಮೇಲೆ ನಮಗನ್ನಿಸಿತು, ಕಂಠೀರವ ಸ್ಟುಡಿಯೋವೇನೋ ಓ.ಕೆ. ಆದರೆ ಲಕ್ಷಾಂತರ ಜನರು ಬರುವ ನಿರೀಕ್ಷೆಯಿರುವಾಗ ಹೇಗೆ ಅಲ್ಲಿ ನಿರ್ವಹಣೆ ಮಾಡುತ್ತಾರೆ ಎಂದು ಅನ್ನಿಸಿತು. ವಿಶೇಷವಾಗಿ ರಾಜಾಜಿನಗರ, ಲಗ್ಗೆರೆ ಆ ಕಡೆಗಳ ಬೆಲ್ಟ್‌ನಲ್ಲಂತೂ ಡಾ: ರಾಜ್‌ಕುಮಾರ್ ರವರ ಅಭಿಮಾನಿಗಳು, ಕನ್ನಡ ಅಭಿಮಾನಿಗಳು ಅಷ್ಟೊಂದು ವಿಶಾಲವಾದ ಸಂಖ್ಯೆಯಲ್ಲಿ ಬರತಕ್ಕಂಥ ಪರಿಸರವಿತ್ತು. ಇದನ್ನು ಯೋಚಿಸಿದಾಗ ಬಹಳಷ್ಟು ಕಷ್ಟವಾಗುತ್ತದೆ ಎಂದು ಆ ಕ್ಷೇತ್ರದ ಶಾಸಕನಾಗಿ ನನಗನ್ನಿಸಿತು. ರಾಜ್‌ಕುಮಾರ್ ರೋಡ್ ನಿಂದ ಹಿಡಿದು ಆ ಕಡೆಯೆಲ್ಲಾ ಇದೇ ರೀತಿಯಾಗಬಹುದು ಎನ್ನುವ ಆತಂಕ ಆ ಕ್ಷೇತ್ರದ ಶಾಸಕನಾಗಿ ನನಗಿತ್ತು. ರಾತ್ರಿ ತೆಗೆದುಕೊಂಡು ಹೋಗಿ ಇಡುವಾಗಲೂ ನಾನು ಒಂದು ಸಲಹೆ ಕೊಟ್ಟೆ, ಅಲ್ಲಿದ್ದಂಥ ಒಬ್ಬರು ಪ್ರಿನ್ಸಿಪಲ್ ಸೆಕ್ರೆಟರಿಯವರಿಗೆ ನಾನು ಹೇಳಿದೆ, ಈಗ ನಾನು ಅವರ ಹೆಸರನ್ನು ಹೇಳುವುದಿಲ್ಲ, ನಾನು ಅವರಿಗೆ ಹೇಳಿದೆ, "ಸೆಂಟರ್‌ನಲ್ಲಿ ಇಟ್ಟುಬಿಡಿ" ಒಂದು ಕಡೆ ವಿಐಪಿಗಳನ್ನು ಮೈನ್‌ಗೇಟಿನಿಂದ ಬಿಡಿ, ಪಬ್ಲಿಕ್‌ನ್ನು ಇನ್ನೊಂದು ಕಡೆಯಿಂದ ಬಿಡಿ" ಎಂದು ಹೇಳಿದರೂ ಏನೂ ವ್ಯವಸ್ಥೆಯಿಲ್ಲ. ಆವತ್ತು ಅಲ್ಲಿ ಪೊಲೀಸ್ ಆಫೀಸರ್‌ಗಳಿಗೆ ಬ್ಯಾರಿಕೇಡ್‌ಗಳು ಸಿಗುತ್ತಿರಲಿಲ್ಲ, ಬ್ಯಾರಿಕೇಡ್‌ಗಳನ್ನು ಜೋಡಿಸಿಕೊಳ್ಳಲು ವ್ಯವಸ್ಥೆಯಾಗಿರಲಿಲ್ಲ. ಒಂದು

ಶಾಮಿಯಾನ ಹಾಕಬೇಕಾದರೂ ಯೋಚನೆ ಮಾಡಬೇಕಾದಂತಹ ಪರಿಸ್ಥಿತಿ ಇತ್ತು. ಪೂರ್ಣ ಪ್ರಜ್ಞದಲ್ಲಿ ರ್‍ಯಾಂಫ್ ಮಾಡುವ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಕೇಳಿದಾಗ ಎಲ್ಲರೂ ಅಸಹಾಯಕತೆಯಿಂದ ಉತ್ತರಿಸುತ್ತಿದ್ದರು, ಯಾರೂ ರೆಸ್ಪಾನ್ಸಿಬಿಲಿಟಿ ಶೌಲ್ಡರ್ ಮಾಡುತ್ತಿರಲಿಲ್ಲ. ಇದನ್ನೆಲ್ಲಾ ನೋಡಿದಾಗ ನನಗನ್ನಿಸಿತು.ನಾವು ಎಷ್ಟು ಬಾಲಿಶವಾಗಿದ್ದೇವೆ, ನಾವು ಮುಂದಿನ ದಿನಗಳನ್ನು ಹೇಗೆ ಎದುರಿಸುತ್ತೇವೆ ಎನ್ನುವ ಒಂದು ಆತಂಕ ಆ ಕ್ಷಣದಲ್ಲಿ ನನಗಿತ್ತು ಎನ್ನುವ ಭಾವನೆಯನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಲಾ ಅಂಡ್ ಆರ್ಡರ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ನಾನು ಪೊಲೀಸಿನವರ ಮೇಲೆ ಗೂಬೆ ಕೂರಿಸಲಿಕ್ಕೆ ಹೋಗದಿದ್ದರೂ ಕೂಡ, ನಾವು ಪೂರ್ವಭಾವಿಯಾಗಿ ಸಜ್ಜಾಗದಿದ್ದರೆ ಬಹುಶಃ ಮುಂದಿನ ದಿನಗಳಲ್ಲಿ ಅನಾಹುತಗಳು ಸಂಭವಿಸುವುದರಲ್ಲಿ ಆಶ್ಚರ್ಯವಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಪೋಲಿಸರ ಸಂಖ್ಯೆ ಕಡಿಮೆ ಇತ್ತು ಎನ್ನುವುದು ಗೊತ್ತಿದ್ದ ಮೇಲೆ ಬೇರೆ ಯಾವುದೇ ರೀತಿಯಲ್ಲಿ ಔಟ್ ಸೋರ್ಸ್ ಮಾಡಿಕೊಳ್ಳುವುದು ಸಾಧ್ಯವಿರಲಿಲ್ಲವೇ? ಏಕೆ ಅಲ್ಲಿ ಎಡವಿದೆವು ಎನ್ನತಕ್ಕಂಥಾದ್ದನ್ನು ಈ ಸಂದರ್ಭದಲ್ಲಿ ನಾನು ಸರ್ಕಾರದ ಮುಂದೆ ಹೇಳಲಿಕ್ಕೆ ಬಯಸುತ್ತೇನೆ. ಅವರ ಪಾರ್ಥಿವ ಶರೀರ ವಿಧಾಸೌಧದ ಮುಂದೆ ಬಂದಾಗ ನಾನು, ಶಿವರಾಜ್ ಕುಮಾರ್‌ರವರು ಮತ್ತು ರಾಘವೇಂದ್ರ ರಾಜ್‌ಕುಮಾರ್‌ರವರು ಜೊತೆಯಲ್ಲಿದ್ದೆವು. ಆಗ ಎಲ್ಲರೂ ಬಾಡಿಯನ್ನು ವಿಧಾನಸೌಧದ ಮುಂದೆ ಇಡಲೇಬೇಕೆಂದು ಅಲ್ಲಿಗೆ ಬಾಡಿಯನ್ನು ತಂದುಬಿಟ್ಟಿದ್ದಾರೆ. ಹೇಗಾದರೂ ಮಾಡಿ ನಾವು ಬೇರೆ ಕಡೆಗೆ ಡೀವಿಯೇಟ್ ಮಾಡಬೇಕೆಂದರೂ ಅದಕ್ಕೆ ಬಿಡುತ್ತಿಲ್ಲ. ಜನರು ಪೋಲಿಸಿನವರ ಮಾತನ್ನು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಕೊನೆಗೆ, ರಾಘವೇಂದ್ರ ರಾಜ್ ಕುಮಾರ್‌ರವರು ಏಕೆ ಹೀಗೆ ತೊಂದರೆ ಕೊಡುತ್ತಿದ್ದೀರಿ ಎಂದು ಹೇಳಿ ಅವರಲ್ಲಿ ವಿನಂತಿಸಿಕೊಂಡ ಮೇಲೆ ಅಲ್ಲಿಂದ ಬಾಡಿಯನ್ನು ಮೂವ್ ಮಾಡಿದರು. ಇದೆಲ್ಲವನ್ನೂ ನೋಡಿದಾಗ ನನಗನ್ನಿಸಿತು. ಎಲ್ಲೋ ಒಂದು ಕಡೆ ನಾವು ಪೂರ್ವಭಾವಿಯಾಗಿ ಸಜ್ಜಾಗಬೇಕಿತ್ತೇನೋ ಅನ್ನಿಸಿತು. ರಾಜ್ ಕುಮಾರ್‌ರವರನ್ನು ವೀರಪ್ಪನ್‌ನಿಂದ ಬಿಡುಗಡೆ ಮಾಡಿಸಿಕೊಂಡು ಬಂದಾಗ "ರಾಜ್‌ಕುಮಾರ್ ರವರು ವಾಪಸ್ಸು ಬಂದರು" ಎಂದು ಜನ ಸುಮ್ಮನಾಗಿ ಬಿಟ್ಟರು. ಆದರೆ ಅವರು ಸತ್ತರು ಎಂದಾಗ, ಕೊನೆಯದಾಗಿ ಅವರ ದರ್ಶನ ಮಾಡಬೇಕು ಎಂದು ಬಂದಂಥ ಜನಗಳಿಗೆ ವ್ಯವಸ್ಥೆ ಮಾಡಲಿಕ್ಕೆ ಆಗಲಿಲ್ಲವಲ್ಲಾ, ಅಂಥ ಒಬ್ಬ ಮಹಾನ್ ಪುರುಷನನ್ನು ಮತ್ತೆ ಕಾಣಲಿಕ್ಕೆ ಸಾಧ್ಯವಿದೆಯೇ, ಅಥವಾ ಅವರ ಅಂತಿಮ ಯಾತ್ರೆ ಶಾಂತಿಯುತವಾಗಿ ನಡೆಯಲಿಲ್ಲ ಎನ್ನುವುದನ್ನು

ಕರ್ನಾಟಕದ ಜನರು ಮಾತ್ರವಲ್ಲ, ಇಡೀ ಸಮಗ್ರ ವಿಶ್ವದ ಜನ ಮಾತನಾಡುವ ರೀತಿಯಲ್ಲಿ ಆಯಿತು ಎನ್ನವುದು ವಿಷಾದಕರ ಎಂದು ಹೇಳುತ್ತೇನೆ. ಫೈನಲೈಸ್ ಮಾಡಿದ ಸ್ಥಳವೂ ಸಹ, ಅದನ್ನು ಅವರ ಕುಟುಂಬದವರೇ ಒಪ್ಪಿದರೋ, ಅಥವಾ ಬೇರೆ ಯಾರು ಒಪ್ಪಿದರೋ ಗೊತ್ತಿಲ್ಲ. ಆ ಸ್ಥಳವೂ ಸಹ ಬಹಳ ಕಂಜೆಸ್ಟ್ಡ್ ಆಗಿತ್ತು. ಅಲ್ಲಿ ಲಕ್ಷಾಂತರ ಜನರು ಬರುತ್ತಾರೆ ಎನ್ನುವ ನಿರೀಕ್ಷೆಯಿತ್ತು. ಅವತ್ತು ಅಲ್ಲಿಗೆ ಜೆಸಿಬಿಯನ್ನು ತರಲಿಕ್ಕೆ ಸಹಾ ಕಷ್ಟವಾಗಿತ್ತು. ಕೊನೆಗೆ, ಯಾರೋ ಒಬ್ಬರು ಕಾಂಟ್ರಾಕ್ಟರ್‌ನನ್ನು ಹಿಡಿದುಕೊಂಡು ಅಲ್ಲಿ ಗುಂಡಿ ತೋಡತಕ್ಕಂಥಾದ್ದನ್ನು ಕಾರ್ಪೋರೇಷನ್ನಿನ ಅಧಿಕಾರಿಗಳನ್ನು ಅಲ್ಲಿ ಇಟ್ಟುಕೊಂಡು, ಅದನ್ನು ಮಾಡಿಸಿದೆವು, ನಮ್ಮಲ್ಲಿ ಅಧಿಕಾರಿಗಳಿಗೆ ಏಕೆ ಈ ಎಲ್ಲಾ ಪೂರ್ವಭಾವಿ ಯೋಚನೆಗಳು ಬರುತ್ತಿರಲಿಲ್ಲ ಎನ್ನುವ ಆತಂಕ ಆ ಸಂದರ್ಭದಲ್ಲಿ ಇತ್ತು. ಮತ್ತು ಪಾರ್ಥಿವ ಶರೀರದ ಮೆರವಣಿಗೆಯ ದಾರಿಯಲ್ಲಿ ಕಲ್ಲುಗಳನ್ನು ಗುಡ್ಡೆ ಹಾಕಿದ್ದರು. ಯಾವುದೇ ಒಂದು ವಿಐಪಿ ರೂಟನ್ನು ಮಾಡಿದಾಗ, ಅಥವಾ ಯಾರಾದರು ವಿಐಪಿ ಬಂದಾಗ ನಾವು ಎಷ್ಟು ಎಚ್ಚರಿಕೆಯನ್ನು ವಹಿಸುತ್ತೇವೆ. ಆ ದಾರಿಯಲ್ಲಿ ಹಾಕಿದ್ದಂಥ ಕಲ್ಲುಗಳನ್ನು ತೆಗೆದಿದ್ದರೆ. ಮತ್ತು ಆ ರೂಟ್‌ನಲ್ಲಿ ಪೊಲೀಸ್ ಫೋರ್ಸ್‌ಗಳನ್ನು ಹಾಕಿದ್ದರೆ, ಬಹಳಷ್ಟು ಗಲಭೆಯನ್ನು ಅವಾಯ್ಡ್ ಮಾಡಬಹುದಾಗಿತ್ತು. ಹಿಂದಿನ ರಾತ್ರಿ ಕಂಠೀರವ ಸ್ಟೇಡಿಯಂನಲ್ಲಿ ನಮ್ಮ ಕಣ್ಣಮುಂದೆಯೇ ಗಾಡಿಗಳನ್ನು ಹೊಡೆಯುತ್ತಿದ್ದಾಗಲೇ ಕೆಲವರನ್ನು ಸ್ಟ್ಯಾಕ್ ಮಾಡಿದ್ದರೆ ಎಷ್ಟೋ ಅವಾಯ್ಡ್ ಆಗುತ್ತಿತ್ತು. ಟಿಯರ್ ಗ್ಯಾಸ್‌ಗಳನ್ನೇನೋ ಬಹಳಷ್ಟು ಹೊಡೆದರು. ಆದರು ಆವಾಗವಾಗಲೇ ಸ್ಟ್ಯಾಕ್ ಮಾಡಿದ್ದರೆ ಬಹುಶಃ ಮುಂದಿನ ಘಟನೆಗಳು ಅಪಾಯಗಳನ್ನು ಕಂಟ್ರೋಲ್ ಮಾಡಲಿಕ್ಕೆ ಸಾಧ್ಯವಾಗುತ್ತಿತ್ತೇನೋ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಈ ಎಲ್ಲಾ ಘಟನೆಗಳು ನಡೆಯುವಂಥ ಸಂಧರ್ಭದಲ್ಲಿ ಆಸ್ತಿ ಪಾಸ್ತಿ ನಷ್ಟವಾಗಿದೆ. ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ನನ್ನ ಕ್ಷೇತ್ರದಲ್ಲಿ ಮೂರು ಜನ ಹೆಣ್ಣುಮಕ್ಕಳು ಇರತಕ್ಕಂಥ ಒಬ್ಬ ಮಹಿಳೆ ಒಂದು ಸಣ್ಣ ಪೆಷ್ಟಿ ಅಂಗಡಿಯನ್ನು ದೇವರಾಜಅರಸ್ ಚೆಕ್ ಟರ್ಮಿನಲ್ಸ್ ಹತ್ತಿರ ಇಟ್ಟುಕೊಂಡಿದ್ದಳು, 35–40 ಸಾವಿರ ರೂಪಾಯಿಗಳನ್ನು ಸಾಲ ಮಾಡಿ ಇಟ್ಟುಕೊಂಡಿದ್ದಂಥ ಆ ಅಂಗಡಿಯನ್ನು ಬೆಂಕಿ ಹಾಕಿ ಅದನ್ನು ಸಂಪೂರ್ಣವಾಗಿ ನಾಶ ಮಾಡಿದರು. ಈಗ ಆಕೆ ಎಲ್ಲಿಗೆ ಹೋಗುತ್ತಾಳೆ? ಇನ್‌ಷೂರೆನ್ಸ್ ಅನ್ನು ಪೆಟ್ರೋಲ್ ಬಂಕ್‌ನವರು ಕ್ಲೈಂ ಮಾಡಬಹುದು, ವೆಹಿಕಲ್ ಗಳವರು ಕ್ಲೈಂ ಮಾಡಬಹುದು. ಆದರೆ ಇನ್‌ಷೂರೆನ್ಸೇ ಇಲ್ಲದ ವೆಹಿಕಲ್‌ಗಳ ಅಂಗಡಿಗಳ ಗತಿಯೇನಾಗಬೇಕು. ಒಂದು ಇಸ್ತ್ರೀ ಅಂಗಡಿಯಲ್ಲಿ ಒಂದೂವರೆ ಲಕ್ಷ ರೂಪಾಯಿಗಳ ಸೀರೆ

ಇದ್ದಂಥದ್ದೂ ಸುಟ್ಟು ಹೋಯಿತು. ಇವರಿಗೆಲ್ಲಾ ಕಾಂಪನ್‌ಸೇಟ್ ಮಾಡತಕ್ಕಂಥ ನೈತಿಕ ಹೊಣೆಗಾರಿಕೆ ಈ ರಾಜ್ಯ ಸರ್ಕಾರಕ್ಕೆ ಮತ್ತು ಈ ರಾಜ್ಯದ ಚುಕ್ಕಾಣಿಯನ್ನು ಹಿಡಿದವರಿಗೆ ಇದೆ ಎನ್ನುವುದನ್ನು ನಾನು ಮತ್ತೆ ಈ ಸಂದರ್ಭದಲ್ಲಿ ನಾನು ತಿಳುವಳಿಕೆ ನೀಡಲು ಬಯಸುತ್ತೇನೆ. ಕಾವೇರಿ ಗಲಾಟೆಯಾದಾಗ ಆದಂಥ ನಷ್ಟವನ್ನು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಅಥವಾ ಆಡಳಿತ ವ್ಯವಸ್ಥೆ ಭರಿಸಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಹಾಗಾಗ್ಗೆ, ಈ ಘಟನೆಯಲ್ಲೂ ಸಹ ಜನ ಒಂದು ರೀತಿಯ ಆತಂಕದಲ್ಲಿದ್ದಾರೆ, ಬೇರೆ ರೀತಿಯ ಘಟನೆಗಳಲ್ಲಿ ಆಸ್ತಿ ಪಾಸ್ತಿಗೆ ನಷ್ಟವುಂಟಾದಲ್ಲಿ ನೀವು ಕಾಂಪನ್‌ಸೇಟ್ ಮಾಡುತ್ತಿರಲಿಲ್ಲವೇ? ಅದೇ ರೀತಿ ದಯವಿಟ್ಟು ಈಗಲೂ ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ರಾಜ್‌ಕುಮಾರ್‌ರವರ ಬಾಡಿ ಇದ್ದಂಥ ಕಾಫಿನ್ ಬಾಕ್ಸ್‌ಗೆ ಕರೆಂಟ್ ಇರಲಿಲ್ಲ. ಹೇಗೆ ಅವ್ಯವಸ್ಥೆಯಾಗಿತ್ತು ಎಂದು ಹೇಳಬೇಕಾದರೆ, ಆ ರಾತ್ರಿ ಕೋಲ್ಡ್ ಸ್ಟೋರೇಜ್ ಇರತಕ್ಕಂಥ ವ್ಯವಸ್ಥೆ ಇರಲಿಲ್ಲ ಇಂಥ ವ್ಯವಸ್ಥೆಗಳನ್ನೆಲ್ಲಾ ನಮ್ಮ ಅಧಿಕಾರಿಗಳು ಏಕೆ ಪೂರ್ವಭಾವಿಯಾಗಿ ಯೋಚನೆ ಮಾಡಲಿಲ್ಲ ಎಂದು ನನಗನ್ನಿಸುತ್ತದೆ. ಕನ್ನಡದಲ್ಲಿ ಒಂದು ಗಾದೆ ಇದೆ, " ಸಂತೆ ಸೇರುವುದಕ್ಕಿಂತ ಮುಂಚೆ ಕಳ್ಳರು ಸೇರುತ್ತಾರೆ " ಎಂದು ಇದೆ. ಆ ಸಂದರ್ಭದಲ್ಲಿ ನಾನೂ ಸಹ 18 ಸಾವಿರ ರೂಪಾಯಿಗಳ ಒಂದು ಮೊಬೈಲನ್ನು ಕಳೆದುಕೊಂಡೆ. ಕಳ್ಳರು, ಪಿಕ್ ಪಾಕೇಟರ್ಸ್ ಎಲ್ಲರೂ ಸೇರಿಕೊಂಡುಬಿಟ್ಟಿದ್ದರು. ಇಂಥದ್ದಕ್ಕೆಲ್ಲಾ ಮೊದಲೇ ಎಚ್ಚರಿಕೆಗಳನ್ನು ಕೊಡಬಹುದಾಗಿತ್ತು. ಈ ಸಂದರ್ಭದಲ್ಲಿ ಆರಂಭದಿಂದ ಆದಂಥ ನಿರ್ಲಕ್ಷ್ಯಕ್ಕೆ ಯಾರು ಹೊಣೆ? ಎಲ್ಲೋ ಒಂದು ಕಡೆ ಟ್ರಿಗರ್ ಆಯಿತು. ನಮ್ಮ ರಾಜ್ಯದ ಗ್ರಹಚಾರ, ನಮ್ಮ ಜನಗಳ ಗ್ರಹಚಾರವೆಂದರೆ, ಶಾಂತಿಯುತವಾಗಿ, ಪ್ರಶಾಂತವಾಗಿ ಶವಸಂಸ್ಕಾರವನ್ನು ಎಲ್ಲರೂ ನೋಡತಕ್ಕಂಥಾದ್ದಕ್ಕೆ ಅವಕಾಶವಾಗಲಿಲ್ಲ. ರಾಷ್ಟ್ರದ ಮಹಾನ್ ಮಹಾನ್ ಪ್ರಮುಖರು ಅವರು ಅದ್ವಾನಿಯವರಿರಬಹುದು. ಯಡಿಯೂರಪ್ಪನವರಿರಬಹುದು, ಯಾರಿಗೂ ಅವಕಾಶವಾಗಲಿಲ್ಲ. ಪಿ.ಬಿ. ಶ್ರೀನಿವಾಸ್ ರವರು ಪೋಲಿಸ್ ಕಮೀಷನರ್‌ರವರ ಆಫೀಸಿಗೆ ಹೋಗಿ, ನಾನು ಪಿ.ಬಿ. ಶ್ರೀನಿವಾಸ್, ನಾನು ರಾಜ್‌ಕುಮಾರ್ ರವರ ಅಂತಿಮ ಸಂಸ್ಕಾರವನ್ನು ನೋಡಬೇಕು ಎಂದು ಹೇಳಿದಾಗ ಅವರನ್ನು ಪೋಲಿಸ್ ಗಾಡಿಯಲ್ಲಿ ಕಳೂಹಿಸಿದರು ಎಂದು ಕಾಣುತ್ತದೆ. ಅವರು ದಾರಿಯಲ್ಲಿ ಬರುವಾಗ ಅವರ ಗಾಡಿಗೂ ಕಲ್ಲು ಹೊಡೆದರು. ಅವರ ಗಾಡಿಯ ಮೇಲೆ ಮಾತ್ರವಲ್ಲ. ಎಲ್ಲರ ಗಾಡಿಗಳ ಮೇಲೂ ಯಾವ ಯಾವ ಗಾಡಿ ಬಂತೊ ಎಲ್ಲಾ ಗಾಡಿಗಳ ಮೇಲೂ ಕಲ್ಲು ಹೊಡೆದರು. ನಾನು ನಡೆದುಕೊಂಡು ಬಂದೆ. ಡಿ.ಕೆ. ಶಿವಕುಮಾರ್‌ರವರ ಗಾಡಿಯ ಮೇಲೆ ಕಲ್ಲುಗಳನ್ನು ಎಸೆಯುತ್ತಿದ್ದರು. ನಾನು

ಮತ್ತು ಸೋಮಣ್ಣನವರು ಆಗ ಅಲ್ಲೇ ನಿಂತಿದ್ದೆವು. ಅವರು ಯಾರನ್ನೂ ನೋಡುತ್ತಿರಲಿಲ್ಲ. ಅದು ರಾಜಕಾರಣಿಗಳದ್ದಾಗಲೀ ಸರ್ಕಾರದ ವಾಹನಗಳಾಗಲೀ ಎಲ್ಲದಕ್ಕೂ ಕಲ್ಲು ಹೊಡೆಯುತ್ತಿದ್ದರು. ನಾವು ಏನೋ ಬೇಜವಾಬ್ದಾರಿ ಮಾಡಿದ್ದೇವೆ, ತಪ್ಪು ಮಾಡಿದ್ದೇವೆ, ತಪ್ಪು ಮಾಡಿದ್ದೇವೆ. ನಾವು ಕೇರ್ ಮಾಡಲಿಲ್ಲ ಎನ್ನುವ ಒಂದು ರೀತಿಯ ಮನೋಭಾವ ಅಲ್ಲಿ ಕಂಡಿತು. ಇದರ ಜೊತೆಗೆ ನಾನು ಈ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ಹೇಳುವುದೇನೆಂದರೆ, ಅಪರಾಧಿಗಳು ಯಾರ‍್ಯಾರಿದ್ದಾರೆ, ಅವರಿಗೆ ಶಿಕ್ಷೆಯಾಗಲಿ, ಆದರೆ ನೂರು ಜನ ಅಪರಾಧಿಗಳು ತಪ್ಪಿಸಿಕೊಂಡರೂ ನಿರಪರಾಧಿಗಳಿಗೆ ಶಿಕ್ಷೆಯಾಗಬಾರದು ಎನ್ನುವುದು ಕಾನೂನಿನ ಸ್ಪಿರಿಟ್ ಆದರೆ ಇವತ್ತು ಬಹಳಷ್ಟು ಜನ ನಿರಪರಾಧಿಗಳನ್ನು ಬಳ್ಳಾರಿ ಜೈಲಿಗೆ ಕಳೂಹಿಸಿದ್ದಾರೆ. ಯಾರ‍್ಯಾರು ಎನ್ನುವ ಪಟ್ಟಿಯನ್ನು ನಾನು ಪೋಲಿಸ್ ಕಮೀಷನರ್ ರವರಿಗೆ ಕೊಡುತ್ತೇನೆ. ಯಾವ್ಯಾವ ನಿರಪರಾಧಿಗಳನ್ನು ನೀವು ತೆಗೆದುಕೊಂಡು ಹೋಗಿ ಬಳ್ಳಾರಿ ಜೈಲಿಗೆ ಹಾಕಿದ್ದೀರಿ ಎನ್ನುವ ಪಟ್ಟಿಯನ್ನು ಕೊಡುತ್ತೇನೆ. ಅಪರಾಧಿಗಳಿಗೆ ಶಿಕ್ಷೆಯಾಗಬೇಕು. ಆದರೆ ದಯವಿಟ್ಟು ನಿರಪರಾಧಿಗಳಿಗೆ ಶಿಕ್ಷೆಯಾಗಬಾರದು. ಇದನ್ನು ನಾನು ಖಂಡಿತವಾಗಿ ಒಪ್ಪುವುದಿಲ್ಲ. ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು. ಸಿಬಿಐ ತನಿಖೆಯಾಗಬೇಕು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಆಗಿನ ಗೋಲೀಬಾರ್‌ನಲ್ಲಿ ಸತ್ತಂಥ ಯುವಕರ ಕುಟುಂಬದವರಿಗೆ ಪರಿಹಾರ ಕೊಡಬೇಕು. ಆಗ ಸತ್ತಂಥ ಶೈಲೇಶ್ ಎನ್ನುವವನು ಅವರ ಕುಟುಂಬದಲ್ಲಿದ್ದಂಥ ದುಡಿಯುವ ಏಕೈಕ ಯುವಕ. ಅವನು ಆ ಕುಟುಂಬಕ್ಕೆ ಆದಾರವಾಗಿದ್ದ. ಅವನಿಗೆ ಅಂಗವಿಕಲ ಮಕ್ಕಳಿದ್ದಾರೆ, ಅಂಗವಿಕಲ ತಂಗಿ ಇದ್ದಾಳೆ ಅವನ ತಂದೆಗೆ ಕಣ್ಣಿಲ್ಲ.

ಶ್ರೀ ನೆ.ಲ. ನರೇಂದ್ರಬಾಬು (ಮುಂದು) : ಗೋಪಾಲ ಎಂಬ ಯುವಕನೊಬ್ಬನೇ ದುಡಿಯುವ ವ್ಯಕ್ತಿಯಾಗಿದ್ದ ಜನಾರ್ಧನ ಎನ್ನುವ ಹಾಸನದ ಹುಡುಗ ಬೆಂಗಳೂರಿನಲ್ಲಿ settle ಆಗಿದ್ದ ಕುಮಾರ ಎನ್ನುವವನು ಚಿಕ್ಕಮಂಗಳೂರಿನವನು. ಮುನಿರಾಜು, ಯಶವಂತಶೆಟ್ಟಿ

ಎನ್ನುವವನು ನಮ್ಮ ಕ್ಷೇತ್ರದ ಯುವಕರು. ಅಮ್ಜದ್ ಆಲಿ ಎನ್ನುವವನು ಜಾಲಹಳ್ಳಿ ಹುಡುಗ. ಪೋಲಿಸ್ ಸಿಬ್ಬಂದಿ ಮಂಜುನಾಥ ಎನ್ನುವವರಿಗೆ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆನ್ನು ವುದು ಗೊತ್ತಾಯಿತು. ಅದೇ ರೀತಿಯಲ್ಲಿ ಈ ಯುವಕರಿಗೂ 5 ಲಕ್ಷ ರೂಪಾಯಿ ಗಳನ್ನು ಕೊಡಬೇಕು ಬಹುಶಃ ಆ

ಕುಟುಂಬಕ್ಕೆ ಮಗನೇ ಆಧಾರವಾಗಿದ್ದು, ನಿಜವಾಗಿಯೂ ತಂದೆ ತಾಯಿಗಳಿಗೆ ಬೇರೆ ಯಾವುದೇ ಆಶ್ರಯ ಇಲ್ಲದೇ ಹೋದರೆ, ಅವರಿಗೆ ಪರಿಹಾರ ನೀಡಬೇಕು. ಏಕೆಂದರೆ ಮಗನೇ ದುಡಿಯಬೇಕಾಗಿತ್ತು. ಪ್ರಸ್ತುತ ಏನು K.C. General Hospital ನಲ್ಲಿದ್ದಾರೆ ಅಥವಾ Victoria Hospital ನಲ್ಲಿದ್ದಾರೆ ಅಥವಾ ನಾಲಗೆಯನ್ನು ಕತ್ತರಿಸಿಕೊಂಡಂಥ ಮಂಜುನಾಥ ಎನ್ನುವ ಹುಡುಗ ತುಮಕೂರಿನಲ್ಲಿ ಏನಿದ್ದಾನೆ, ದಯವಿಟ್ಟು ಸರ್ಕಾರದ ಪರವಾಗಿ ಯಾರಾದರೂ ಆ ಯುವಕನಿಗೆ ಏನು ಚಿಕಿತ್ಸೆಯಾಗಬೇಕೆಂದು ಹೋಗಿ ನೋಡಿ ತಪ್ಪಾಗಿ ಹೋಗಿದೆ. ಘಟನೆ ಗತಿಸಿ ಹೋಯಿತು. ಆದರೆ ಕನಿಷ್ಟ ಸೌಜನ್ಯಕ್ಕಾದರೂ ಈ ಸರ್ಕಾರ ನೋಡಿದರೆ, ಬಹುಶಃ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ ಗಳಿಸಿದಕ್ಕೆ ಒಂದು ಅರ್ಥ ಬರುತ್ತದೆ. ಯುವ ಪೀಳಿಗೆಗೆ, ನೊಂದಂಥ ಕುಟುಂಬಗಳಿಗೆ, "ಹೌದು ನಮ್ಮ ಸರ್ಕಾರ ಏನೋ ಅನಾಹುತ ಆಗೋಯ್ತು" ಎನ್ನತಕ್ಕಂಥದ್ದು ಆಗುತ್ತದೆ. ಮತ್ತೊಂದು ಮಾತು ಹೇಳುವುದಾದರೆ, ಬಹುಶಃ ಮುಂದೆ ಯಾವುದೇ ಇಂಥ ಸನ್ನಿವೇಶದಲ್ಲಿ ಸರ್ಕಾರದ ವ್ಯವಸ್ಥೆಯಲ್ಲಿ ಪೂರ್ವಭಾವಿ ಆಗಿ ಚಿಂತನೆ ಇರಲಿ ಎನ್ನುವ ಮಾತನ್ನು ಹೇಳುತ್ತಾ, ಪರಿಹಾರ ನೀಡುವುದು. ತನಿಖೆ ಮತ್ತು ಈ ಆಸ್ಪತ್ರೆಗಳಲ್ಲಿ ನರಳುತ್ತಿರತಕ್ಕಂಥವರಿಗೆ ಕೂಡ ಚಿಕಿತ್ಸೆಯ ವೆಚ್ಚವನ್ನು ಭರಿಸುವುದಕ್ಕೆ ವ್ಯವಸ್ಥೆಯನ್ನು ಮಾಡಲು ಸರ್ಕಾರ ಮುಂದಾಗಬೇಕೆಂದು ಆಗ್ರಹಿಸಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಆಂಜನೇಯ (ಭರಮಸಾಗರ) : ಮಾನ್ಯ ಉಪಾಧ್ಯಕ್ಷರೆ, ನಟಸಾರ್ವಭೌಮ ಡಾ: ರಾಜ್‌ಕುಮಾರ್‌ರವರು ಒಬ್ಬ ಶಾಂತಿಪ್ರಿಯ ವ್ಯಕ್ತಿ ಶಾಂತಿಧೂತ ಎಂದು ಹೇಳಿದರೆ ಅತಿಯೋಕ್ತಿಯಾಗಲಾರದು. ಅಂಥ ಒಬ್ಬ ವ್ಯಕ್ತಿಯ ಅಂತಿಮ ಸಂಸ್ಕಾರದ ದಿನದಂದು ನಡೆದಂಥ ಘಟನೆಗಳನ್ನು ನಾವು ಈ ಸಂದರ್ಭದಲ್ಲಿ ಉಗ್ರವಾಗಿ ಖಂಡಿಸಬೇಕು. ಅಂಥ ದುಷ್ಟ ಶಕ್ತಿಗಳು ಅವತ್ತು ನಡೆದುಕೊಂಡ ರೀತಿ ನೀತಿಗಳನ್ನು ನಾವು ದೂರದರ್ಶನದಲ್ಲಿ ನೋಡಿದಾಗ, ಅವರು ಪೋಲಿಸರ ಮೇಲೆ ಹಲ್ಲೆ ಮಾಡಿದಾಗ, ಸಿಕ್ಕ ಸಿಕ್ಕ ವಾಹನಗಳನ್ನು ಸುಡುತ್ತಿದ್ದಂಥ ದೃಶ್ಯ ನೋಡಿದಾಗ, ದಾರಿಯಲ್ಲಿ ಯಾವ್ಯಾವ complex ಗಳು ಸಿಗುತ್ತವೆ, ಆ complex ಗಳ ಮೇಲೆ ಕಲ್ಲು ಎಸೆಯುವುದನ್ನು ನೋಡಿದಾಗ, ಏನಾಪ್ಪಾ ಇದು, ರಾಜ್‌ಕುಮಾರ್‌ರವರು ಸತ್ತಂಥ ದಿನದಲ್ಲಿ ದುಃಖದ ಛಾಯೆಯಲ್ಲಿ ಇರಬೇಕಾದಂಥ ಜನ ಈ ರೀತಿಯಾದಂಥ ಉಗ್ರ ರೂಪವನ್ನು ತಾಳಿದ್ದಾರೆಂದು, ಬೇರೆ ಊರಿನಲ್ಲಿ ನಮ್ಮ ಜಿಲ್ಲೆಯಲ್ಲಿ ನಾವು ಸಂತಾಪ ಸೂಚನೆ ಮಾಡುವ ಸಮಯದಲ್ಲಿ, ಒಬ್ಬ ರಾಜಕುಮಾರರಿಗೆ ಶ್ರದ್ಧಾಂಜಲಿ ಅರ್ಪಿಸತಕ್ಕಂಥ

ರೀತಿಯೇ ಇದು ಎಂದು ನೋಡಿ ಬಹಳ ದುಃಖ ಪಟ್ಟುಕೊಂಡೆವು. ಅಲ್ಲಿ ಏನೇನು ಘಟನೆ ನಡೆದಿದೆ ಎಂಬ ಬಗ್ಗೆ ದಾಖಲೆ
ಇದೆ. ಇವತ್ತು ಸರ್ಕಾರ ನಿರ್ವಹಿಸಲಿಕ್ಕೆ ಆಗಲಿಲ್ಲವೆಂದು ಹೇಳಿದ್ದಾರೆ. ರಾಜ್‌ಕುಮಾರ್‌ರವರು ಸತ್ತ ತಕ್ಷಣವೇ ಆಸ್ಪತ್ರೆಯಲ್ಲಿಯೇ ಶವ ಇರಬೇಕಾಗಿತ್ತು. ಅವರ ಕುಟುಂಬದ ಎಲ್ಲಾ ಸದಸ್ಯರು ಮತ್ತು ಸರ್ಕಾರ ಅಲ್ಲಿಗೆ ಹೋಗಬೇಕಾಗಿತ್ತು. ನಿಜ ಅಲ್ಲಿ ಹೋಗಿ ಏನಾದರೂ ತೀರ್ಮಾನ ತೆಗೆದುಕೊಂಡಿದ್ದರೆ ಒಂದು ಹತೋಟಿಗಾದರೂ ಬರುತ್ತಿತ್ತು. ಆದರೆ ರಾಜ್‌ಕುಮಾರ್‌ರವರು ಸತ್ತ ತಕ್ಷಣವೇ ಶವ ಅವರ ಮನೆಗೆ ಹೋಯಿತು. ಅವರ ಮನೆಗೆ ಹೋದಾಗ ಮಾನ್ಯ ಕುಮಾರ ಬಂಗಾರಪ್ಪನವರು ಹೇಳಿದ ಹಾಗೆ ಜನಸಾಗರವೆಲ್ಲಾ ಆ ಕಡೆ ಹೋಯಿತು. ಸರ್ಕಾರ ಕೂಡ ಅವರ ಮನೆ ಬಾಗಿಲಿಗೆ ಹೋಯಿತು. ಮಾನ್ಯ ಕುಮಾರಸ್ವಾಮಿಯವರು ಡಾ:ರಾಜ್‌ಕುಮಾರ್‌ರವರ ಕುಟುಂಬದ ಸದಸ್ಯರ ಜೊತೆಗೆ ಮಾತನಾಡಿ ರಾಜ್‌ಕುಮಾರ್‌ರವರ ಅಂತ್ಯಸಂಸ್ಕಾರವನ್ನು ಸಕಲ ಗೌರವ ಮರ್ಯಾದೆಗಳೊಂದಿಗೆ ಸರ್ಕಾರ ಮಾಡುತ್ತದೆ. ಎನ್ನುವ ಮಾತನ್ನೂ ಕೂಡ ಅವರು ಹೇಳುವುದರ ಮೂಲಕ ರಾಜ್‌ಕುಮಾರ್‌ರವರ ಕುಟುಂಬದ ಸದಸ್ಯರ ಇಚ್ಛೆಯಂತೆ ಅವರ ಅಂತಿಮ ಸಂಸ್ಕಾರವನ್ನು ಕಂಠೀರವ ಸ್ಟುಡಿಯೋದಲ್ಲಿ ಎಲ್ಲಾ ರೀತಿಯಲ್ಲಿ ಮಾಡಿದ್ದಾರೆ. ಅದೇ ರೀತಿ ಪೋಲಿಸರು ಸಹ ಶಾಂತಿಯನ್ನು ಕಾಪಾಡುವಲ್ಲಿ, ಜನರ ರಕ್ಷಣೆ ಮಾಡುವ ಸಂದರ್ಭದಲ್ಲಿ ತಮ್ಮ ಪ್ರಾಣವನ್ನು ಸಹ ಕಳೆದುಕೊಂಡಿದ್ದಾರೆ. ಈ ರೀತಿ ಕ್ರಾಂತಿ ನಡೆದಾಗ ಎಷ್ಟು ಜನ ಪೋಲಿಸರನ್ನು ಕರೆದುಕೊಂಡು ಬರಲು ಸಾಧ್ಯ? Military ಕೂಡ ಬಂದರು ನಿಯಂತ್ರಣ ಮಾಡಲಿಕ್ಕೆ ಸಾಧ್ಯವಿಲ್ಲ. ಅಂಥ ಒಂದು ದುಃಖದ ಛಾಯೆಯಲ್ಲಿ ಈ ರೀತಿಯ ಕ್ರಾಂತಿ ಮಾಡುತ್ತಾರೆಂದರೆ ನಿಜವಾಗಿ ಯಾರು ಕೂಡ ನಂಬುವುದಕ್ಕಾಗುವುದಿಲ್ಲ 'ಸಂತೆ ಸೇರುವ ಮುನ್ನ ಕಳ್ಳರು ಸೇರುತ್ತಾರೆನ್ನುವ ' ಮಾತನ್ನು ಮಾನ್ಯ ನರೇಂದ್ರಬಾಬುರವರು ಮಾತನಾಡುತ್ತಾ ಹೇಳಿದರು. ಬಸ್ ನಿಲ್ದಾಣದಲ್ಲಿ ಬಸ್ಸು ಅನ್ನು ಹತ್ತುವಾಗ ನೀವಾದರೂ ನೋಡಬಹುದು. ಬಸ್ಸು ಹತ್ತಲಿಕ್ಕೆ ಹತ್ತು ಜನ ಇದ್ದರೆ pocket ಹೊಡೆಯುವುದಕ್ಕೆ ಹದಿನೈದು ಜನ ಇರುತ್ತಾರೆ. ಇಂಥ ವ್ಯವಸ್ಥೆ ಇಲ್ಲಿದೆ ದೊಡ್ಡ ದೊಡ್ಡ ನಾಯಕರು ಸತ್ತಂಥ ದಿನಗಳಲ್ಲಿ ಇಂಥ ಘಟನೆಗಳು ನಡೆಯುತ್ತವೆ. ಶ್ರೀಮತಿ ಇಂದಿರಾಗಾಂಧಿಯವರ ಹತ್ಯೆ ಆದಾಗ ಎಲ್ಲಾ ಊರುಗಳಲ್ಲಿ ಇಂಥ ಘಟನೆಗಳು ನಡೆದವು. ದೆಹಲಿಯಲ್ಲಿ ಯಾರೂ ಕೂಡ ನಿಯಂತ್ರಣ ಮಾಡಲಿಕ್ಕೆ ಆಗಲಿಲ್ಲ. ದೆಹಲಿಯಲ್ಲಿ ಪೋಲಿಸ್ ವ್ಯವಸ್ಥೆ ಮಿಲಿಟರಿ ವ್ಯವಸ್ಥೆ ಎಲ್ಲಾ ಇತ್ತು. ಆದರೆ ಏನೂ ಮಾಡಲಿಕ್ಕಾಗಲಿಲ್ಲ. ಆದ್ದರಿಂದ ಇದರಲ್ಲಿ ಕೆಲವು ದುಷ್ಟ ಶಕ್ತಿಗಳು ಶಾಮೀಲಾಗಿ ಈ ರೀತಿಯಾದ ಕುತಂತ್ರವನ್ನು ಮಾಡಿದ್ದಾರೆ. ಅಲ್ಲಿ ಲೂಟಿ

ಮಾಡಿದ್ದಾರೆ. ಕಳ್ಳತನ ಮಾಡಿದ್ದಾರೆ. ರಾಜ್‌ಕುಮಾರ್‌ರವರು ಬದುಕಿದ್ದಂಥ ಸಂದರ್ಭದಲ್ಲಿ ಅವರ ಚಿತ್ರ ಬಿಡುಗಡೆಯಾಗುತ್ತಿದಂಥ ಸಂದರ್ಭದಲ್ಲಿ ಕೂಡ, ಆ ಸಿನಿಮಾ ನೋಡುವುದಕ್ಕೆ ಬರುವ ಜನಜಂಗುಳಿಯಿಂದಾಗಿ ಲಾಟಿಚಾರ್ಜ್ ಆಗುತ್ತಿತ್ತು. ರಾಜ್‌ಕುಮಾರ್‌ರವರದು ಎಂದಾದರೊಂದು musical night ನಡೆಯುತ್ತದೆಂದರೆ ಆವತ್ತು ಏನಾದರೊಂದು ಘಟನೆ ನಡೆಯುತ್ತಿತ್ತು. ಇಲ್ಲವೇ ಗೋಲಿಬಾರ್ ಆಗುತ್ತಿತ್ತು. ಇಲ್ಲವೇ ಲಾಟಿಚಾರ್ಜ್ ಆಗುತ್ತಿತ್ತು ಅಥವಾ ಯಾರಾದರೂ ಅಮಾಯಕರು ಸತ್ತು ಹೋಗಿರುತ್ತಿದ್ದರು. ಅವರು ಬದುಕಿದ್ದಂಥ ಸಂದರ್ಭದಲ್ಲಿ ವಿಷ್ಣುವರ್ಧನ್ ರವರ ಅಭಿಮಾನಿಗಳ ಸಂಘ ಮತ್ತು ರಾಜ್‌ಕುಮಾರ್‌ರವರ ಅಭಿಮಾನಿಗಳ ಸಂಘ ಎಂದು ಗುಂಪುಗಳಾಗಿದ್ದವು ಎರಡೂ ಅಭಿಮಾನಿ ಸಂಘಗಳ ಮಧ್ಯೆ ಘರ್ಷಣೆ ನಡೆಯುತ್ತಲೇ ಇತ್ತು.
ಅವರ ಚಿತ್ರಗಳು ಬಿಡುಗಡೆಯಾದಂಥ ಸಂದರ್ಭದಲ್ಲಿ ವಿಷ್ಣುವರ್ಧನ್‌ರವರ cut-out ಅನ್ನು ಇವರು ಕಿತ್ತು ಹಾಕುತ್ತಿದ್ದರು. ವಿಷ್ಣುವರ್ಧನ್ ಅಭಿಮಾನಿಗಳ ಸಂಘದ ಕಡೆಯವರು ರಾಜ್‌ಕುಮಾರ್‌ರವರ cut-out ಅನ್ನು ಕಿತ್ತುಹಾಕುವುದು ಈ ರೀತಿಯಾದಂಥ ಸಂಘರ್ಷ ನಡೆಯುತ್ತಲೇ ಬಂತು. ಆದರೆ ಈ ಸಂಘರ್ಷ ಅವರು ಬದುಕಿದ್ದಂಥ ಕಾಲಕ್ಕೆ ಅಂತ್ಯವಾಗು ತ್ತದೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಅವರು ನಿಧನವಾದಂಥ ಸಂದರ್ಭದಲ್ಲಿ ಇವರು ನಡೆದುಕೊಂಡ ರೀತಿ ನೀತಿಗಳನ್ನು ನೋಡಿದಾಗ ನಾಗರೀಕ ಸಮಾಜದ ಎಲ್ಲರೂ ಕೂಡ ತಲೆತಗ್ಗಿಸಬೇಕಾಗಿತ್ತು. ಈ ಕೆಲಸವನ್ನು ಅವರ ಅಭಿಮಾನಿಗಳಂತೂ ಖಂಡಿತ ಮಾಡಿಲ್ಲ. ರಾಜಕುಮಾರ್‌ರವರ ಅಭಿಮಾನಿಗಳನ್ನು ರಾಜ್‌ಕುಮಾರ್‌ರವರು ಏನೆಂದು ಕರೆಯುತ್ತಿದ್ದರೆಂದರೆ, 'ನನ್ನ ಅಭಿಮಾನಿ ದೇವರುಗಳೇ' ಎಂದು ಕರೆಯುತ್ತಿದ್ದರು. ಅಷ್ಟೊಂದು ಪ್ರೀತಿ ವಿಶ್ವಾಸದಿಂದ ಅಭಿಮಾನಿಗಳನ್ನು ಗೌರವಿಸುತ್ತಿದ್ದಂಥ ರಾಜ್‌ಕುಮಾರ್‌ರವರ ಅಂತಿಮ ಸಂಸ್ಕಾರದ ಸಂದರ್ಭದಲ್ಲಿ ನಡೆದಂಥ ಈ ಘಟನೆ ಏನಿದೆ, ಆ ಘಟನೆಯನ್ನು electronic ಮಾಧ್ಯಮದವರು ದೂರದರ್ಶನ ದವರು ಎಲ್ಲರೂ ಸೆರೆಹಿಡಿದಿದ್ದಾರೆ. ಅವರು ಯಾರ್‍ಯಾರು ಇದ್ದಾರೆನ್ನುವುದನ್ನು ಪತ್ತೆಹಚ್ಚಬೇಕು. ಅವರಿಗೆ ಶಿಕ್ಷೆಯನ್ನು ಕೊಡಬೇಕು. ಅದರ ಬಗ್ಗೆ ಸಮಗ್ರವಾದ ತನಿಖೆಯನ್ನು ತಾವು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ. ಧನ್ಯವಾದಗಳು.

x **ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** : ಮಾನ್ಯ ಉಪಾಧ್ಯಕ್ಷರೆ, ಡಾ: ರಾಜ್‌ಕುಮಾರ್‌ರವರ ನಿಧನದ ದಿನ ಮತ್ತು ಅದರ ಮಾರನೆ ದಿವಸ ಅವರ ಅಂತ್ಯಕ್ರಿಯೆಯನ್ನು ಮಾಡುವ ಈ ಎರಡೂ ದಿನಗಳಲ್ಲಿ

ಆದಂಥ ಕೆಲವು ಅಹಿತಕರ ಘಟನೆಗಳ ಬಗ್ಗೆ ಹಲವಾರು ಹಿರಿಯ ಸದಸ್ಯರುಗಳು ಈ ಸದನದಲ್ಲಿ ಗಮನ ಸೆಳೆಯುವುದರ ಜೊತೆಗೆ ಸರ್ಕಾರದ ವೈಫಲ್ಯತೆ, ಪೋಲಿಸ್‌ನವರ ವೈಫಲ್ಯತೆ, ಹೀಗೆ ಹಲವಾರು ರೀತಿಯ ಭಾವನೆಗಳನ್ನೇನು ವ್ಯಕ್ತಪಡಿಸಿದ್ದಾರೆ. ಆ ಬಗ್ಗೆ ಈ ಸಂದರ್ಭದಲ್ಲಿ ನಾನು ಆವತ್ತಿನ ಎರಡು ದಿವಸಗಳ ಘಟನೆ ಬಗ್ಗೆ ಕೆಲವು ವಿಷಯಗಳನ್ನು ಸಭೆಯ ಮುಂದಿಡಲಿಕ್ಕೆ ಬಯಸುತ್ತೇನೆ. ಕೆಲವು ಸದಸ್ಯರುಗಳು ಅದರಲ್ಲೂ ಪ್ರಮುಖವಾಗಿ ಮಾನ್ಯ ರಮೇಶ್ ಕುಮಾರ್‌ರವರು, ಮಾನ್ಯ ಮಾಧುಸ್ವಾಮಿಯವರು, ಕೆಲವು ಪ್ರಮುಖ ವ್ಯಕ್ತಿಗಳು ನಿಧನವಾದಂಥ ವಿಷಯವನ್ನು ನಾಲ್ಕೈದು ಗಂಟೆಗಳ ಕಾಲ ಸಾರ್ವಜನಿಕವಾಗಿ ಘೋಷಣೆ ಮಾಡಬಾರದಾಗಿತ್ತು ಎನ್ನುವ ಮಾತನ್ನು ಹೇಳಿದ್ದಾರೆ. ಆ ಒಂದು ಘಟನೆ ನಡೆಯುತಕ್ಕಂಥ ಸನ್ನಿವೇಷ ಅದು ಸರ್ಕಾರದಿಂದ ಆದಂಥ ವೈಫಲ್ಯ ಅಲ್ಲ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಡಾ: ರಾಜ್‌ಕುಮಾರ್‌ರವರ ನಿಧನದ ವಾರ್ತೆಯನ್ನು ಆಸ್ಪತ್ರೆಯ ಸಿಬ್ಬಂದಿ ವರ್ಗ ಮತ್ತು ವೈದ್ಯರುಗಳು ಸರ್ಕಾರದ ಗಮನಕ್ಕೆ ತರುವುದಕ್ಕೆ ಮುಂಚೆಯೇ ಸಾರ್ವಜನಿಕವಾಗಿ ಆಸ್ಪತ್ರೆಯಲ್ಲಿ ಘೋಷಣೆಯನ್ನು ಮಾಡಿದರು. ಆದಾದ ನಂತರ ಸರ್ಕಾರದ ಗಮನಕ್ಕೆ ತರುವ ಮುಂಚೆ ಸರ್ಕಾರ

(x ಸನ್ಮಾನ್ಯ ಮುಖ್ಯ ಮಂತ್ರಿಗಳವರಿಂದ ಪರಿಷ್ಕರಣಗೊಂಡಿದೆ)

ಕೆಲವು ತೀರ್ಮಾನಗಳನ್ನು ಮಾಡುವ ಮುಂಚೆ ರಾಜ್‌ಕುಮಾರ್‌ರವರ ದೇಹವನ್ನು ಅವರ ಮನೆಗೆ ತೆಗೆದುಕೊಂಡು ಹೋಗತಕ್ಕಂಥ ನಿರ್ಧಾರವನ್ನು ಮಾಡಲಾಯಿತು, ನಂತರ ತಕ್ಷಣವೇ ತ್ವರಿತವಾಗಿ ಸರ್ಕಾರದ ಗಮನಕ್ಕೂ ತರದೆ ಪಾರ್ಥಿವ ಶರೀರವನ್ನು ಅವರ ಮನೆಗೆ ತೆಗೆದುಕೊಂಡು ಹೋಗತಕ್ಕಂಥ ಕೆಲಸವನ್ನು ಮಾಡಿದರು, ಅದಾದನಂತರ ಅವರ ಮನೆಯಲ್ಲಿಯೇ ಅವರ ನೇತ್ರದಾನ ಮಾಡತಕ್ಕಂಥ ರಾಜ್‌ಕುಮಾರ್‌ರವರ ಅಭಿಲಾಷೆ ಏನಿತ್ತು, ಆ ನೇತ್ರದಾನವನ್ನು ಮಾಡುವ ಕೆಲಸವನ್ನು ಡಾಕ್ಟರುಗಳು ಅವರ ಮನೆಯಲ್ಲಿಯೇ ನೆರವೇರಿಸಿ ಆ ನೇತ್ರವನ್ನು ತೆಗೆಯುವ ಕೆಲಸವನ್ನು ಪ್ರಾರಂಭಮಾಡಿ, ಸುಮಾರು ಎರಡು ಗಂಟೆಗಳ ಕಾಲ ಯಾರ ಗಮನಕ್ಕೂ ತಾರದೆ, ಮಾಡಲಾಯಿತು. ನಾನು ಅಲ್ಲಿ ಹೊರಗಡೆ ಕುಳಿತಿದ್ದೆ ನಾನು ಹೋದಂಥ ಸಂದರ್ಭದಲ್ಲಿ ನಮಗೆ ಯಾವುದೇ ರೀತಿಯ ಮಾಹಿತಿಗಳನ್ನು ಕೊಡಲಿಕ್ಕೆ ಯಾರು ಸಿದ್ದರಿರಲಿಲ್ಲ ನಾನು ಅವರ ಕುಟುಂಬದ ಸದಸ್ಯರುಗಳೊಂದಿಗೆ ಚರ್ಚೆಯನ್ನು ಮಾಡಿದೆ.

9.00 ಪಿ.ಎಂ.

"ಸರ್ಕಾರ ಎಲ್ಲಾ ರೀತಿಯ ಗೌರವವನ್ನು ಸಲ್ಲಿಸುತ್ತದೆ ನಾವು ನಿಮ್ಮ ಜೊತೆ ಇದ್ದೇವೆ. ಡಾ: ರಾಜ್‌ಕುಮಾರ್‌ರವರು ಮಾಡಿರತಕ್ಕಂಥ ಸೇವೆಗೆ ನಾವು ಗೌರವವನ್ನು ಸೂಚಿಸ ಬೇಕಾದಂಥ ಎಲ್ಲಾ ಕರ್ತವ್ಯವೇನಿದೆ ಅದನ್ನು ನಿರ್ವಹಿಸತಕ್ಕಂಥದ್ದಕ್ಕೆ ನಿಮ್ಮ ಜೊತೆ ಸಹಕಾರವನ್ನೇನು ಕೊಡುತ್ತೇನೆಂದು ಅವರ ಕುಟುಂಬದ ಸದಸ್ಯರ ಜೊತೆ ಚರ್ಚೆಯನ್ನು ಮಾಡಿದೆ, ಅದಾದ ನಂತರ, ನಾನು ನನ್ನ ವೈಯಕ್ತಿಕವಾದ ದೂರವಾಣಿ ಸಂಖ್ಯೆಯನ್ನೂ ಅವರ ಕುಟುಂಬದ ಸದಸ್ಯರಿಗೆ ಕೊಟ್ಟು, ನನ್ನ ಜೊತೆ ಸತತವಾಗಿ ಸಂಪರ್ಕದಲ್ಲಿರಬೇಕೆಂದು ಹೇಳಿ ನಾನೇನೂ ಆ ಸಂದರ್ಭದಲ್ಲಿ ಎಲ್ಲಾ ರೀತಿಯ ನಿಮ್ಮ ಜೊತೆ ನಿಲ್ಲತಕ್ಕಂಥ ಕೆಲಸವನ್ನು ಮಾಡುತ್ತೇನೆಂದು ಏನು ಹೊರಟಿದ್ದೆ, ನಾನು ಅರ್ಧ ಅರ್ಧ ಗಂಟೆಗೂ ಅವರ ಕುಟುಂಬದ ಸದಸ್ಯರ ಜೊತೆ ಚರ್ಚೆಯನ್ನು ಮಾಡಿದ್ದೇನೆ. ಆದರೆ ರಾಜ್‌ಕುಮಾರ್‌ರವರ ಶವವನ್ನು ಯಾರ ಗಮನಕ್ಕೂ ತರದೇ, ಪೋಲಿಸ್ ಅಧಿಕಾರಿಗಳ ಗಮನಕ್ಕೂ ತರದೆ, ಮಾನ್ಯ ಸದಸ್ಯರಾದ ನರೇಂದ್ರಬಾಬುರವರು ಹೇಳಿದಂತೆ ಅಲ್ಲಿ ಅವರ ಅಭಿಮಾನಿಗಳು ಮತ್ತು ಕೆಲವರು ಉದ್ವೇಗದಿಂದ ಭಾವೋದ್ರೇಕಕ್ಕೊಳಗಾಗಿ ಆ ಸಂದರ್ಭದಲ್ಲಿ ಅವರ ಒಂದು ಮನಸ್ಸಿನ ಭಾವನೆಗಳನ್ನು ಹಲವಾರು ರೀತಿ ವ್ಯಕ್ತಪಡಿಸುತ್ತಿದ್ದರು. ಅಂಥ ಸನ್ನಿವೇಶದಲ್ಲಿ ಅವರ ಅಭಿಮಾನಿ ವರ್ಗಕ್ಕೆ ಸೇರಿದ ಕೆಲವರು, ನಾನು ಅವರ ಹೆಸರುಗಳನ್ನು ಹೇಳಲಿಕ್ಕೆ ಹೋಗುವುದಿಲ್ಲ, ಯಾರ ಗಮನಕ್ಕೂ ತರದೇ ಅವರ ಶವವನ್ನು ಆಂಬುಲೆನ್ಸ್‌ನಲ್ಲಿ ಹಾಕಿಕೊಂಡು ಪೊಲೀಸರ ಗಮನಕ್ಕೂ ತರದೇ ಹೊರಟರು. ನಾನು ಆ ಸಂದರ್ಭದಲ್ಲೇ ಅವರ ಕುಟುಂಬದ ಸದಸ್ಯರಿಗೆ ಮನವಿಯನ್ನು ಮಾಡಿದ್ದೆ. ಆ ಸಂದರ್ಭದಲ್ಲಿ ನನ್ನ ಮನವಿಗೆ ಪುರಸ್ಕಾರ ಸಿಗಲಿಲ್ಲ. ಆ ಕುಟುಂಬದ ಸದಸ್ಯರುಗಳು ಏನು ಪೂರ್ಣಪ್ರಜ್ಞ ಮೈದಾನದಲ್ಲಿ ನಾವು ಅವರ ಅಂತಿಮ ದರ್ಶನವನ್ನು ಪಡೆಯುವುದಕ್ಕೆ ಅದು ಸೂಕ್ತವಾದ ಸ್ಥಳ, ನಾವು ಅಲ್ಲಿ ಇಡಬೇಕೆಂದು ನನ್ನ ಮೇಲೆ ಒತ್ತಡವನ್ನು ತಂದರು, ಆ ಸಂದರ್ಭದಲ್ಲಿ ನಾನು ಅವರಿಗೆ ನಾನು ಮನವಿಯನ್ನು ಮಾಡಿದೆ. ಅದು ಸಾರ್ವಜನಿಕವಾದ ಸ್ಥಳದಲ್ಲಿ ಅಥವಾ ಎಲ್ಲೇ ನಾವು ಇಟ್ಟರೂ ಆ ಜನರಲ್ಲಿ ಇರತಕ್ಕಂಥ ಆ ಭಾವನೆಗಳನ್ನು ನೋಡಿದಾಗ ನಾವು ಅವರ ಶರೀರವನ್ನು ಸರಿಯಾದ ರೀತಿ, ಆ ಉದ್ರೇಕಕ್ಕೊಳಗಾಗಿರತಕ್ಕಂಥ ಜನರಿಂದ ರಕ್ಷಣೆಯನ್ನು ಮಾಡಲಿಕ್ಕೆ ಸಾಧ್ಯವಾಗುವು ದಿಲ್ಲವೆಂದು ನಾನು ತಕ್ಷಣದಲ್ಲಿ ಅವರ ಗಮನಕ್ಕೆ ತಂದೆ ಆದರೂ, ಸರ್ಕಾರ ಮತ್ತು ಪೋಲಿಸ್ ನವರ ಗಮನಕ್ಕೆ ತರದೇ ಅವರು ವಾಹನದಲ್ಲಿ ತೆಗೆದುಕೊಂಡು ಪ್ಯಾಲೇಸ್ ಗ್ರೌಂಡ್‌ಗೆ ಹೋದರು. ಪ್ಯಾಲೇಸ್

ಗ್ರೌಂಡ್‌ನಲ್ಲಿ ನಡೆದ ಘಟನೆಗಳ ಬಗ್ಗೆ ಈಗಾಗಲೇ ಬಹಳ ವಿಸ್ತಾರವಾಗಿ ನಮ್ಮ ಮಾನ್ಯ ನರೇಂದ್ರಬಾಬುರವರು ಚರ್ಚೆಯನ್ನು ಮಾಡಿದ್ದಾರೆ. ನಾನು ಪುನಃ ಆ ವಿಷಯವನ್ನು ಇಲ್ಲಿ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. ನಮ್ಮ ಅಧಿಕಾರಿಗಳಿಗೆ ನಾನು ಮತ್ತೆ ಮನವಿಯನ್ನು ಮಾಡಿದೆ. ಇಲ್ಲ ಯಾವುದೇ ಕಾರಣಕ್ಕೂ ಈ ಯಾವ ಸ್ಥಳಗಳು ಸೂಕ್ತವಾಗುವುದಿಲ್ಲ. ನೀವು ಏನಾದರೂ ಮಾಡಿ, ಕಂಠೀರವ ಸ್ಟೇಡಿಯಂನಲ್ಲಿ ನಾವು ಎಲ್ಲಾ ರೀತಿಯ ಸೌಕರ್ಯವನ್ನು ಕಲ್ಪಿಸಿದಾಗ ಎಷ್ಟೇ ಜನರೂ ಬಂದರೂ, ಲಕ್ಷಾಂತರ ಜನರು ಬಂದರೂ ಅಲ್ಲಿ ಅವರಿಗೆ ಅಂತಿಮ ದರ್ಶನ ಮಾಡುವುದಕ್ಕೆ ಅನುಕೂಲಗಳನ್ನು ಮಾಡಲಿಕ್ಕೆ ಅವಕಾಶಗಳಿವೆ. ಆದ್ದರಿಂದ, ಅಲ್ಲಿ ತಯಾರಿ ಮಾಡಿ ಎಂದು ನಾನು ಹೇಳಿದೆ ಅದಾದನಂತರ, ಮತ್ತೆ ಆ ಕುಟುಂಬ ವರ್ಗದ ಸದಸ್ಯರುಗಳು ಇಲ್ಲ, ನಾವು ಪೂರ್ಣಪ್ರಜ್ಞ ಮೈದಾನದಲ್ಲಿ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡಿದ್ದೇವೆ. ಎಂದು ಅಲ್ಲಿಗೆ ದೇಹವನ್ನು ಮತ್ತೆ ತೆಗೆದುಕೊಂಡು ಹೋದರು. ಈ ಒಂದು ವಿಷಯ ಸೂಕ್ಷ್ಮವಾದ ವಿಚಾರವಾಗಿತ್ತು. ಒಂದು ಕಡೆ ಕುಟುಂಬದ ಸದಸ್ಯರುಗಳ ಭಾವನೆಗಳಿಗೂ ನಾವು ಸ್ಪಂದಿಸಬೇಕಾಗಿತ್ತು. ಆ ರೀತಿಯ ಒಂದು ವಾತಾವರಣದಲ್ಲಿ ಕುಟುಂಬದ ಸದಸ್ಯರ ಮಾತುಗಳಿಗೆ ನಮ್ಮ ಪೋಲಿಸ್ ಅಧಿಕಾರಿಗಳು ಆ ಸಂದರ್ಭದಲ್ಲಿ ತಲೆಬಾಗಬೇಕಾದಂಥ ಸನ್ನಿವೇಶದಲ್ಲಿ, ಅವತ್ತು ದೇಹವನ್ನು ಎಲ್ಲಿ ತೆಗೆದುಕೊಂಡು ಹೋಗಬೇಕೆನ್ನುವಂಥ ವಿಷಯದಲ್ಲಿ ಗೊಂದಲ ನಿರ್ಮಾಣವಾಯಿತು. ಆ ಸಂದರ್ಭದಲ್ಲಿ ಕೊನೆಗೆ ನಾವು ರಾತ್ರಿ 9.30 ಗಂಟೆಗೆ ಅವರ ದೇಹವನ್ನು ಕಂಠೀರವ ಸ್ಟೇಡಿಯಂಗೆ ತರುವುದರಲ್ಲಿ ಯಶಸ್ವಿಯಾದೆವು, ನಾನೇ ಖುದ್ದಾಗಿ ಕಂಠೀರವ ಸ್ಟೇಡಿಯಂನಲ್ಲಿ ರಾತ್ರಿ ಸುಮಾರು ಅರ್ಧ, ಮುಕ್ಕಾಲು ಗಂಟೆಗಳ ಕಾಲ ನಿಂತು ಅಲ್ಲಿ ಸೂಕ್ತ ವ್ಯವಸ್ಥೆಯನ್ನು ಮಾಡಲು ಕ್ರಮವನ್ನು ತೆಗೆದುಕೊಳ್ಳಲು ಪ್ರಯತ್ನಪಟ್ಟೆ, ಆ ಸಂದರ್ಭದಲ್ಲಿ ಹಲವಾರು ಜನ ಅವರು ಯಾವುದೇ ರೀತಿಯ ಒಂದು ಪ್ರಜ್ಞೆಯನ್ನು ಕಳೆದುಕೊಂಡಿದ್ದರು. ಪ್ರಜ್ಞೆಯಿಲ್ಲದೆ ಪಾರ್ಥಿವ ಶರೀರವನ್ನು ತರುವುದಕ್ಕಿಂತ ಮುಂಚೆಯೇ ಅಲ್ಲಿಯೇ ಒಂದು ಅಹಿತಕರವಾದ ಒಂದು ವಾತಾವರಣವನ್ನು ನಿರ್ಮಾಣ ಮಾಡಲು ಹೊರಟಿದ್ದರು. ನಮ್ಮ ಅಧಿಕಾರಿಗಳು ನನಗೆ ಮನವಿಯನ್ನು ಮಾಡಿದರು." ದಯವಿಟ್ಟು ನೀವು ಇಲ್ಲಿದ್ದರೆ, ನಾವು ಒಂದು ಕಡೆ ನಿಮಗೇ ರಕ್ಷಣೆಯನ್ನು ಕೊಡಲು ಗಮನವನ್ನು ಕೊಡಬೇಕಾಗುತ್ತದೆ. ನಾವು ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಅವರ ಅಂತಿಮ ದರ್ಶನವನ್ನು ಮಾಡತಕ್ಕಂಥದ್ದಕ್ಕೆ ಸರ್ಕಾರದ ವತಿಯಿಂದ ಎಲ್ಲಾ ರೀತಿಯ

ಗೌರವವನ್ನೇನು ಸಲ್ಲಿಸಬೇಕಾಗುತ್ತದೆ, ಆ ಕೆಲಸವನ್ನು ಮಾಡುತ್ತೇವೆಂದು ಹೇಳಿ ನಾನು ಅಲ್ಲಿ ಇರುವುದು ಸೂಕ್ತವಲ್ಲವೆಂದು ನನಗೆ ಮನವಿಯನ್ನು ಮಾಡಿದರು. ಅದಾದನಂತರ ಅಲ್ಲಿಂದ ಹೋಗತಕ್ಕಂಥ ಸಂದರ್ಭದಲ್ಲೂ ಅಧಿಕಾರಿಗಳಿಗೆ ನಾನು ಸೂಚನೆಯನ್ನು ಕೊಟ್ಟೆ. ಆ ರೀತಿಯ ಸೂಕ್ಷ್ಮವಾದ ಸಂದರ್ಭದಲ್ಲಿ ಸರ್ಕಾರದ ಯಾವುದೇ ಆಸ್ತಿಪಾಸ್ತಿಗಳಿಗೆ ನಷ್ಟವಾದರೆ, ಯಾವುದೇ ರೀತಿಯ ಗೋಲಿಬಾರ್‌ಗೆ ಅವಕಾಶವನ್ನು ಕೊಡತಕ್ಕಂಥದ್ದು ಸೂಕ್ತವಲ್ಲ, ನೀವು ಆಶ್ರುವಾಯು ಶೆಲ್ ಅನ್ನು ಎಷ್ಟಾದರೂ ಸಿಡಿಸಿ. ನೀವು ಲಾಠಿ ಚಾರ್ಜ್‌ಅನ್ನು ಎಷ್ಟಾದರೂ ಮಾಡಿ. ಆದರೆ, ಯಾವುದೇ ಕಾರಣಕ್ಕೂ ಅಮಾಯಕರು ಸಾವಿಗೀಡಾಗುವಂತ ವಾತಾವರಣವನ್ನು ನಿರ್ಮಾಣ ಮಾಡದೇ ಆದಷ್ಟೂ ನೀವು ಶ್ರಮವನ್ನುವಹಿಸಿ'' ಎಂದು ನಾನು ಪೊಲೀಸ್ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೆ. ಆವತ್ತು ರಾತ್ರಿ ಎಲ್ಲಾ ರೀತಿಯ ಅನುಕೂಲಗಳನ್ನು ಮಾಡಿ, ಬೆಳಗ್ಗೆ 9 ಗಂಟೆಯವರೆಗೂ ಯಾವುದೇ ರೀತಿಯ ತೊಂದರೆಗಳಿಲ್ಲದೆ ದರ್ಶನವನ್ನು ಮಾಡಲು ಸರ್ಕಾರ ಸಂಪೂರ್ಣ ಕ್ರಮವನ್ನು ತೆಗೆದುಕೊಂಡಿತ್ತು. ಅದರ ಜೊತೆಗೆ, ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡಿದ್ದರು. ಡಾ;ರಾಜ್‌ಕುಮಾರ್‌ರವರ ಪುತ್ರರಾಗಿರತಕ್ಕಂಥ ರಾಘವೇಂದ್ರ ರಾಜ್‌ಕುಮಾರ್‌ಅವರ ಒಂದು ಹೇಳಿಕೆಯನ್ನು ಕೊಟ್ಟರು. ಬೆಳಿಗ್ಗೆ 9 ಗಂಟೆಯವರೆಗೂ ತಿರುಪತಿ ತಿಮ್ಮಪ್ಪ ದರ್ಶನ ಯಾವ ರೀತಿ ಶಾಂತವಾಗಿ ನಡೆಯುತ್ತದೆ ಆ ರೀತಿ ದರ್ಶನ ನಡೆಯುತ್ತಿತ್ತು. 9 ಗಂಟೆಗೆ ಎಲ್ಲಿಂದಲೋ ಒಂದೆರಡು ಮೂರು ಬಂದವರು ಗುಂಪುಗಳಲ್ಲಿ ಅಹಿತಕರ ವಾತಾವರಣವನ್ನು ನಿರ್ಮಾಣ ಮಾಡಿದರು, ನನಗೆ ನಿಜಕ್ಕೂ ನೋವಾಯಿತೆಂಬ ಮಾತನ್ನು ಅವರು ಹೇಳಿದರು. ನಾನು ರಾತ್ರಿ ಒಂದೂವರೆ ಗಂಟೆಯಲ್ಲಿ ಪಾರ್ವತಮ್ಮ ರಾಜ್‌ಕುಮಾರ್‌ರವರ ಹತ್ತಿರ ಚರ್ಚೆಯನ್ನು ಮಾಡಿದೆ. ನಾನು ಅವರಿಗೆ ಮನವಿಯನ್ನು ಮಾಡಿದ್ದು "ಹೆಸರುಘಟ್ಟದ ಹತ್ತಿರ ಚಿತ್ರನಗರಿಯ ಒಂದು ಜಾಗವಿದೆ, ಆ ಜಾಗದ ಬಗ್ಗೆ ನೀವು ಯೋಚನೆಯನ್ನು ಮಾಡಿ. ಇಲ್ಲವಾದರೆ, ಮೈಸೂರು ರಸ್ತೆಯಲ್ಲಿರತಕ್ಕಂಥ ಪುನೀತ್ ಫಾರಂ ಎದುರುಗಡೆ ಸರ್ಕಾರದ ಭೂಮಿಯನ್ನೇ ನಾವು ಕೊಡಲಿಕ್ಕೆ ಸಿದ್ಧವಿದ್ದೇವೆ. ನೀವು ಪುನೀತ್ ಫಾರಂನಲ್ಲೇ ಶವಸಂಸ್ಕಾರ ಮಾಡಲು ನಿಮಗೆ ಮನಸ್ಸಿಲ್ಲದಿದ್ದರೆ ಸರ್ಕಾರದ ವತಿಯಿಂದಲೇ ನಾವು ಎಲ್ಲಾ ಸೌಕರ್ಯಗಳನ್ನು ಕಲ್ಪಸುತ್ತೇವೆ, ಅಲ್ಲಿ ಮಾಡೋಣ ಎಂಬ'' ಮನವಿಯನ್ನು ಮಾಡಿದೆ. ಆದರೆ, ಅವರು ಕೊನೆಗೆ ನನಗೆ ರಾತ್ರಿ ಒಂದೂವರೆ ಗಂಟೆಯಲ್ಲಿ ಇಲ್ಲ ನಮಗೆ ಕಂಠೀರವ ಸ್ಟುಡಿಯೋದಲ್ಲಿ ಅವರ ಹಲವಾರು

ಚಿತ್ರಗಳ ಚಿತ್ರೀಕರಣವನ್ನು ಮಾಡಿದ್ದಾರೆ, ನಮಗೆ ಕಂಠೀರವ ಸ್ಟುಡಿಯೋದಲ್ಲೇ ಅವರ ಅಂತಿಮ ಸಂಸ್ಕಾರವನ್ನು ಮಾಡಬೇಕು ಎಂದು ಹೇಳಿ ಅವರು ನನಗೆ ಒತ್ತಾಯವನ್ನು ಮಾಡಿದರು. ಆ ಒಂದು ಹಿನ್ನಲೆಯೊಳಗೆ ನನಗೆ ಆವತ್ತು ಗೊತ್ತಿತ್ತು, ಕಂಠೀರವ ಸ್ಟುಡಿಯೋದೊಳಗೆ ಕೇವಲ ಒಂದೇ ಒಂದು ಗೇಟ್ ಇದೆ, ಅಲ್ಲಿ ಬರುವ ಅಭಿಮಾನಿಗಳ ಒತ್ತಡವನ್ನು ಅಭಿಮಾನಿಗಳ ಸಂಖ್ಯೆಯನ್ನು ಆವತ್ತು ಅಲ್ಲಿ ನಾವು ಒಳಗಡೆ ಬಿಡತಕ್ಕಂಥ ಸಂದರ್ಭದಲ್ಲಿ ಅನಾಹುತಗಳಾಗುತ್ತವೆಂದು ನಮಗೆ ಗೊತ್ತಿದ್ದರೂ ಕೂಡ ನಾವು ಅಂಥ ಸಂದರ್ಭದಲ್ಲಿ ಅವರ ಒಂದು ಭಾವನೆಗಳಿಗೆ ನೋವು ಕೊಡಬಾರದು, ಅವರು ದುಃಖದಲ್ಲಿ ಇದ್ದಾರೆ, ಯಾವುದೇ ರೀತಿಯಿಂದ ಅವರ ದುಃಖಕ್ಕೆ, ನಾವು ಅವರ ಭಾವನೆಗಳಿಗೆ ಆ ಸಂದರ್ಭದಲ್ಲಿ ಸ್ಪಂದಿಸದೇ ಇದ್ದರೆ, ಸರಿಯಾದ ರೀತಿಯ ನ್ಯಾಯವನ್ನು ದೊರಕಿಸಿ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲವೆಂಬ ಕಾರಣದಿಂದ, ನಾನು ಅವರ ಮಾತಿಗೆ ತಲೇಬಾಗಿ ಕಂಠೀರವ ಸ್ಟುಡಿಯೋದಲ್ಲಿ ಅವರ ಅಂತಿಮ ಸಾಂಸ್ಕರವನ್ನು ಮಾಡಲು ಎಲ್ಲಾ ರೀತಿಯ ಕ್ರಮವನ್ನು ತೆಗೆದುಕೊಂಡೆವು. ಮಾರನೇ ದಿವಸದ ಬಗ್ಗೆ ಹೇಳುವುದಕ್ಕಿಂತ ಮುಂಚೆ ಆವತ್ತು ಸಾಯಂಕಾಲ ಸುಮಾರು 300, 350 ಜನ ಕೆಲವು ಅಹಿತಕರ ಘಟನೆಗಳಿಗೆ ಕಾರಣಕರ್ತರಾದಂಥವರು, ಪ್ರೇರೇಪಣೆ ಕೊಡತಕ್ಕಂಥವರನ್ನು ಅಧಿಕಾರಿಗಳು ಬಂಧಿಸುವ ಕೆಲಸವನ್ನು ಮಾಡಿದರು. ನಾವು ಬೆಳಗ್ಗೆ ಹೆಚ್ಚುವರಿ ಪೋಲಿಸರನ್ನು ಹಾಕಬೇಕಾಗಿತ್ತು. ಅದಕ್ಕೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಆವತ್ತು ಅವರ ನಿಧನದ ವಾರ್ತೆಯನ್ನು ಕೇಳಿದಂಥ ಸಂದರ್ಭದಲ್ಲಿ ಹಲವಾರು ತುಕಡಿಗಳನ್ನೆನು ಹೊರ ರಾಜ್ಯದ ಚುನಾವಣೆಗೆ ಕಳುಹಿಸಲು ಆದೇಶಗಳಾಗಿತ್ತು ಹಾಗೂ ಅದ್ವಾನಿಯವರ ರಥಯಾತ್ರೆಯ ಸಂದರ್ಭದಲ್ಲಿ ಹುಬ್ಬಳ್ಳಿಯ ರಕ್ಷಣೆಗೆ ನಾವು ಪೊಲೀಸ್ ತುಕಡಿಯನ್ನು ಕಳುಹಿಸತಕ್ಕಂಥ ಸಂದರ್ಭವಿತ್ತು ಆ ಸಂದರ್ಭದಲ್ಲಿ ಮೊದಲನೇ ದಿವಸ ಪೊಲೀಸ್ ಸಂಖ್ಯೆ ಕಡಿಮೆ ಇದ್ದರೂ, ನಾವು ಎರಡನೇ ದಿವಸ ರಕ್ಷಣೆಯನ್ನು ಮಾಡತಕ್ಕಂಥದ್ದಕ್ಕೆ ಅಧಿಕಾರಿಗಳ ಸಂಖ್ಯೆಯನ್ನು ಉತ್ತಮಪಡಿಸಬೇಕಾಗಿತ್ತು ಅದಕ್ಕೆ ಕ್ರಮವನ್ನು ತೆಗೆದುಕೊಂಡಿದ್ದೆವು. ಆವತ್ತು ಸುಮಾರು 70 ತುಕಡಿಗಳನ್ನು additional ಆಗಿ ನಾವು ಆ ಸಂದರ್ಭದಲ್ಲಿ depute ಮಾಡಿದೆವು. ನಮ್ಮ ಶಿವಕುಮಾರ್‌ರವರು, ರಕ್ಷಣಾ ಇಲಾಖೆಯಿಂದ ಅವತ್ತು ಸೈನ್ಯವನ್ನು ಕರೆಸಬೇಕಾಗಿತ್ತೆಂದು ಹೇಳಿದರು. ನಾನು ಅದರ ಬಗ್ಗೆಯೂ ಚರ್ಚೆಯನ್ನು ಮಾಡಿದೆ. ನೀವೂ ಅಧಿಕಾರವನ್ನು ನಡೆಸಿರತಕ್ಕಂಥವರು. ಒಂದು ಸಲ ನಗರದ ರಕ್ಷಣೆಯನ್ನು ಮಾಡತಕ್ಕಂಥ ಜವಾಬ್ದಾರಿಯನ್ನು ನಾವು ರಕ್ಷಣಾ

ಇಲಾಖೆಗೆ ಕೊಟ್ಟರೆ ರಕ್ಷಣಾ ಇಲಾಖೆಯವರು ಏನಾದರೂ ಅಹಿತಕರ ಘಟನೆಗಳು ನಡೆದಾಗ ನಮ್ಮ ಅಧಿಕಾರಿಗಳ ಮಾತಿಗೆ ಬೆಲೆ ಕೊಡದೆ, ಅವರು ನೇರವಾಗಿ ಅವರದೇ ಆದ ಕ್ರಮಗಳನ್ನು ತೆಗೆದುಕೊಳ್ಳುವುದರ ಮುಖಾಂತರ, ಇನ್ನೂ ಹೆಚ್ಚಿನ ಮುಗ್ಧರ ಸಾವಿನ ಸಂಖ್ಯೆ ಜಾಸ್ತಿಯಾಗತಕ್ಕಂಥ ವಾತಾವರಣವಾಗುತ್ತದೆಂದು ಹೇಳಿ ನಮ್ಮ ಅಧಿಕಾರಿಗಳು ನನ್ನ ಗಮನಕ್ಕೆ ತಂದು ನನ್ನ ಜೊತೆ ಚರ್ಚೆಯನ್ನು ಮಾಡಿದರು. ಆ ದೃಷ್ಟಿಯಿಂದ ಅಂತಿಮವಾಗಿ ನಾವು ಆ ಕೆಲಸವನ್ನು ಮಾಡಬೇಕಾಗುತ್ತದೆ . ನಮ್ಮ ಕೈಯಲ್ಲಿ ರಕ್ಷಣೆಯನ್ನು ಮಾಡಲಿಕ್ಕೆ ಸಾಧ್ಯವಿದೆ ಎನ್ನುವ ರೀತಿಯಲ್ಲಿ ನನ್ನ ಗಮನಕ್ಕೆ ತಂದಿದ್ದರಿಂದ, ಆವತ್ತು ರಕ್ಷಣಾ ಇಲಾಖೆಯ ನೆರವನ್ನು ನಾವು ಕೋರಲಿಲ್ಲ. ರಕ್ಷಣಾ ಇಲಾಖೆಯ ನೆರವನ್ನು ಕೋರಬೇಕೆಂದು ನಾನು ಚರ್ಚೆಯನ್ನು ಮಾಡಿದ್ದೇನೆ. ಅದರಲ್ಲಿ ನಾನು ವಿಫಲನಾಗಿಲ್ಲವೆಂದು ಹೇಳಬಯಸುತ್ತೇನೆ. ಅವರ ಅಂತಿಮ ದರ್ಶನ ಪಡೆಯತಕ್ಕಂಥ ಸಂದರ್ಭದಲ್ಲಿ, ಅಂತ್ಯ ಕ್ರಿಯೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಆ ದಿವಸ ಸಂಜೆ ಐದು ಗಂಟೆಯವರೆಗೆ ಅಹಿತರಕರ ಘಟನೆಗಳು ಬೇರೆ ರೀತಿಯಲ್ಲಿ ಆಯಿತು. ಅಮಾಯಕರ ಸಾವನ್ನು ತಪ್ಪಿಸಲಿಕ್ಕೆ ನಾವು ಎಲ್ಲಾ ರೀತಿಯ ಕ್ರಮವನ್ನು ಕೈಗೊಂಡಿದ್ದು, ಅದಕ್ಕೆ ನಮ್ಮ ಪೋಲಿಸ್ ಅಧಿಕಾರಿಗಳು ಶಾಂತ ರೀತಿಯಿಂದ ವರ್ತಿಸಿದರು. ಜೊತೆಗೆ ಪೋಲಿಸರು ಎಲ್ಲಾ ರೀತಿಯ ಅವರ ಶರೀರಕ್ಕೆ ಆದಂಥ ನೋವನ್ನು ತಿಂದು, ಅವರ ಶರೀರಕ್ಕೆ ಆದಂಥ ಪೆಟ್ಟನ್ನು ಅನುಭವಿಸಿದರು, ಆದರೂ ಯಾವುದೇ ರೀತಿಯ ಉದ್ರೇಕಕ್ಕೆ ಒಳಗಾಗದೆ ರಾಜ್‌ಕುಮಾರ್‌ರವರ ದೇಹ ಇರುವವರಿಗೆ ಯಾವುದೇ ರೀತಿಯ ಘಟನೆ ನಡೆದರೂ ಅದನ್ನು ಅವರು ತಡೆದು ಅವರು ತಮ್ಮ ಕೆಲಸವನ್ನು ಮಾಡಿದ್ದಾರೆ. ಅವರು ಆ ರೀತಿ ವರ್ತಿಸಲಿಕ್ಕೆ ಕಾರಣ ನಾನು ಆ ದಿವಸ ಏನು ನಿರ್ಧಾರ ತೆಗೆದುಕೊಂಡಿದ್ದೆ ಎಂದರೆ ಯಾವುದೇ ಕಾರಣಕ್ಕೆ ಗೋಲಿಬಾರ್ ಮಾಡಬಾರದು ಎಂದು ಅವರಿಗೆ ಹೇಳಿದ್ದೆ. ಬೆಳಿಗ್ಗೆ ಹನ್ನೊಂದೂವರೆ ಹನ್ನೆರಡು ಗಂಟೆ ಸಮಯದಲ್ಲಿ ಶವವನ್ನು ಇಟ್ಟಿರತಕ್ಕಂಥ ಸ್ಥಳದಿಂದ ಸಂಪಂಗಿರಾಮನಗರದ ಮೇಲುಗಡೆ ಸರ್ಕಲ್‌ನಲ್ಲಿ ಪೋಲೀಸ್ ವಾಹನದ ಮೇಲೆ ಅಟ್ಯಾಕ್ ಮಾಡಿದಂಥ ಸನ್ನಿವೇಶದಲ್ಲಿ ಪೋಲಿಸ್ ಇಲಾಖೆಯ ಒಬ್ಬ ಕಾನ್‌ಸ್ಟೇಬಲ್ ತೀರಿಕೊಂಡು ಹೋದಂಥ ಸಂದರ್ಭದಲ್ಲಿ, ಗೋಲಿಬಾರ್ ನಡೆದಾಗ ಒಬ್ಬನು ತೀರಿಕೊಂಡನು. ಆ ಎರಡು ಜೀವಿಗಳು ಸಾಯತಕ್ಕಂಥ ವಾತಾವರಣ ನಿರ್ಮಾಣವಾಯಿತು, ಸಂಜೆ ಐದು ಗಂಟೆಯವರೆಗೆ ಯಾವುದೇ ರೀತಿಯ ಗೋಲಿಬಾರ್ ಆಗದೇ, ಎಷ್ಟೇ ಸರ್ಕಾರದ ಹಾಗೂ ಸಾರ್ವಜನಿಕ

ಆಸ್ತಿಪಾಸ್ತಿ ಇರಬಹುದು ಅದಕ್ಕೆ ತೊಂದರೆಗಳಾದರೂ ಆವತ್ತು ಅವುಗಳಿಗೆ ನಷ್ಟವನ್ನು ಮಾಡಿದರೂ, ಆವತ್ತು ನಾವು ಯಾವುದೇ ರೀತಿಯ ಹೆಚ್ಚಿನ ಸಾವು–ನೋವುಗಳು ಆಗಬಾರದೆಂದು ನಾವು ಕ್ರಮ ತೆಗೆದುಕೊಂಡಿದ್ದೇವು ಸಂಜೆ ನಾನು ಮುಖ್ಯಮಂತ್ರಿಯಾಗಿ ಆ ಸ್ಥಳಕ್ಕೆ ಹೋಗಲಿಕ್ಕೆ ಆಗಲಿಲ್ಲ ಎನ್ನುವ ಒಂದು ಮಾತನ್ನು ಹೇಳಿದರು. ನಾನು ಅಲ್ಲಿ ಅಸಹಾಯಕತೆಯಿಂದ ಹೋಗಲಿಕ್ಕೆ ಆಗಲಿಲ್ಲವೆಂದು ಹೇಳಲಿಕ್ಕೆ ತಯಾರಿಲ್ಲ. ನಾನು ಹೋಗುವುದರ ಮುಖಾಂತರ ಅಲ್ಲಿ ಹೆಚ್ಚಿನ ಅಮಾಯಕರು ಸಾಯಬಾರದು ಎನ್ನುವ ದೃಷ್ಟಿಯಿಂದ ನಾನು ಆ ದಿವಸ ಆ ತೀರ್ಮಾನವನ್ನು ಮಾಡಿದ್ದೇನೆ. ಅಂಥ ಒಂದು ಸನ್ನಿವೇಶದಲ್ಲಿ ಹಲವಾರು ಪ್ರಮುಖರು ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಬೇಕು ಅವರಿಗೆ ಗೌರವವನ್ನು ಸಲ್ಲಿಸಬೇಕು ಎನ್ನುವ ಭಾವನೆ ಪ್ರತಿಯೊಬ್ಬರಲ್ಲಿ ಆ ದಿವಸ ಇತ್ತು. ಆ ಸಂದರ್ಭದಲ್ಲಿ ಚಿತ್ರನಟರುಗಳು ಇರಬಹುದು, ಪ್ರಮುಖ ರಾಜಕಾರಣಿಗಳು ಇರಬಹುದು, ಇಂಥವರೆಲ್ಲೂರು ಕೂಡ ಆ ಒಂದು ಸ್ಥಳಕ್ಕೆ ಹೋಗಬೇಕು ಎಂದು ಹೊರಟ ಸಂದರ್ಭದಲ್ಲಿ ಅಲ್ಲಿ ಇದ್ದಂಥ ಸಣ್ಣ ಗೇಟಿನ ವ್ಯವಸ್ಥೆಯಲ್ಲಿ ಅವರು ಹೋಗಲಿಕ್ಕೆ ಅವರಿಗೆ ಸ್ಥಳವನ್ನು ತೆರವು ಮಾಡತಕ್ಕಂಥ ಸನ್ನಿವೇಶದಲ್ಲಿ ಅಲ್ಲಿ ನೂರಾರು ಜನ ನುಗ್ಗುವಂತಹ ವಾತಾವರಣ ನಿರ್ಮಾಣವಾಗಿತ್ತು. ನಾವು ವಿಐಪಿಗಳನ್ನು ಒಳಗಡೆ ಬಿಡತಕ್ಕಂಥ ಸನ್ನಿವೇಶದಲ್ಲಿ ನಮಗೆ ಒಳಗಡೆ ಬಿಡತಕ್ಕಂಥ ಜಾಗದಲ್ಲಿ ಇಕ್ಕಟ್ಟಿನ ಪರಿಸ್ಥಿತಿ ಇದ್ದು ಅದರ ಬಗ್ಗೆ ಅಧಿಕಾರಿಗಳು ತಮ್ಮ ಅಸಹಾಯಕತೆಯನ್ನು ತೋರಿಸಿದರು. ಅದರಲ್ಲಿ ನಾನು ಯಾವುದೇ ರೀತಿಯ ಸುಳ್ಳನ್ನು ಹೇಳಲಿಕ್ಕೆ ಇಷ್ಟವಿಲ್ಲ. ಆ ಒಂದು ದೃಷ್ಟಿಯಿಂದ ವಿಐಪಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿಗೆ ಹೋದಾಗ ಅಲ್ಲಿಯ ಸ್ಥಳದ ಇಕ್ಕಟ್ಟಿನ ಪರಿಸ್ಥಿತಿ ಇತ್ತು, ನಮಗೆ ತೊಂದರೆಗಳು ಆಗುತ್ತವೆ ಎನ್ನುವ ದೃಷ್ಟಿಯಿಂದಲೇ ನಾನು ಆ ದಿವಸ ಅಲ್ಲಿಗೆ ಹೋಗಲಿಲ್ಲವೇ ಹೊರತು ಯಾವುದೇ ಅಸಹಾಯಕತೆಯಿಂದ ಅಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಈವತ್ತು ಆ ಸಂದರ್ಭದಲ್ಲಿ ನಡೆದಂಥ ಘಟನೆಗಳ ಬಗ್ಗೆ ತನಿಖೆಯಾಗಬೇಕೆಂದು ಮಾನ್ಯ ಹಿರಿಯ ಸದಸ್ಯರುಗಳು ಇವತ್ತು ಈ ಸಂದರ್ಭದಲ್ಲಿ ತಮ್ಮ ಹೇಳಿಕೆಯನ್ನು ಕೊಟ್ಟಿದ್ದೀರಿ. ಇವತ್ತು ಈ ಘಟನೆಗಳಲ್ಲಿದ್ದಂಥವರ ಬಗ್ಗೆ ಈಗಾಗಲೇ ಮಾಹಿತಿ ಸಿಕ್ಕಿವೆ; ಅದಕ್ಕೆ ಯಾವುದೇ ತನಿಖೆ ಅವಶ್ಯಕತೆಯಿಲ್ಲ. ಎಲ್ಲಾ ಚಾನಲ್‌ಗಳಲ್ಲಿ ದೊರಕಿರತಕ್ಕಂಥ ಮಾಹಿತಿಯ ಪ್ರಕಾರ ಈಗಾಗಲೇ ಸುಮಾರು 890 ಜನರನ್ನು ಬಂಧಿಸಿ ವಿಚಾರಣೆಯನ್ನು ಪ್ರಾರಂಭ ಮಾಡಿದ್ದಾರೆ, ಇದಕ್ಕೆ ಯಾವುದೇ ರೀತಿಯ ತನಿಖೆಯ ಅವಶ್ಯಕತೆಯಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ

ಬಯಸುತ್ತೇನೆ. ಆ ರೀತಿಯ ತನಿಖೆ ಮಾಡಲೇಬೇಕು ಎಂದು ತಾವು ಇವತ್ತು ಹೇಳುವುದಾದರೆ, ಬೆಂಗಳೂರು ನಗರದ ಬಗ್ಗೆ ನಮ್ಮ ಮಾನ್ಯ ಶಿವಕುಮಾರ್‌ರವರು ಮಾತನಾಡುತ್ತ ಹೊರ ದೇಶಗಳಿಂದ ನಮ್ಮಲ್ಲಿಗೆ ವಿದೇಶಿಗರು ಬರತಕ್ಕಂಥ ಸಂದರ್ಭದಲ್ಲಿ ವಿಶ್ವವೇ ಬೆಂಗಳೂರನ್ನು ನೋಡುತ್ತಿದೆ ಎಂದು ಹೇಳಿದರು. ರಾಜ್‌ಕುಮಾರ್‌ರವರ ನಿಧನದ ಆ ಸಂದರ್ಭದಲ್ಲಿ ಅವರ ಅಂತ್ಯ ಕ್ರಿಯೆ ಮುಗಿದ ಒಂದು ಗಂಟೆಯೊಳಗೆ ಇಡೀ ನಗರದಲ್ಲಿ ಶಾಂತರೀತಿಯ ವಾತಾವರಣ ತರುವುದರಲ್ಲಿ ಸರ್ಕಾರ ತಕ್ಷಣ ಕ್ರಮ ತೆಗೆದುಕೊಂಡಿದೆ. ಅವರ ನಿಧನವಾದ ನಂತರ, ಅಂತ್ಯಕ್ರಿಯೆ ಮುಗಿದ ಒಂದು ಗಂಟೆಯಲ್ಲಿ ಇಡೀ ನಗರ ಶಾಂತವಾಗಿತ್ತು. ಅವರು ಒಂದು ಮಾತನ್ನು ಹೇಳಿದರು. ಅನುಭವದ ಕೊರತೆಯಿಂದಲೂ ಅಥವಾ ಸರ್ಕಾರದ ವೈಫಲ್ಯದಿಂದಲೋ ಅಥವಾ ಅಧಿಕಾರಿಗಳ ವೈಪ್ಯದಿಂದಲೋ ನೀವು ಏನು ತಪ್ಪನ್ನು ಮಾಡಿದಿರಿ ಆ ತಪ್ಪನ್ನು ಒಪ್ಪತಕ್ಕಂಥ ಹೃದಯ ಶ್ರೀಮಂತಿಕೆಯನ್ನು ತೋರಿಸಿರಿ ಎಂದು ಹೇಳಿದರು. ನಾನು ಅದರಲ್ಲಿ ಯಾವುದೇ ರೀತಿಯಾದಂಥ ತಪ್ಪನ್ನು ಮಾಡಿಲ್ಲ. ನಮ್ಮ ಸರ್ಕಾರದ ಅಧಿಕಾರಿಗಳು ಆ ಸಂದರ್ಭದಲ್ಲಿ ಯಾವುದೇ ರೀತಿಯಲ್ಲಿ ವಿಫಲರಾಗಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ತಾವು ಎಂಜಿಆರ್ ರವರ ನಿಧನದ ಸಂದರ್ಭದಲ್ಲಿ ಫೈರಿಂಗ್‌ನಲ್ಲಿ ಯಾವುದೇ ರೀತಿಯ ಮರಣಗಳು ಸಂಭವಿಸಿಲ್ಲವೆಂದು ಹೇಳಿದಿರಿ. ಅವರ ನಿಧನದ ಸಂದರ್ಭದಲ್ಲೂ ಕೂಡ ನಾಲ್ಕು ಜನ ಫೈರಿಂಗ್‌ನಲ್ಲಿ ತೀರಿಕೊಂಡು ಹೋಗಿರತಕ್ಕಂಥ ವರದಿ ಇದೆ, ಅದೇ ರೀತಿ ಇಂದಿರಾಗಾಂಧಿಯವರನ್ನು ಮೊರಾರ್ಜಿ ದೇಸಾಯಿರವರ ಸರ್ಕಾರ ಇದ್ದಾಗ ಜೈಲಿಗೆ ಕಳುಹಿಸತಕ್ಕಂಥ ನಿರ್ಧಾರವನ್ನು ಕೇಂದ್ರ ಸರ್ಕಾರ ಮಾಡಿದ ಸಂದರ್ಭದಲ್ಲಿ ಎಷ್ಟು ಜನ ಬಲಿಯಾದರು ಎನ್ನುವುದು ಇಲ್ಲಿ ವರದಿ ಇದೆ, ನಾನು ಅದರ ಬಗ್ಗೆ ವಿವರವನ್ನು ಕೊಡಲಿಕ್ಕೆ ಹೋಗುವುದಿಲ್ಲ. ಅದೇ ರೀತಿ ಕಾವೇರಿ ನೀರಿನ ವಿವಾದದ ಸಂದರ್ಭದಲ್ಲಿ ನಾಲ್ಕು ಐದು ದಿವಸಗಳು ನಡೆದಂಥ ಘಟನೆಯೊಳಗೆ 16 ಜನ, ಪೋಲಿಸ್ ಫೈರಿಂಗ್‌ನಲ್ಲಿ ಮರಣ ಹೊಂದಿರತಕ್ಕಂಥ ಘಟನೆಗಳು ಇವೆ. 170 ಜನ ಪೊಲೀಸ್ ಸಿಬ್ಬಂದಿಗಳಿಗೆ ಗಾಯವಾಗಿರತಕ್ಕಂಥ ಘಟನೆ ಇವೆ, 822 ಮೊಕದ್ದಮೆಗಳನ್ನು ಆ ಸಂದರ್ಭದಲ್ಲಿ ದಾಖಲು ಮಾಡಿದರು. ಅದೇ ರೀತಿ ಬಾಬ್ರಿ ಮಸೀದಿ ಧ್ವಂಸದ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ಎರಡು ವಾರಗಳ ಕಾಲ ಸತತವಾಗಿ ನಡೆದಂಥ ಘಟನೆಯಲ್ಲಿ ಸುಮಾರು 15 ಜನ ಪೋಲಿಸ್ ಫೈರಿಂಗ್‌ನಲ್ಲಿ ಮರಣ ಹೊಂದಿರತಕ್ಕಂಥದ್ದು, ನಾಲ್ಕು ಜನ ಗುಂಪು ಘರ್ಷಣೆಯಲ್ಲಿ ಮರಣ

ಹೊಂದಿರತಕ್ಕಂಥದ್ದು ಇದೆ. 1994ರ ಉರ್ದು ವಾರ್ತೆಯ ವಿಷಯದಲ್ಲಿ ಸುಮಾರು 20 ಜನ ಗುಂಪು ಘರ್ಷಣೆಯಲ್ಲಿ ಮರಣ ಹೊಂದಿರುವುದು, ನಾಲ್ಕು ಜನ ಪೋಲಿಸ್ ಫೈರಿಂಗ್‌ನಲ್ಲಿ ಮರಣ ಹೊಂದಿರತಕ್ಕಂಥ ಘಟನೆಗಳು ಇವೆ. 800 ಮನೆಗಳಿಗೆ ಬೆಂಕಿ ಹಾಕಿರತಕ್ಕಂಥ ಪ್ರಕರಣಗಳು ಇವೆ, ಹೀಗೆ ಹಲವಾರು ಘಟನೆಗಳು ಇವೆ, ರಾಜ್‌ಕುಮಾರ್‌ರವರ, ನಿಧನದ ಸಂದರ್ಭದಲ್ಲಿ ಭಾವೋದ್ವೇಗಕ್ಕೆ ಒಳಗಾದಂಥ ಜನ ಮನುಷ್ಯತ್ವವನ್ನು ಕಳೆದುಕೊಂಡು ಅಲ್ಲಿ ಅವರಿಗೆ ಸಾಂತ್ವನ ಮಾಡತಕ್ಕಂಥ ಶಕ್ತಿ ಯಾರ ಕೈಯಲ್ಲೂ ಇರಲಿಲ್ಲ. ತಾವು ಹೇಳಿದಿರಿ, ಎಲ್ಲಾ ವಿರೋಧ ಪಕ್ಷದ ನಾಯಕರನ್ನು ಕರೆದು ಕೂಡಿಸಿ ಚರ್ಚೆ ಮಾಡಿ ಆ ಸಂದರ್ಭದಲ್ಲಿ ನಿಮ್ಮ ಸಲಹೆಗಳನ್ನು ತೆಗೆದುಕೊಂಡಿದ್ದರೆ ಈ ಘಟನೆಯಾಗಲಿಕ್ಕೆ ಸಾಧ್ಯವಾಗುತ್ತಿರಲಿಲ್ಲವೆಂದು ಹೇಳಿದಿರಿ. ಆ ರೀತಿಯ ವಾತಾವರಣ ಅಲ್ಲಿ ಇರಲಿಲ್ಲ. ನಾನೇ ಪ್ರತ್ಯಕ್ಷವಾಗಿ ನೋಡಿದ್ದೇನೆ. ನೀವು ನೋಡಿದಿರಿ, ನರೇಂದ್ರ ಬಾಬುರವರು ಒಂದು ಮಾತನ್ನು ಹೇಳಿದರು. ಅದೊಂದು ಸಮೂಹ ಸನ್ನಿ ಎಂದು ಹೇಳಿದರು. ಆ ಸಂದರ್ಭದಲ್ಲಿ ನಡೆದಂಥ ಘಟನೆಗಳಲ್ಲಿ ಅಲ್ಲಿ ಸೇರಿರತಕ್ಕಂಥ ದುಷ್ಕರ್ಮಿಗಳು ಯಾರ ಮಾತನ್ನು ಕೇಳದೇ ಸ್ಥಿತಿಪ್ರಜ್ಞೆಯನ್ನೇ ಕಳೆದುಕೊಂಡಿದ್ದರು. ಅಂಥ ಒಂದು ಸನ್ನಿವೇಶದಲ್ಲಿ ನಮ್ಮ ಅಧಿಕಾರಿಗಳಿಗೆ ಹೆಚ್ಚಿನ ಸಾವು-ನೋವುಗಳಿಗೆ ಅವಕಾಶವನ್ನು ಕೊಡಬೇಡಿ ಎಂದು ನಾನು ಮನವಿ ಮಾಡಿದ್ದೆ, ನನಗೆ ಒಂದು ನೋವು ಇದೆ. ಆ ದಿವಸ ಸಂಜೆ ಆರು ಜನ ಮರಣಕ್ಕೆ ಗೋಲಿಬಾರ್ ನಲ್ಲಿ ಈಡಾದರು. ನನಗೆ ಅದೂ ಕೂಡ ಆಗಬಾರದೆನ್ನುವ ಮನಸ್ಸಿತ್ತು. ಕಠಿಣವಾದ ಕೆಲಸಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ತಾವು ಶಾಂತ ರೀತಿಯಿಂದ ತಮಗೆ ಏನೇ ನೋವುಗಳಾದರೂ, ನೀವು ರಕ್ಷಣೆ ಮಾಡಬೇಕೆಂದು ನಾನು ಅಧಿಕಾರಿಗಳಿಗೆ ಹೇಳಿದ್ದೆ. ಕೊನೆಯ ಹಂತದಲ್ಲಿ ಆ ರೀತಿ ಘಟನೆ ನಡೆಯಲಿಕ್ಕೆ ಕಾರಣ ಹಲವಾರು ಪ್ರಮುಖರು ಆ ಒಂದು ಸ್ಥಳಕ್ಕೆ ಕರೆದು ಕೊಂಡು ಬಂದಿರುವುದರಿಂದ ಆ ಒಂದು ಘಟನೆಯಲ್ಲಿ ಯಾವುದೇ ಒಬ್ಬ ಚಿತ್ರ ನಟರ ಮಾತನ್ನು ಕೇಳದಿರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿತ್ತು. ಮಾನ್ಯ ಅಂಬರೀಷ್‌ರವರು ಕೂಡ ಮನವಿ ಮಾಡಲಿಕ್ಕೆ ಹೋಗಿ ಕಡೆಗೆ ಅವರು ಕೂಡ ಅದರಲ್ಲಿ ವಿಫಲರಾದರು. ಮಾನ್ಯ ಶಿವಕುಮಾರ್ ರವರು ಕೂಡ ಆ ದಿವಸ ಅಲ್ಲಿ ಇದ್ದರು. ಅಲ್ಲಿ ನಡೆದಂಥ ಘಟನೆ ಅವರಿಗೂ ಗೊತ್ತಿದೆ. ಆ ಒಂದು ಜನಗಳ ಭಾವನೆ ಮತ್ತು ಅವರ ಪ್ರಜ್ಞೆ ಯಾವ ರೀತಿ ಇತ್ತು ಎನ್ನುವುದನ್ನು ಆವತ್ತು ತಾವು ಎಲ್ಲಾ ನೋಡಿದಿರಿ, ಆವತ್ತು ಯಾವುದೇ ರೀತಿಯ ಕಾನೂನಿನ ಮೂಲಕ ರಕ್ಷಣೆ ,ಮಾಡತಕ್ಕಂಥದ್ದರಲ್ಲಿ ಯಾರೇ ಆ ಸ್ಥಳದಲ್ಲಿ

ಇದ್ದರೂ ಕೂಡ ಆ ಕೆಲಸವನ್ನು ಮಾಡುವುದು ಕಷ್ಟ ಇತ್ತು. ನಾವು ಕಠಿಣವಾಗಿ ಏನಾದರೂ ತೀರ್ಮಾನವನ್ನು ಮಾಡಿ ಗೋಲಿಬಾರ್‌ರನ್ನು ಇನ್ನು ಹೆಚ್ಚಿಗೆ ಮಾಡಿದ್ದರೆ ಆ ಸಂದರ್ಭದಲ್ಲಿ ಇನ್ನೂ ಅನೇಕ ಅಮಾಯಕರು ಸಾಯತಕ್ಕಂಥ ವಾತಾವರಣ ಇತ್ತು. ಆ ದೃಷ್ಟಿಯಿಂದಲೇ ಆ ಸಂದರ್ಭದಲ್ಲಿ ನಮ್ಮ ಪೋಲಿಸ್ ಅಧಿಕಾರಿಗಳು ನಡೆದುಕೊಳ್ಳಬೇಕಾದ ಸನ್ನಿವೇಶ ಉದ್ಭವಾಯಿತೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ತನಿಖೆಯ ವಿಷಯದಲ್ಲಿ ಈಗಾಗಲೇ ಹಲವಾರು ರೀತಿಯ ಮಾಹಿತಿಯ್ನು ಪಡೆದು ತನಿಖೆಯನ್ನು ನಡೆಸುತ್ತಿದ್ದಾರೆ. ಇದರಲ್ಲಿ ಯಾವುದೇ ರೀತಿಯ ತನಿಖೆಯ ಅವಶ್ಯಕತೆಯಿಲ್ಲ ಏಕೆಂದರೆ, ನಾನು ಇಲ್ಲಿ ಹಿಂದಿನ ಪ್ರಕರಣಗಳನ್ನು ನೋಡಿದಾಗ, ತನಿಖೆಗಳನ್ನು ಯಾವ್ಯಾವ ಪ್ರಕರಣಗಳಲ್ಲಿ ಮಾಡಿದ್ದಾರೆ ಎಂಬ ವರದಿ ಇಲ್ಲಿ ಇದೆ. ಆದರೆ ಒಂದು ವಿಷಯದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಂದು ಮಾತನ್ನು ಹೇಳಿದರು. " ನೀವು ಕೊಡತಕ್ಕಂಥ ಕೆಲಸ ಮಾಡಿದ್ದರೆ ಬಹುಶಃ ಇವತ್ತು ಈ ಪ್ರಶ್ನೆಯನ್ನು ಈ ಒಂದು ಸದನದಲ್ಲಿ ನಾವು ತರುತ್ತಿರಲಿಲ್ಲ" ಎಂದು ಹೇಳಿದರು. ನಾನು ನಮ್ಮ ಅಧಿಕಾರಿಗಳಿಗೆ ಏನು ಸೂಚನೆ ಕೊಟ್ಟಿದ್ದೇನೆಂದರೆ, ಈಗೇನು 7 ಜನ ಮರಣಕ್ಕೆ ಒಳಗಾಗಿದ್ದಾರೆ, ಅದರ ಹಿನ್ನಲೆಯನ್ನು ಕೊಡಬೇಕೆಂದು ನಾನು ಅವರಿಗೆ ತಿಳಿಸಿದ್ದೆ, ಆ ಹಿನ್ನಲೆಯಲ್ಲಿ ಅವರ ಜೀವನದಲ್ಲಿ ಅವರೇನಾದರೂ ಕಾನೂನನ್ನು ಕೈಗೆತ್ತಿಕೊಳ್ಳುವ ಕೆಲಸವನ್ನು ಮಾಡಿ, ಕಾನೂನಿಗೆ ವಿರುದ್ಧವಾಗಿ ಏನಾದರೂ ಕೆಲಸ ಮಾಡಿರುವ ಹಿನ್ನಲೆ ಏನಾದರೂ ಇದೆಯೇ ಎನ್ನುವುದನ್ನು ನನ್ನ ಗಮನಕ್ಕೆ ತರಬೇಕು ಆ ನಂತರ ಪರಿಹಾರವನ್ನು ಕೊಡಬೇಕೆಂದು ನಾನು ತೀರ್ಮಾನ ಮಾಡಿದ್ದೆ ಪರಿಹಾರವನ್ನು ಕೊಡಬಾರದು ಎನ್ನುವ ದೃಷ್ಟಿಯಿಂದ ನಾನು ಮಾಡಿದಂಥ ಕೆಲಸವಲ್ಲ. ಸಾವನ್ನಪ್ಪಿರತಕ್ಕಂಥ ಕುಟುಂಬದ ಹಿನ್ನಲೆಯ ಬಗ್ಗೆ ಸಂಪೂರ್ಣವಾದ ವಿವರವನ್ನು ಪಡೆದು ಆ ಕುಟುಂಬಕ್ಕೆ ಎಲ್ಲಾ ರೀತಿಯ ಪರಿಹಾರವನ್ನು ನಾವು ಕೊಡಬೇಕು ಎನ್ನುವ ತೀರ್ಮಾನವನ್ನು ನಾವು ಮಾಡಿದ್ದೇವು ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಪರಿಹಾರವನ್ನು ಕೊಡುವುದರಲ್ಲಿ ತಾವುಗಳು ಹೇಳಿ ಪರಿಹಾರವನ್ನು ಕೊಡಲಿಲ್ಲವೆಂದು ದುರಹಂಕಾರದಿಂದ ಮಾಡಿದಂಥ ನಿರ್ಧಾರವಲ್ಲ. ಆ ಕುಟುಂಬಗಳ ಹಿನ್ನಲೆಯನ್ನು ಪಡೆದು ಅವರಿಗೆ ಪರಿಹಾರವನ್ನು ಕೊಡಬೇಕೆಂದು ನಾನು ತೀರ್ಮಾನವನ್ನು ಮಾಡಿದ್ದೇನೆ. ಆ ಪರಿಹಾರವನ್ನು ಕೊಡತಕ್ಕಂಥ ಕೆಲಸವನ್ನು ನಾನು ಮಾಡುತ್ತೇನೆಂದು ಹೇಳಿ, ಇವತ್ತೇನು ಸದನದಲ್ಲಿ ರಾಜ್‌ಕುಮಾರ್‌ರವರ ಸಾವಿನ ಹಿನ್ನಲೆಯಲ್ಲಿ ಆದ ಘಟನೆಯ ಬಗ್ಗೆ ತಾವು ಗಮನವನ್ನು ಸೆಳೆದಿದ್ದೀರಿ,

ತನಿಖೆಯ ಅವಶ್ಯಕತೆಯಿಲ್ಲವೆಂದು, ನನ್ನ ಅಭಿಪ್ರಾಯವನ್ನು ತಿಳಿಸಲಿಕ್ಕೆ ಬಯಸುತ್ತೇನೆ.

xx ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹತ್ತಿರ ಇರತಕ್ಕಂಥ ಮಾಹಿತಿ ಆಧಾರದ ಮೇಲೆ ಉತ್ತರವನ್ನು ಕೊಟ್ಟಿದ್ದಾರೆ. ಅವರು ಹೇಳಿಕೆಯನ್ನು ಈ ಸದನದಲ್ಲಿ ನೀಡಿದ ಮೇಲೆ ನಾವು ಅದನ್ನು ನಂಬಬೇಕಾಗುತ್ತದೆ. ಇವರು ಮತ್ತು ರಾಜ್‌ಕುಮಾರ್‌ರವರ ಕುಟುಂಬದವರ ಮಧ್ಯೆ ನಡೆದಂಥ ಮಾತುಕತೆ ಬಗ್ಗೆ ನಾವೇನು ಕ್ರಾಸ್ ವೆರಿಫಿಕೇಷನ್ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಾವು ಏನು ಹೇಳುತ್ತಿರೋ ಅದನ್ನು ನಾವು ನಂಬಬೇಕಾಗುತ್ತದೆ. ಏಕೆಂದರೆ, ಇವರು ಪ್ರಯತ್ನ ಮಾಡಿದೆ ಎಂದು ಹೇಳಿದೆ, ಆದರೆ ಅವರು ಬೇಡವೆಂದು ಹೇಳಿದರು. ಮತ್ತೆ ಕಂಠೀರವ ಸ್ಟೇಡಿಯಂಗೆ

(xx ಸನ್ಮಾನ್ಯ ಸದಸ್ಯರಿಂದ ಪರಿಷ್ಕರಣಗೊಂಡಿದೆ)

ತೆಗೆದುಕೊಂಡು ಹೋಗಬೇಕೆಂದು ಇವರು ಹೇಳಿದರು. ಆದರೆ ಅವರು ಪೂರ್ಣಪ್ರಜ್ಞ ಸ್ಕೂಲ್ ನಲ್ಲಿಯೇ ಇಡಬೇಕೆಂದು ಹೇಳಿದರು. ಮತ್ತೆ ಇದರ ಮಧ್ಯೆ ಕೆಲವು ಜನ ಅದನ್ನು ತೆಗೆದುಕೊಂಡು ಪ್ಯಾಲೇಸ್ ಗ್ರೌಂಡ್‌ನಲ್ಲಿಬೇಕೆಂದು ಹೇಳಿದರು. ಈ ರೀತಿಯಾದವೆಲ್ಲ ನಡೆದದ್ದರಿಂದ " ನಾನು ಅಸಹಾಯಕನಾಗಿ ಇರಲಿಲ್ಲ. ಆದರೂ ಕೂಡ ಅವರ ಮಾತಿಗೂ ಸ್ಪಂದಿಸಬೇಕೆಂದು ಈ ಮಾತನ್ನು ಕೇಳಬೇಕಾಯಿತು" ಎಂಬ ಮಾತನ್ನು ಅವರು ಹೇಳಿದರು. ನಾನು ಈ ಸಂದರ್ಭದಲ್ಲಿ ಕೇಳತಕ್ಕಂಥದು ಏನೆಂದರೆ, ಸರ್ಕಾರ ಎಂದ ಮೇಲೆ ನಿಮಗೆ ಒಂದು ಜವಾಬ್ದಾರಿ ಇರುತ್ತದೆ. ಕುಟುಂಬದವರು ಹೇಳಬಹುದು. ಆದರೆ ಅವರಿಗೆ ನಾವು ಎಷ್ಟು ಮರ್ಯಾದೆ ಕೊಡಬೇಕೋ ಮತ್ತು ಅವರ ಮಾತು ಕೇಳಬೇಕೋ ಅದನ್ನು ಕೇಳುತ್ತೇವೆ. ಆದರೆ, ಕಾನೂನಿನ ಸುವ್ಯವಸ್ಥೆ ದೃಷ್ಟಿಯಿಂದ ಅಂದರೆ ಲಾ ಅಂಡ್ ಆರ್ಡರ್ ಮೇಂಟೇನ್ ಮಾಡತಕ್ಕಂಥ ದೃಷ್ಟಿಯಿಂದ ಜನರ ಆಸ್ತಿ–ಪಾಸ್ತಿಯನ್ನು ರಕ್ಷಣೆ ಮಾಡತಕ್ಕಂಥ ದೃಷ್ಟಿಯಿಂದ ಮತ್ತೆ ಈ ನಗರದಲ್ಲಿರತಕ್ಕಂಥ ನಾಗರೀಕರ ಜೀವನವನ್ನು ಸುರಕ್ಷಿತವಾಗಿ ಇಡತಕ್ಕಂಥ ದೃಷ್ಟಿಯಿಂದ ನಾವು ಎಲ್ಲವನ್ನು ನೋಡಬೇಕಾಗುತ್ತದೆ. ಕೇವಲ ಒಬ್ಬರು ಹೇಳಿದರೆಂದು ನಾವು ಸ್ಪಂದಿಸುತ್ತೇವೆಂದು ಹೇಳಿ ತಾವು ಜಾರಿಕೊಂಡರೆ ಇದರಿಂದ ಪ್ರಯೋಜನ ಆಗುವುದಿಲ್ಲ. ಏಕೆಂದರೆ ಇಂಥ ಘಟನೆಗಳು ಅನೇಕ ಬರುತ್ತವೆ. ಆದ್ದರಿಂದ ಎಲ್ಲ ಕಡೆ ಎಮೋಷನ್‌ಲ್ ಆಗಿ ಹೇಳಿದರೆ ಹೇಗೆ? ಡಾ: ರಾಜ್‌ಕುಮಾರ್‌ರವರು ತೀರಿಕೊಂಡಮೇಲೆ ಅವರ ಕಡೆಯವರು ಈ

ರೀತಿಯಾಗಿ ಹೇಳಿದ್ದಾರೆ, ಆದ್ದರಿಂದ ನಾವು ಈ ರೀತಿಯಾಗಿ ಬಿಟ್ಟೆವು ಮತ್ತೆ ಫೈರಿಂಗ್ ಆಯಿತು ಇದರಿಂದ ಇಷ್ಟು ಜನರು ಸತ್ತರು, ಅದಕ್ಕಾಗಿ ನಾನು ಹೋಗುವುದಕ್ಕೆ ಆಗಲಿಲ್ಲ. ನಿಮಗೆ ರಕ್ಷಣೆ ಮಾಡುವುದಕ್ಕೆ ನಮಗೆ ತೊಂದರೆಯಾಗುತ್ತೆಂದು ಪೋಲಿಸರು ಹೇಳಿದರು. ಅಲ್ಲಿ ಜನರನ್ನು ನೋಡೋಣ ಅಥವಾ ನಿಮ್ಮನ್ನು ನೋಡೋಣ ಎನ್ನತಕ್ಕಂಥ ಮಾತನ್ನು ಹೇಳಿದರೆ ಹೇಗೆ? ನಾಳೆ ದಿವಸ ನಾವು ಹೇಗೆ ಪ್ರೋಟಕಾಲ್ ಮೇಂಟೇನ್ ಮಾಡಿಕೊಂಡು ಹೋಗುತ್ತೀರಿ? ಇಂಥ ಸಂದರ್ಭದಲ್ಲಿ ಅನೇಕ ವಿಐಪಿಗಳು ಇವತ್ತು ಅಥವಾ ನಾಳೆ ಹೋಗಬಹುದು. ಅಥವಾ ಈ ಹಿಂದೆ ಅನೇಕ ವಿಐಪಿಗಳ ಮರಣದ ಸಂದರ್ಭದಲ್ಲಿ ಯಾವುದೇ ಮುಖ್ಯಮಂತ್ರಿಗಳು ಪಾಲ್ಗೊಂಡಿಲ್ಲವೆ ಅಥವಾ ಅನೇಕ ವಿಐಪಿಗಳು ಆ ಒಂದು ಸಂದರ್ಭದಲ್ಲಿ ಪಾಲ್ಗೊಳ್ಳಲಿಲ್ಲವೇ? ಈಗ ಮಾನ್ಯ ಮುಖ್ಯಮಂತ್ರಿಗಳು ಅನೇಕ ಉದಾಹರಣೆಗಳನ್ನು ಕೊಟ್ಟು ಹೊರ ರಾಜ್ಯಗಳಲ್ಲಿ ಆಗಿರತಕ್ಕಂಥ ಘಟನೆಗಳಿಗೆ ಹೋಲಿಸಿಕೊಂಡರು ಮತ್ತು ಬಾಬ್ರಿಮಸೀದಿ ಮತ್ತು ಇಂದಿರಾಗಾಂಧಿ ನಿಧನ ಹೊಂದಿದ್ದಂಥ ಸಂದರ್ಭದಲ್ಲಿ ಆದಂಥ ಘಟನೆಯ ಬಗ್ಗೆ ಕೂಡ ಹೇಳಿಕೊಂಡರು. ಆದರೆ ನಾನು ಕೇಳತಕ್ಕಂಥದು ಏನೆಂದರೆ, ನಾವು ನೀವು ಕೂಡಿ ಇವತ್ತಿನ ದಿವಸ ಆ ರಾಜ್ಯದಲ್ಲಿ ಯಾವ ರೀತಿಯಾಗಿ ಕಾನೂನಿನ ಸುವ್ಯವಸ್ಥೆಯನ್ನು ಇಟ್ಟಿದ್ದೇವೆ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದ್ದೇವೆಯೇ ಹೊರತು, ಅಲ್ಲಿ ಇಲ್ಲಿ ಇದೇ ರೀತಿಯಾಗಿ ಆಗಿವೆ ಎನ್ನತಕ್ಕಂಥ ಹಾರಿಕೆ ಉತ್ತರ ಕೊಡುವುದಾದರೆ " ಇದರ ಅವಶ್ಯಕತೆಯೇ ಇರುವುದಿಲ್ಲ. ಮತ್ತೆ ಎರಡನೆಯ ವಿಚಾರ ಏನೆಂದರೆ ಇದರ ಬಗ್ಗೆ ತನಿಖೆ ಅವಶ್ಯಕತೆ ಇಲ್ಲ. ಈಗಾಗಲೇ 780 ಅಥವಾ 900 ಜನರನ್ನು ಅರೆಸ್ಟ್ ಮಾಡಿ ಇದರ ಬಗ್ಗೆ ಕಂಡು ಹಿಡಿದಿದ್ದೇವೆ" ಎನ್ನತಕ್ಕಂಥ ಮಾತನ್ನು ಹೇಳೀದ್ದೀರಿ. ಆದ್ದರಿಂದ ನಾನು ಹೇಳುವುದೇನೆಂದರೆ ಇದನ್ನು ನೀವು ಕಂಡು ಹಿಡಿದಿದ್ದರೆ ಮತ್ತು ಆ ಜನ ಯಾರು ಎನ್ನತಕ್ಕಂಥದು ನಿಮಗೆ ಗೊತ್ತಿದ್ದರೆ, ನೀವು ಹೇಳದೆ ಇರಬಹುದು ಆದರೆ ಇಲ್ಲಿ ಷಡ್ಯಂತರ ಇದೆ, ಇಲ್ಲಿ ಕುತಂತ್ರ ಇದೆ ಮತ್ತು ಇದರಲ್ಲಿ Conspirancy ಇದನ್ನು ಯಾವುದೋ ರಾಜಕೀಯ ದುರುದ್ದೇಶದಿಂದ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ನಿಮ್ಮ ಸರ್ಕಾರ ಪದೇ ಪದೇ ಹೇಳಿದರೆ ಹೊರಗಿರುವ ಜನರಿಗೆ ಏನು ತಿಳಿಯುತ್ತದೆ? ಹೊರಗಡೆ ಇರತಕ್ಕಂಥ ಜನರಿಗೆ ಏನು ತಿಳಿಯುತ್ತದೆಂದರೆ, "ಇದರಲ್ಲಿ ಏನಾದರು ಇರಬೇಕು, ಇದರಲ್ಲಿ ಯಾರದೋ ಹಿನ್ನಲೆ ಇರಬೇಕು ಮತ್ತೆ ಅವರೆ ಇದನ್ನು ಮಾಡಿಸಿರಬೇಕು" ಎನ್ನುವ ಸಂದೇಹ ನೀವು ವಿವರ ನೀಡದೆ ಕೇವಲ

ತೇಲಿಸಿ ಮಾತನಾಡಿದ್ದರಿಂದ ಇವತ್ತು ಈ ಪ್ರಶ್ನೆಗಳೆಲ್ಲಾ ಉದ್ಭವಿಸಿವೆ. ಇದಕ್ಕೆ ಸಂಬಂಧಪಟ್ಟಂತೆ ಸಂಪೂರ್ಣವಾದ ರಿಪೋರ್ಟ್ ಬಂದಿದೆ. ಇದರಲ್ಲಿ ಯಾರದೋ ಕೈವಾಡ ಇಲ್ಲ. ಕೇವಲ ಕೆಲವರು ಕಾನೂನಿನ ವ್ಯವಸ್ಥೆಯನ್ನು ಮುರಿಯತಕ್ಕಂಥ ಜನರು ಇದರಲ್ಲಿ ಇನ್ವಾಲ್ ಆಗಿದ್ದರಿಂದ ಈ ರೀತಿಯಾದ ಸ್ಥಿತಿಯಾಗಿದೆ. ಆದ್ದರಿಂದ ಅವರ ಮೇಲೆ ಸೂಕ್ತವಾದ ಕ್ರಮವನ್ನು ನಾವು ಜರುಗಿಸಿದ್ದೇವೆಂದು ಹೇಳಿದ್ದರೆ ವಿಷಯ ಅಲ್ಲಿಗೆ ಮುಕ್ತಾಯ ಆಗುತ್ತಿತ್ತು. ಆದರೆ, ಪದೇ ಪದೇ ಅಂದರೆ ಸಂತಾಪಸೂಚನೆಯಲ್ಲಿ ಮತ್ತು ಹೊರಗಡೆ ಕೂಡ ಅದೇ ಮಾತು ಮತ್ತು ಬೇರೆಯವರು ಹೇಳುವುದು ಅದೇ ಮಾತಾಗಿದೆ. ಇದರಿಂದ ಏನಾಗಿದೆ ಎಂದರೆ ಇಡೀ ಕರ್ನಾಟಕ ರಾಜ್ಯದಲ್ಲಿ ಜನರು ಸಂಶಯದಿಂದ ಒಬ್ಬರಿಗೊಬ್ಬರು ನೋಡತಕ್ಕಂಥ ರೀತಿಯಲ್ಲಿ ಸ್ಥಿತಿ ನಿರ್ಮಾಣವಾಗಿದೆ." ಇದಕ್ಕೆ ತಾವೊಂದು ಹೇಳಿಕೆ ಕೊಟ್ಟಿದ್ದೀರಿ. ಮತ್ತೆ ಮಾನ್ಯ ಉಪ ಮುಖ್ಯಮಂತ್ರಿಯವರು ಕೂಡ ಬೇರೆ ರೀತಿಯಲ್ಲೊಂದು ಹೇಳಿಕೆ ಕೊಟ್ಟಿದ್ದಾರೆ. ಅದೇನೆಂದರೆ, ಒಂದೊಂದು ಗೊಂದಲದ ವಾತಾವರಣ ಸೃಷ್ಟಿಯಾಗಿದೆ ಎಂದು ಹೇಳಿದ್ದಾರೆ. ಮೂರನೆಯದಾಗಿ compensation ಬಗ್ಗೆ ನಾನು ಹೇಳುವುದೇನೆಂದರೆ, ಇವತ್ತಿಗೆ ನಡೆದು 50 ದಿವಸ ಆಗಿದೆ. ಇದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ 50 ದಿವಸ ಬೇಕೆ? ಈ ಘಟನೆಯಲ್ಲಿ ಮೃತಪಟ್ಟವರು ಇವತ್ತಿನ ದಿವಸ ಪ್ರಾಪರ್ ನಲ್ಲಿದ್ದಾರೆ. ತುಮಕೂರಿನಿಂದ ಬಂದಂಥ ಒಬ್ಬ ವಿದ್ಯಾರ್ಥಿ ಅಲ್ಲಿಗೆ ಬಂದು ಗಿಡದ ಮೇಲೆ ಕುಳಿತ್ತಿದ್ದಂಥ ಸಂದರ್ಭದಲ್ಲಿ ಫೈರಿಂಗ್ ಆದ ಮೇಲೆ ಬಾವುಲಿ ಬಿದ್ದ ಹಾಗೆ ಕೆಳಕ್ಕೆ ಬಿದ್ದಿದ್ದಾನೆಂದು ನಮ್ಮ ಮಾನ್ಯ ನರೇಂದ್ರಬಾಬುರವರು ಈಗ ತಾನೇ ಹೇಳಿದರು. ಅಂದರೆ, ಈ ಜನ ಯಾರು? ಇವರ ಆ್ಯಂಟಿಸಿಡೆನ್ಸ್ ಏನು, ಇವರ ಕ್ಯಾರೆಕ್ಟರ್ ಏನು ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ 50–60 ದಿವಸ ಬೇಕೆಂದರೆ ನಾವು ಇದಕ್ಕೆ ಏನು ಹೇಳಬೇಕು? ಸಂಬಂಧಪಟ್ಟಂಥ ಕುಟುಂಬದವರು ಅಲ್ಲಿಯ ತನಕ ತಡೆಸುಕೊಳ್ಳುತ್ತಾರೆಯೇ? ಅವರಿಗೆ ನೀವು ಏನಾದರು ಸಾಂತ್ವನ ಹೇಳಬೇಕು ಮತ್ತು ಏನಾದರೂ ಪರಿಹಾರವನ್ನು ಕೊಡಬೇಕಾಗಿತ್ತಲ್ಲವೆ? ಎಂಟು ದಿವಸಗಳಲ್ಲಿ ಕೊಡದೆ ಇದ್ದರೆ ನಾವು ಚಳುವಳಿ ಮಾಡುತ್ತೇವೆಂದು ಹೇಳಿದರು. ಅವರು ಹೇಳಿದ ತಕ್ಷಣ ಕೊಡುವುದಕ್ಕೆ ಬರುತ್ತದೆಯೇ ನೋಡೋಣ ಎಂದು ತಾವು ಹೇಳಿದ್ದು ನಿಜ. ನೀವು ಏನ್ನೂ ಇದರಿಂದ ಹಿಂಜರಿಯುವುದಿಲ್ಲ. ಏಕೆಂದರೆ ನೀವು ಧೈರ್ಯವಂತರು. ನೀವು ಈ ರೀತಿಯಾಗಿ ಜನರ ಸಮಸ್ಯೆಗೆ ಸ್ಪಂದಿಸುವುದಾದರೆ, ಆದರೆ ಮತ್ತು ವಿರೋಧಪಕ್ಷದವರು ವಿನಂತಿಸಿಕೊಂಡಾಗ ಅಥವಾ ಇಂಥ ವಿಷಯಗಳನ್ನು ಪ್ರಸ್ತಾಪ ಮಾಡಿದಾಗ ಪ್ರತಿಯೊಂದಕ್ಕೂ ಕೂಡ

ಸವಾಲೊಡ್ಡಿ, ಅದಕ್ಕೆ ಚಾಲೇಂಜ್ ರೂಪದಲ್ಲಿಯೇ ನಾನು ಹೇಳುತ್ತೇನೆಂದರೆ, ಅದಕ್ಕೆ ಏನ್ನೂ ಉತ್ತರ ಇಲ್ಲ. ಅದೇ ರೀತಿಯಾಗಿ ನಾವು ಕೂಡ ಚಾಲೇಂಜ್ ಮಾಡಿಕೊಂಡು ಹೋಗಬೇಕು ಮತ್ತೆ ಒಬ್ಬರಿಗೊಬ್ಬರು ಜಗಳ ಮಾಡಿಕೊಂಡು ಹೋಗಬೇಕಾಗುತ್ತದೆ. ನಾನು ಹೇಳುವುದೇನೆಂದರೆ ದಯವಿಟ್ಟು ಎಲ್ಲಿ ಎಡವಿದ್ದೀರಿ ಮತ್ತೆ ಎಲ್ಲಿ ಡಿಲೇ ಆಗಿದೆ ಅಥವಾ ನಿಮ್ಮ ಅಧಿಕಾರಿಗಳು ಹೋಗಿ ವೆರಿಫಿಕೇಶನ್ ಮಾಡಿಲ್ಲ, ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಿ. ಏಕೆ ನಿಮ್ಮ ಇನ್‌ಸ್ಟ್ರಕ್ಷನ್ ಇದ್ದರೂ ಕೂಡ 60 ದಿವಸದಿಂದ ಅಥವಾ 55 ದಿವಸದಿಂದ ಇನ್ನೂ ಅವರೇಕೆ ವೆರಿಫಿಕೇಶನ್ ಮಾಡಿಲ್ಲ? ಪ್ರತಿಸಲ ವಿರೋಧಪಕ್ಷದವರು ಅಥವಾ ಶಾಸಕರು ಅಥವಾ ಬೇರೆ ನಾಗರೀಕರು ಈ ಪ್ರಶ್ನೆಗಳನ್ನು ಕೇಳಿ ಮುಜುಗರ ಮಾಡುತ್ತಾರೆ ಆದ್ದರಿಂದ, ಇದನ್ನು ನೀವು ಏಕೆ ಮಾಡಿಲ್ಲ ಎಂದು ನೀವೇಕೆ ಕೇಳಲಿಲ್ಲ? ಈ ಎಲ್ಲಾ ಪ್ರಶ್ನೆಗಳು ನಿಮ್ಮ ಮುಂದೆ ಇವೆ. ಇದರ ಬಗ್ಗೆ ಸಿಬಿಐ ತನಿಖೆ ಮ್ಯಾಡಿಸಿ ಎಂದು ನಾವು ಕೇಳಿದೆವು. ಇಲ್ಲವೆಂದು ಹೇಳಿದ್ದೀರಿ. ಹೈಕೋರ್ಟ್ ಜಡ್ಜ್ ಮೂಲಕ ತನಿಖೆ ಮಾಡಿಸಿ ಎಂದು ಕೇಳಿದೆವು. ಏಕೆಂದರೆ ಇದಕ್ಕೆ ಸಂಬಂಧಪಟ್ಟಂಥ ಫ್ಯಾಕ್ಟ್ ಹೊರಗಡೆ ಬರಲಿ ಎಂಬ ಉದ್ದೇಶದಿಂದ ನಾವು ಕೇಳಿದ್ದೇವಷ್ಟೇ. ಸಿಬಿಐ ತನಿಖೆ ಮಾಡಿ ಯಾರಿಗಾದರು ತೊಂದರೆ ಕೊಡಬೇಕು ಅಥವಾ ಇವರಿಗೆ ಕೆಟ್ಟ ಹೆಸರು ತರಬೇಕು ಎನ್ನತಕ್ಕಂಥದು ಇಲ್ಲ. ಏಕೆಂದರೆ ನೀವು ಸೃಷ್ಟಿ ಮಾಡಿದಂಥ ವಾತಾವರಣವನ್ನು ತಿಳಿ ಮಾಡುವುದಕ್ಕೋಸ್ಕರ ನಾವು ತನಿಖೆ ಮಾಡಬೇಕೆಂದು ಕೇಳಿದ್ದೇವೆ. ಆದ್ದರಿಂದ ತನಿಖೆ ಮಾಡುವುದಕ್ಕೆ ತಾವು ಒಪ್ಪಿಕೊಳ್ಳಿ. ಹೈಕೋರ್ಟ್ ಜಡ್ಜ್ ಅಥವಾ ಸುಪ್ರೀಂ ಕೋರ್ಟ್ ನಿವೃತ್ತ ಜಡ್ಜ್ ಮೂಲಕ ತನಿಖೆ ಮಾಡಿಸಿ ಇದಕ್ಕೆ ಸಂಬಂಧಪಟ್ಟಂಥ ಒಂದು ಫ್ಯಾಕ್ಟ್ ಹೊರಗಡೆ ಬರಲಿ, ಇದರಲ್ಲಿ ಯಾರ್ಯಾರು ಇದ್ದರು ಎನ್ನತಕ್ಕಂಥದು ಗೊತ್ತಾಗಲಿ ಅಥವಾ 680 ಜನ ಅದರಲ್ಲಿದ್ದಾರೆ ಎನ್ನುವುದಾದರೆ ಅದೇ ವಿಷಯ ಹೊರಗಡೆ ಬರಲಿ. ಮತ್ತೆ ಪರಿಹಾರ ಕೊಡುವುದಕ್ಕೆ ಡಿಲೇ ಏಕೆ ಆಯಿತ್ತೆಂಬುದು ಕೂಡ ಬರಲಿ. ಮತ್ತೆ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಕುಟುಂಬದ ಸದಸ್ಯರು ಕೂಡ ಅಲ್ಲಿಗೆ ಹೋಗಿ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವುದಕ್ಕೊ ಕೂಡ ಆಗಲಿಲ್ಲವೆಂದರೆ ಇದಕ್ಕೆ ಏನು ಕಾರಣ ಎನ್ನುವುದು ಗೊತ್ತಾಗಲಿ. ಎಲ್ಲಿ lacuna ಆಗಿದೆ ಏಕೆಂದರೆ ಪೋಲಿಸ್ ರಕ್ಷಣೆ ಕೊಡತಕ್ಕಂಥದರಲ್ಲಿ ವ್ಯತ್ಯಾಸ ಆಗಿದೆಯೋ ಅಥವಾ ಪೋಲಿಸ್ ಸ್ಟ್ರೆಂಥ್ ಕಡಿಮೆ ಇತ್ತೋ ಅಥವಾ ನಿಮಗೆ ಇರತಕ್ಕಂಥ ಇನ್‌ಫಾರ್ಮೇಷನ್ ಸರಿಯಾಗಿ ಇರಲಿಲ್ಲವೋ? ಅಥವಾ ನಿಮ್ಮಲ್ಲಿರತಕ್ಕಂಥ ಇಂಟಲಿಜೆನ್ಸಿರವರು ಸರಿಯಾಗಿ

ಮಾಹಿತಿ ಕೊಡಲಿಲ್ಲವೋ? ಅಥವಾ ಭಯದ ವಾತಾವರಣ ನಿಮ್ಮಲ್ಲಿಯೇ ಮೂಡಿಸಿದ ಮೇಲೆ ಬೇರೆ ಜನ ಅಲ್ಲಿಗೆ ಹೇಗೆ ಹೋಗುತ್ತಾರೆ? ಮತ್ತೆ ಕುಟುಂಬದ ಜನ ಹೋಗುವುದಕ್ಕೆ ಸಾಧ್ಯವೇ? ಒಬ್ಬ ಮುಖ್ಯಮಂತ್ರಿಯವರಿಗೆ ಹೆದರಿಸಿ ಈ ರೀತಿಯಾಗಿ ಹೇಳಿದರೆ ಅಥವಾ ಉಪಮುಖ್ಯ ಮಂತ್ರಿಯವರಿಗೆ ಈ ರೀತಿಯಾಗಿ ಹೇಳಿದರೆ ಅಥವಾ ಬೇರೆ ಸಚಿವರಿಗೆ ಅಥವಾ ನಮ್ಮಂಥವರಿಗೆ ಈ ರೀತಿಯಾದ ಮಾತುಗಳನ್ನು ಹೇಳಿದರೆ ಮತ್ತು ಸಾಮಾನ್ಯರು ಮತ್ತು ಹೊರಗಿನಿಂದ ಬಂದಂಥ ವಿಐಪಿಗಳು ಯಾವ ರೀತಿಯಾಗಿ ಅಲ್ಲಿಗೆ ಹೋಗುತ್ತಾರೆ? ಇದು ಸಾಧ್ಯವೇ ಇಲ್ಲ. ಆದ್ದರಿಂದ ನೀವು ಅವರು ಹೇಳಿದ್ದಕ್ಕೆಲ್ಲಾ ಅಂದರೆ, ನಮ್ಮ ಪೋಲಿಸ್‌ನವರು ಹೇಳಿದನ್ನು ತಾವು ನಡೆದು ಕೊಳ್ಳಬಾರದೆಂದು ನಾನು ಹೇಳುವುದಿಲ್ಲ. ಏಕೆಂದರೆ ಎಲ್ಲಾ ಸರ್ಕಾರ ಇದ್ದಾಗ ಅದೇ ಪೋಲಿಸ್ ನವರು ಇರುತ್ತಾರೆ. ಮತ್ತು ಅದೇ ಅಧಿಕಾರಿಗಳು ಇರುತ್ತಾರೆ. ಆದರೆ ಅವರಿಂದ ಯಾವ ರೀತಿಯಾಗಿ ಕೆಲಸ ತೆಗೆದುಕೊಳ್ಳಬೇಕು ಎನ್ನತಕ್ಕಂಥ ಚಾಣಕ್ಷತನ ಕೂಡ ಇರುತ್ತದೆ. ಅನೇಕ ಚಳುವಳಿ ಕೂಡ ಆಗಿವೆ. ನಾವೇನಾದರೂ ಹೇಳಿದರು ಅತಿಶೋಯಕ್ತಿ ಆಗುತ್ತದೆಂದು ಹೇಳುತ್ತೀರಿ. ರಾಜ್‌ಕುಮಾರ್‌ರವರು ವೀರಪ್ಪನ್ ಸುಮಾರು ಮೂರ್‍ನಾಲ್ಕು ತಿಂಗಳು, ಒಂದು ದಿವಸ ಅಥವಾ ಎರಡು ದಿವಸ ಅಲ್ಲ. ವೀರಪ್ಪನ್ ವಶದಲ್ಲಿದ್ದರು. 100 ದಿವಸಗಳಿಗಿಂಥ ಮೇಲ್ಪಟ್ಟಿದ್ದರೂ ಕೂಡ ಒಬ್ಬರಿಗೂ ದಕ್ಕೆ ಆಗದ ರೀತಿಯಲ್ಲಿ, ಒಂದು ಕಲ್ಲು ಹೊಡೆಯದ ರೀತಿಯಲ್ಲಿ ಮತ್ತು ಫೈರಿಂಗ್ ಆಗದ ರೀತಿಯಲ್ಲಿ ಯಾರಿಗೂ ಎಮೋಷನಲ್ ಆಗದ ರೀತಿಯಲ್ಲಿ ಇದೇ ಪೋಲಿಸ್‌ನವರು ಮೇಂಟೇನ್ ಮಾಡಿದ್ದರು. ಆದರೆ ಯಾವಾಗ ಇದನ್ನು ಮಾಡಬಹುದೆಂದರೆ ಜೀವಂತವಾಗಿ ದ್ದವರು ಕೂಗು ಕೊಡುವಾಗ ಮಾಡಬಹುದು. ಆದರೆ ಸಂತಾಪ ಸೂಚನೆ ಕಾಲದಲ್ಲಿ ಈ ರೀತಿಯಾಗುತ್ತದೆಂದರೆ ತಾವೇ ಯೋಚನೆ ಮಾಡಿ. ಇದು ಸರಿ ಎಂದು ನಿಮ್ಮ ಮನಸ್ಸಿಗೆ ಅನಿಸಿದರೆ ಸರಿ ಅಥವಾ ಇದರಲ್ಲಿ ಎಲ್ಲೋ ಒಂದು ಕಡೆ ವಿಫಲವಾಗಿದೆ ಎಂದರೆ ನೀವು ಇದರ ಬಗ್ಗೆ ತನಿಖೆ ಮಾಡಬೇಕು ಸಂಬಂಧಪಟ್ಟವರಿಗೆ ಶಿಕ್ಷೆ ಕೊಡಬೇಕು. ಮತ್ತೆ ಪರಿಹಾರದ ಹಣವನ್ನು ಸಹ ತಕ್ಷಣ ಕೊಡಬೇಕು. ಇದನ್ನು ಅಂದರೆ ಪರಿಹಾರ ಕೊಡುವುದನ್ನು 8 ಅಥವಾ 10 ದಿವಸದಲ್ಲಿ ಕೊಡುತ್ತೀರಾ ಎನ್ನತಕ್ಕಂಥದ್ದನ್ನು ತಾವು ದಯವಿಟ್ಟು ಹೇಳಬೇಕು. ಮತ್ತೆ ತನಿಖೆ ಮಾಡಿಸತಕ್ಕಂಥದ್ದು ಕೂಡ ಹೇಳಬೇಕು. ಇದನ್ನು ಹೇಳಿದರೆ ನಮಗೂ ಸಮಾಧಾನ ಆಗುತ್ತದೆ ಮತ್ತೆ ನಾವು ಇಲ್ಲಿ ಪ್ರಸ್ತಾಪ ಮಾಡಿ ಇದರ ಬಗ್ಗೆ ಚರ್ಚೆ ಮಾಡಿ ಎಲ್ಲರೂ ಕೇಳಿರುವುದಕ್ಕೆ ಸಾರ್ಥಕವಾಗುತ್ತದೆ; ಇಲ್ಲದಿದ್ದರೆ

ನಮ್ಮ ಟೈಂ ಪ್ರಕಾರ ಕೊಡುತ್ತೇವೆಂದರೆ ನಾವು ಅನಿವಾರ್ಯವಾಗಿ ಆನ್ ವಿಲಿಂಗ್‌ಲಿ ಸದನದ ಬಾವಿಗೆ ಬಂಧ ಧರಣಿ ಮಾಡಬೇಕಾಗುತ್ತದೆ. ಅದಕ್ಕಾಗಿ ತಾವು ದಯವಿಟ್ಟು ಅ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ನಿಮ್ಮನ್ನು ಮುಜುಗರಕ್ಕೆ ಸಿಕ್ಕಿಸಬೇಕೆಂದು ಏನೂ ಇಲ್ಲ. ನಿಮಗೆ ಸಹಾಯ ಮಾಡಬೇಕೆನ್ನುವಂತಹ ದೃಷ್ಟಿಯಿಂದ ನೇರವಾಗಿ ಈ ಬಗ್ಗೆ ಒಂದು ಏನ್‌ಕ್ವಯರಿಯನ್ನು ಆಗಲಿ ಎನ್ನುವಂತಹ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ಮಾನ್ಯ ಉಪಾಧ್ಯಕ್ಷರೆ, ನಾನು ಏನೂ ಹೆಚ್ಚಿಗೆ ಕೇಳುವುದಿಲ್ಲ. 1982ನೇ ಇಸವಿಯಲ್ಲಿ ಶ್ರೀಮಾನ್ ಆರ್. ಗುಂಡುರಾವ್‌ರವರು ಅಲ್ಲಿ ಕುಳಿತಿದ್ದರು. ಆಗ ಇಡೀ ರಾಜ್ಯದಲ್ಲಿ ಈ ಆಹಾರದ ಬೆಲೆ ಒಂದು ಕಡೆ ಹೆಚ್ಚಾಗಿರುವಂತಹದ್ದು, ರೈತರ ಹೋರಾಟ ಒಂದು ಕಡೆ ಆಗಿ, ಸೀರಿಸ್ ಆಫ್ ಫೈರಿಂಗ್ ಆಯಿತು. ಆಗ ನಾವುಗಳು ವಿರೋಧ ಪಕ್ಷದಲ್ಲಿದ್ದೆವು. ಗುಂಡುರಾಯರ ಮೇಲೆ ಗಲಾಟೆ ಮಾಡಿದಾಗ ಇವತ್ತು ನೀವು ಬರೆದುಕೊಟ್ಟಂತೆ ಅಫಿಷಿಯಲ್ ಗ್ಯಾಲರಿಯಲ್ಲಿ ಅವರು ಬರೆದು ಕಳೂಹಿಸಿದರು. ಯಾವಾಗ ಎಷ್ಟೆಷ್ಟು ಫೈರಿಂಗ್ ಆಯಿತು, ಎಷ್ಟು ಜನ ಸತ್ತರು, ದಿ: ಗುಂಡುರಾಯರು ಲಾಸ್ಟ್‌ಯಿಯರ್ ಒಳ್ಳೆಯ ಇನ್‌ಫರ್ಮೇಶನ್ ಕೊಟ್ಟರು. ಕೊಯಮತ್ತೂರಿನಲ್ಲಿ ರೈತರ ಎಜಿಟೇಶನ್ ಆದಾಗ 18 ಜನರನ್ನು ಗುಂಡಿಟ್ಟು ಕೊಂದರು. ಆಮೇಲೆ ಎಲೆಕ್ಷನ್‌ನಲ್ಲಿ ಎಂ.ಜಿ.ಆರ್. ಅವರಿಗೆ 45 ಜನ ಹೆಚ್ಚಿಗೆ ಸೀಟು ಬಂತು ಬರೆದು ಕಳುಹಿಸಿದರು. 1983ರಲ್ಲಿ ಏನಾಯಿತು ಎಂದು ಹೇಳಿ ಎಲ್ಲರಿಗೂ ಗೊತ್ತಿದೆ. ಅಫಿಷಿಯಲ್ ಗ್ಯಾಲರಿಯಲ್ಲಿ ಏನು ಇರುತ್ತಾರಲ್ಲಾ ಇವರು ವೈದಿಕರು. ನಾಮಕರಣಕ್ಕೂ ಇವರೇ ಅನ್ನ ಇಡುವುದಕ್ಕೆ ಇವರೇ ಮದುವೆಗೂ ಇವರೇ ಮತ್ತೆ ಅಪರಕರ್ಮ ಸಾವು , ಸತ್ತು ಹೋದ ಮೇಲೆ ಶವಸಂಸ್ಕಾರ ಮಾಡುವುದಕ್ಕೆ ಇವರೇ ಬರುವವರು. ಅವರಿಗೆ ಏನೂ ಲಾಸ್ ಇಲ್ಲ. ಈ ಅಫಿಷಿಯಲ್ ಗ್ಯಾಲರಿಯವರು ಇದ್ದಾರಲ್ಲಾ ಅವರಿಗೆ ನೀವು ಏನಾಗುತ್ತೀರಿ.ರಾಜ್ಯ ಏನಾಗುತ್ತದೆ ಎನ್ನುವುದು ಮುಖ್ಯವಲ್ಲ. ಈಗಂತೂ ಇನ್‌ಫರ್‌ಮೇಷನ್ ಬಹಳ ಸುಲಭ. ಕಂಪ್ಯೂಟರ್‌ನಲ್ಲಿ ಎರಡು ನಿಮಿಷದಲ್ಲಿ ಎಲ್ಲವೂ ಕೂಡ ಸಿಗುತ್ತದೆ. ನೀವು ಅವರ ಮೇಲೆ ಡಿಪೆಂಡ್ ಅದರಲ್ಲಾ ಎಂದು ನನಗೆ ದುಃಖ. ಅದಕ್ಕಿಂತ ಹೆಚ್ಚೇನೂ ಇಲ್ಲ. ಉಳಿದ ಎಲ್ಲಾ ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಉಪಮುಖ್ಯಮಂತ್ರಿಗಳು ನಿನ್ನೆ ಹೇಳಿದಂತಹ ಮಾತು, ಇವತ್ತು ನೀವು ಹೇಳಿರುವಂತಹ ಮಾತು ಒಂದಕ್ಕೆ ಒಂದು ತಾಳೆ ಆಗುವುದಿಲ್ಲ. ಅವರು ಪಿತೂರಿ ನಡೆದಿದೆ ಎನ್ನುವಂತಹ ಸ್ಪಷ್ಟವಾದ

ಮಾತುಗಳನ್ನು ಅವರು ಹೇಳಿದರು. ನೀವು ಅದನ್ನು ತೇಲಿಸಿ ಮಾತನಾಡಿದ್ದೀರಿ. ಒಂದು ವಿಷಯದಲ್ಲಿ ನಾನು ನಿಮ್ಮನ್ನು ಅಭಿನಂದಿಸಬೇಕು. ಎಲ್ಲವನ್ನೂ ನೀವು ನಿಮ್ಮ ಮೈಮೇಲೆ ಹಾಕಿಕೊಂಡಿದ್ದೀರಿ. ಆಡಳಿತದ ವೈಫಲ್ಯ ಇಲ್ಲ, ಇಂಟಲಿಜೆನ್ಸಿ ವೈಫಲ್ಯ ಇಲ್ಲ, ಪೋಲಿಸ್ ವೈಫಲ್ಯ ಇಲ್ಲ, ಎಲ್ಲವನ್ನೂ ಪಾಪ ನಿಮ್ಮ ಮೈಮೇಲೆ ಹಾಕಿಕೊಂಡಿದ್ದೀರಿ. ಈ ಧೈರ್ಯ ನಿಮ್ಮಲ್ಲಿ ಉಳಿಯಲಿ, ಸತ್ಕಾರ್ಯಕ್ಕೆ ಪ್ರಯೋಜನವಾಗಲಿ. ಜನರಿಗೆ ಹೆಚ್ಚು ಪ್ರಯೋಜವಾಗುತ್ತದೆ. ಇಲ್ಲದೆ ಹೋದರೆ ಅವಿವೇಕಿಗಳಿಗೆ ಇದರಿಂದ ಲಾಭವಾಗುತ್ತದೆಯೇ ಹೊರತು ರಾಜ್ಯಕ್ಕೆ ಏನೂ ಕೂಡ ಲಾಭವಾಗುವುದಿಲ್ಲ. ಈ ನನ್ನ ನೋವಿನ ಮಾತುಗಳನ್ನು ನಿಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ತಾವು ಆಡಿರುವಂತಹ ಮಾತು, ಮಾನ್ಯ ಉಪಮುಖ್ಯಮಂತ್ರಿಗಳು ಆಡಿರುವಂತಹ ಒಂದಕ್ಕೊಂದು ಹೋಲಿಕೆ ಆಗಲಿಲ್ಲ. ತಮಗೆ ಏನೋ ಗೌಪ್ಯವಾಗಿ ಬಹಳ ವಿಚಾರಗಳು ಗೊತ್ತಿದೆ ಎಂದು ನಾವೆಲ್ಲರೂ ತಿಳಿದುಕೊಂಡಿದ್ದೇವು. ಅವರದ್ದೂ ಕೂಡ ಗೌಪ್ಯ ಇಲ್ಲ, ನಿನ್ನೆ ಎಲ್ಲ ಷಡ್ಯಂತರ ಎಂದು ಹೇಳಿದರು. ನಮಗೆ ಏನೋ ಅನಂತಕುಮಾರದ್ದು ಮತ್ತೊಂದೋ ಏನೋ ಕೂಡ ಆಗುತ್ತಿದೆ ಎಂದು ನಾವುಗಳು ಬಹಳ ಕಾತುರದಿಂದ ಕಾಯುತ್ತಿದ್ದೆವು. ಎಲ್ಲಿಯೂ ಕೂಡ ಹೋಗುವುದಕ್ಕೆ ಆಗಲಿಲ್ಲವಲ್ಲಾ ಅಷ್ಟೇ. ಈಗಲೂ ಕೂಡ ಒಂದು ಅವಕಾಶವಿದೆ. ನೀವು ಯಾರೂ ಬೇಡ, ನಮ್ಮ ನಾಯಕರು ಹೇಳಿದ ಹಾಗೆ ತನಿಖೆಗೆ ಒಂದು ಆರ್ಡರನ್ನು ಮಾಡಿಬಿಡಿ. ಏಕಾಯಿತು. ನೀವು ಎಲ್ಲಿ ಫೇಲಾದ್ರಿ ಎಲ್ಲ ಹೊರಗೆ ಬರಲಿ.

ಶ್ರೀ ಎಂ.ಪಿ. ವೆಂಕಟೇಶ್ : ಮಾಡಬಾರದೆಲ್ಲಾ ಮಾಡುತ್ತಿದ್ದೀರಲ್ಲಾ.

ಶ್ರೀ ಡಿ.ಕೆ. ಶಿವಕುಮಾರ್ : ವೆಂಕಟೇಶ್‌ರವರೇ, ಸುಮ್ಮನಿರ್ರಿ ವಿರೋಧಪಕ್ಷದವರು ನಿಮ್ಮ ಬಗ್ಗೆ ಇಷ್ಟು ಲೀನಿಯೆನ್ಸ್ ಆಗಿದ್ದಾರಲ್ಲಾ ಅದಕ್ಕೆ ನೀವುಗಳು ಸಂತೋಷವನ್ನು ಪಡಿ. ವಿರೋಧಪಕ್ಷದಲ್ಲಿ ಇದ್ದುಕೊಂಡು, ಇದೇ ಯಡಿಯೂರಪ್ಪನವರು ಇಲ್ಲಿ ಏನೇನು ಆಟವಾಡು ತ್ತಿದ್ದರು, ಮೇಲಿನಿಂದ ಕೆಳಗಡೆ ಎಷ್ಟು ಕುಣಿಯುತ್ತಿದ್ದರು ಅದನ್ನು ನಾವು ನೋಡಿದ್ದೇವೆ. ಮಾನ್ಯ ಈಶ್ವರಪ್ಪನವರು, ಸ್ವಾಮಿ, ಇಲ್ಲಿ ಏನೇನು ಆಗುತ್ತಿತ್ತು. ಆ ಭಾಷೆ ಆ ಕಥೆ ಅಯ್ಯೋಯೇ ಸಧ್ಯ ಆವೇಶ, ಆ ಮಾತುಗಳು ಎಲ್ಲಾ ರೆಕಾರ್ಡ್‌ಗಳನ್ನು ಕೇಳಿ ನೋಡಿ. ಪಾಪ ಖರ್ಗೆ ಸಾಹೇಬರ ಬಹಳ ಲೋ ಪ್ರೊಫೈಲ್ ಆಗಿ ಮಾತನಾಡಿದರು. ಮಾನ್ಯ ಮುಖ್ಯಮಂತ್ರಿಗಳೇ. ದಯವಿಟ್ಟು ನಮ್ಮ ನಾಯಕರು ಹೇಳಿದಹಾಗೆ ಸಿಬಿಐ ತನಿಖೆಗೆ ಆರ್ಡರ್ ಮಾಡಿ. ಎಲ್ಲಿ ಫೇಲಾಗಿದ್ದೇವೆ,

ಮುಂದಕ್ಕೆ ಏನು ಮಾಡಬೇಕು, ಯಾವ ವಿಚಾರದಲ್ಲಿ ಫೇಲ್ಲಾಗಿದ್ದೇವೆ. ಇದರಲ್ಲಿ ಯಾರ ತಪ್ಪು. ಇದೆಲ್ಲಾ ಆಚೆ ಬರಲಿ.

ಶ್ರೀ ಡಿ.ಕೆ. ಶಿವಕುಮಾರ್ : ನಿಮ್ಮ ತಪ್ಪೇ? ಪೇಪರ್ ನವರು ಬರೆದಿರುವುದು ತಪ್ಪೇ? ದಯವಿಟ್ಟು ಏನಾದರೊಂದು ಈಚೆಗೆ ಬರಲಿ. ತಾವು ಇದರ ಬಗ್ಗೆ ಒಂದು ಪುಸ್ತಕವನ್ನು ತರಬೇಕು.

ಶ್ರೀ ಎ. ಕೃಷ್ಣಪ್ಪ (ವರ್ತೂರು) : ಆ ಗೇಟಿನೊಳಗಡೆ ಹೋಗುವುದಕ್ಕೆ ಮತ್ತು ಬರುವುದಕ್ಕೆ ಬಹಳ ತಾಪತ್ರಯ ಇತ್ತು. ಆ ಇಡೀ ದಿನ ಇವರ ಅಧಿಕಾರಿಗಳಿಗೆ ಜ್ಞಾನ ಬರಲಿಲ್ಲವೇ? ಇನ್ನು ನಾಲ್ಕು ಕಡೆ ಕೌಪೌಂಡ್ ಓಪನ್ ಮಾಡಬೇಕೆಂದು ಗೊತ್ತಾಗಲಿಲ್ಲವೇ? ಅದನ್ನು ಮಾಡಿದ್ದರೆ ಹೇಗೆ ನೂಕು ನುಗ್ಗಲು ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ ಹೇಳಿದರು.ಆ ಗೇಟ್ ಸಣ್ಣದಾಗಿತ್ತು. ಹೋಗಿ ಬರುವುದಕ್ಕೆ ಸುಧಾರಣೆ ಮಾಡುವುದಕ್ಕೆ ಬಹಳ ಕಷ್ಟವಾಗುತ್ತಿತ್ತು. ಇದರ ಬಗ್ಗೆ ತನಿಖೆ ಯಾಗಬೇಕಾಗಿದೆ ಎನ್ನುವುದು ಬಹಳ ಮುಖ್ಯವಾದ ವಿಚಾರವಾಗಿದೆ. This will become guidance for future administration ಯಾರ್‍ಯಾರಯ ಹೇಗೇಗೆ ತಪ್ಪುಗಳನ್ನು ಮಾಡಬಹುದು ಎಂದು ಹೇಳಿ ಒಂದು ಮಾರ್ಗದರ್ಶನ ಮಾಡುವುದಕ್ಕಾಗುತ್ತದೆ, ಆದ್ದರಿಂದ ಅದರ ಬಗ್ಗೆ ತನಿಖೆಯನ್ನು ಮಾಡಬೇಕಾಗುತ್ತದೆ ಹೇಳುತ್ತಾ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಎನ್.ಎಲ್. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ವಿಚಾರವನ್ನು ಹೇಳುತ್ತೇನೆ. ಡಾ: ರಾಜ್‌ಕುಮಾರ್‌ರವರ ಸಮಾಧಿ ಬಳಿ ಈಗಾಗಲೇ ಧರಣಿ ಕುಳಿತು ಕೊಳ್ಳುತ್ತೇ ವೆಂದು ಕುಳಿತುಕೊಂಡಿದ್ದಾರೆ. ಇಷ್ಟು ದಿವಸಗಳಾದರೂ ಸಮಾಧಿ ಕೆಲಸವನ್ನು ತೆಗೆದುಕೊಂಡಿರುವುದಿಲ್ಲ. ನಾನು ಮೊನ್ನೆ ಕೇಳಿದಾಗ ಇನ್ನು ಲ್ಯಾಂಡ್ ಟೇಕ್ ಒವರ್ ಆಗಿಲ್ಲ ಎಂದು ಗೊತ್ತಾಯಿತು. ಅದು ಕಾರ್ಪೊರೇಷನ್ ಆದ್ದರಿಂದ ದಯವಿಟ್ಟು ಸರ್ಕಾರ ಕೂಡಲೇ ಅದನ್ನು ಬೇಗನೆ ತೆಗೆದುಕೊಂಡು ಸಮಾಧಿ ನಿರ್ಮಾಣ, ಅಲ್ಲೊಂದು ಸ್ಮಾರಕ ನಿರ್ಮಾಣ ಮಾಡಬೇಕು ಅವರ ಕುಟುಂಬದವರು ಕಟ್ಟುತ್ತಿದ್ದಾರೆಯೇ ಹೊರತು ನಾವು ಸರ್ಕಾರದವರು ಮಾಡದೆ ಹೋದರೆ ಬಹುಶಃ 224 ಜನ ಸದಸ್ಯರುಗಳು ತಲೆ ತಗ್ಗಿಸಬೇಕಾಗುತ್ತದೆ. ಸರ್ಕಾರವೂ ಕೂಡ ತಲೆತಗ್ಗಿಸಬೇಕಾಗುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ದಯವಿಟ್ಟು ಅದರ ಬಗ್ಗೆ ಘೋಷಣೆಯನ್ನು ಮಾಡಿ, ಆಸ್ಪತ್ರೆಯಲ್ಲಿ ರುವವರು, ಸತ್ತಿರುವವರಿಗೆ, ಪರಿಹಾರವು ಹೋಗಬೇಕು.

ಇದರ ಬಗ್ಗೆ ಸಮಗ್ರವಾದಂತಹ ತನಿಖೆಯಾಗಬೇಕು. ಆ ತನಿಖೆಯು ಮುಂದಿನ ದಿನಗಳಲ್ಲಿ ದಿಕ್ಸೂಚಿ ಯಾಗಬೇಕು. ಇದರ ಬಗ್ಗೆ ಮಾರ್ಗದರ್ಶನವಾಗಬೇಕು. ಎಂದು ಹೇಳುತ್ತಾ ಆಗ್ರಹಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ನಾನು ಸಂತಾಪ ಸೂಚಕ ಸಭೆಯಲ್ಲಿ ಮಾತನಾಡುವಾಗ, ಮಾನ್ಯ ಉಪಮುಖ್ಯಮಂತ್ರಿಗಳು, ಪಿತೂರಿ ನಡೆದಿದೆ ಎನ್ನುವಂತಹ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ನಮ್ಮಲ್ಲಿ ವರದಿ ಇದೆ ಎನ್ನುವಂತಹ ಮಾತನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಈಗ ಮೌನವಾಗಿ ಕುಳಿತಿರುವಂತಹ ವಿಚಾರವನ್ನು ನೋಡಿದಾಗ ನಮಗೆ ಬಹಳ ಅನುಮಾನಗಳು ತೀವ್ರವಾಗಿ ಆಗುತ್ತದೆ. ಅದನ್ನು ಹೇಳಬಾರದು ಎಂದು ನಾನು ಮತ್ತು ಮಾನ್ಯ ಸದಸ್ಯರಾದ ಶ್ರಿ ಮಾಧುಸ್ವಾಮಿಯವರು ಬೇಡ ಹೋಗಲಿ ಎಮದು ಕುಳಿತಿದ್ದೆವು ಆದರೂ ಸಹ ಈ ವಿಷಯ ನಮ್ಮನ್ನು ಕಾಡಿಸುತ್ತಿತ್ತು. ದಯವಿಟ್ಟು ತಾವು ಪಿತೂರಿ ಯಾವುದು? ವರದಿ ಯಾವುದು? ಅದರ ಬಗ್ಗೆ ದಯವಿಟ್ಟು ಹೇಳಲೇಬೇಕು. ನಿನ್ನೆ ಇದರ ಬಗ್ಗೆ ತಾವು ಹೇಳಿದ್ದೀರಿ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಉಪಾಧ್ಯಕ್ಷರೆ,

ಶ್ರೀ ವಾಟಾಳ್‌ನಾಗರಾಜ್ : ಒಂದು ನಿಮಿಷ ಮಾನ್ಯ ಶಿವಕುಮಾರ್‌ರವರೆ,

ಶ್ರೀ ಡಿ.ಕೆ. ಶಿವಕುಮಾರ್ : ಡಿಸಿಎಂ ಕಾರಿಗೆ ಕಲ್ಲೇಟು ಬಿತ್ತು.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಶಿವಕುಮಾರ್‌ರವರೆ, ಒಂದು ನಿಮಿಷ ತಾಳಿ. ನಿನ್ನೆ ತಾವು ಮೌನವಾಗಿ ಕುಳಿತಿದ್ದೀರಿ. ಮುಖ್ಯಮಂತ್ರಿಗಳ ಉತ್ತರವಾಯಿತು. ನಿನ್ನೇನೆ ನೀವು ಬಹಳ ದಿವಸಗಳ ನಂತರ ವೀರಾವೇಶದಿಂದ ಮಾತನಾಡಿರುವುದು. ಉಪಮುಖ್ಯಮಂತ್ರಿಗಳಾದ ಮೇಲೆ ನಿನ್ನೆ ಸಂತಾಪ ಸೂಚಕ ಸಭೆ ನಡೆಯುವಾಗ ಬಹಳ ಉದ್ವೇಗದಿಂದ ಪಿತೂರಿ ನಡೆದಿದೆ, ವರದಿ ನಮ್ಮಲ್ಲಿ ಇದೆ. ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೀರಿ. ಆದರೆ ಇವತ್ತು ಮುಖ್ಯಮಂತ್ರಿಗಳಾದ ನಂತರ ಅದರ ಬಗ್ಗೆ ತಾವು ಹೇಳಬಹುದಾಗಿತ್ತು. ಆದರೆ ಮೌನವಾಗಿ ಕುಳಿತ್ತಿದ್ದೀರಿ. ಇದಕ್ಕೆ ಕಾರಣವೇನು? ಪಿತೂರಿ ಯಾವುದು? ಅದರ ವರದಿ ಏನಿದೆ? ದಯವಿಟ್ಟು ಇದರ ಬಗ್ಗೆ ಸ್ವಲ್ಪ ನಿಮ್ಮನ್ನು ಮಾತನಾಡಬೇಡಿ ಎಂದು ಯಾರಾದರೂ ಈ ವಿಚಾರದಲ್ಲಿ ಉತ್ತರವನ್ನು ಕೊಡಬೇಡಿ ಎಂದು ಹೇಳಿದ್ದಾರಾ ಅಥವಾ ಪಿತೂರಿಯ ಬಗ್ಗೆ ನಿನ್ನೆ ದಿವಸ ಹೇಳಿಬಿಟ್ಟಿದ್ದೀರಿ. ಏನೂ ಹೇಳುವುದಕ್ಕೆ ಹೋಗಬೇಡಿ ಎಂದು ಹೇಳಿದ್ದಾರಾ ಅಥವಾ ಮಾನ್ಯ ಮುಖ್ಯಮಂತ್ರಿಗಳು ಏನಾದರೂ ದಯವಿಟ್ಟು ನೀವು ಇರಿ, ನಾನು ಹೇಳಿಬಿಡುತ್ತೇನೇ. ನೀವೇನೂ ಮಾತನಾಡಬೇಡಿ ಎಂದು ಹೇಳಿದ್ದಾರಾ? ಇದರ

ಬಗ್ಗೆ ಏನಾದರೊಂದು ಹೇಳಬೇಕಲ್ಲವೇ? ನಿಮ್ಮ ಮೌನವನ್ನು ಮುರಿಯಲೇಬೇಕು ಈಗ ಇಲ್ಲವೇ ಸುಮ್ಮನೆ ಮೌನವಾಗಿ ಕುಳಿತಿದ್ದರೆ, ನಮಗೆ ಇದರ ಬಗ್ಗೆ ಅನುಮಾನ ಬರುತ್ತಿದೆ ಸದನಕ್ಕೆ ಅನುಮಾನ ಬರುತ್ತಿದೆ. ಸಂಸದೀಯ ಸಚಿವರ ಸಹಕಾರ ಅವರಿಗೆ ಬೇಕಾಗಿಲ್ಲ. ಅವರು ಭದ್ರವಾಗಿದ್ದಾರೆ. ಇಲ್ಲಿ 10 ರಿಂದ 12 ವರ್ಷ ವಿರೋಧಪಕ್ಷದ ನಾಯಕರಾಗಿದ್ದರು. ಈಗ ಅಲ್ಲೂ ಉಪಮುಖ್ಯಮಂತ್ರಿಗಳಾಗಿದ್ದಾರೆ. ಆದ್ದರಿಂದ ಅವರಿಗೆ ಯಾರ ಸಹಕಾರ ಬೇಕಾಗಿಲ್ಲ. ನಾನು ಅವರನ್ನೇ ಕೇಳುತ್ತಿದ್ದೇನೆ. ನಿಮ್ಮ ಮೌನವೇಕೆ? ಯಾವ ಕಾರಣಕ್ಕೋಸ್ಕರ ಮೌನ? ಇದರ ಉದ್ದೇಶವೇನು? ಈ ಮೌನದ ಹಿಂದೆ ಇರತಕ್ಕಂತಹ ಉದ್ದೇಶವೇನು? ಅಂದರೆ ಏನು ಮಾತನಾಡಬಾರದು ಎಂದೇ, ಈಗ ಮುಖ್ಯಮಂತ್ರಿಗಳು ಪಿತೂರಿ ನಡೆದಿಲ್ಲ, ಪಿತೂರಿ ಇಲ್ಲ. ಎಂದೂ ಯಾವುದೂ ಅವರು ಮಾತನಾಡಿಲ್ಲ. ನಾನು ಪಿತೂರಿ ಎಂದು ನಿನ್ನೆ ದಿನ ಹೇಳಿದ್ದೇನೆ. ಇದರ ಹಿಂದೆ ಇದರ ವರದಿ ಇದೆ ಎಂದು ಹೇಳಿದ್ದೇನೆ. ಇವೆರಡರ ಬಗ್ಗೆಯೂ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿಲ್ಲವಲ್ಲಾ ಎನ್ನುವ ನೋವು ಏನಾದರೂ ಇದೆಯಾ? ಆ ತರಹದ್ದು ಇದ್ದರೆ ತಾವು ದಯವಿಟ್ಟು ಹೇಳಬೇಕು. ನಾನು ಇದೊಂದನ್ನೇ ನೇರವಾಗಿ ಕೇಳುತ್ತಿದ್ದೇನೆ. ಬೇರೆ ಏನು ಕೇಳುವುದಿಲ್ಲ. ನಿನ್ನೇ ದಿನ ತಾವು ಏನು ಹೇಳಿದ್ದೀರಿ, ಅದನ್ನೇ ನಾನು ಕೇಳುತ್ತಿದ್ದೇನೆ. ಇನ್ನೇನು ಕೇಳುತ್ತಿಲ್ಲ.

+ **ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)** : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಪರಿಹಾರದ ಬಗ್ಗೆ ವಿಚಾರವನ್ನು ಹಿರಿಯರಾಗಿರುವಂತಹ ಮಲ್ಲಿಕಾರ್ಜುನ ಖರ್ಗೆಯವರು, ಈ ಸದನದ ಮುಂದಿಟ್ಟಿದ್ದಾರೆ. ಈಗಾಗಲೇ ಅದರ ಬಗ್ಗೆ ಕ್ರಮವನ್ನು ತೆಗೆದು ಕೊಂಡಿದ್ದೇನೆ.ಅವರಿಗೆ ಕೆಲವೇ ದಿನಗಳಲ್ಲಿ ಆ ಕುಟುಂಬಕ್ಕೆ ಪರಿಹಾರದ ಹಣ ಹೋಗುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಪೊಲೀಸ್ ಅಧಿಕಾರಿಗಳು ನಮ್ಮಲ್ಲಿ ಸಮರ್ಥರಾಗಿರು ವಂತಹ ಅಧಿಕಾರಿಗಳು ಇದ್ದಾರೆಂದು ನೀವು ಹೇಳಿದ್ದೀರಿ, ಈ ಒಂದು ಘಟನೆಯ ಸಂಪೂರ್ಣವಾದ ಮಾಹಿತಿಯನ್ನು ಪಡೆಯುವುದರಲ್ಲಿ ಈಗಾಗಲೇ ಅವರು ಗಮನವನ್ನು ಹರಿಸಿದ್ದಾರೆ. ಇವತ್ತು ಯಾರೇ ಈ ಒಂದು ಘಟನೆಯಲ್ಲಿ ಇರುವವರ ಬಗ್ಗೆ ಈಗಾಗಲೇ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವಂತಹ ಕೆಲಸವನ್ನು ನಾವು ಪ್ರಾರಂಭ ಮಾಡಿರುವುದರಿಂದ ಯಾವುದೇ ರೀತಿಯ ತನಿಖೆಯ ಅವಶ್ಯಕತೆ ಇಲ್ಲವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ಏನು ಅರ್ಥಕ್ಕೆ ಕನ್ ಸೀಡ್ ಮಾಡಿದ್ದೀರಿ. ಇನ್ನೊಂದಕ್ಕೆ ಯಾಕೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಎಲ್ಲಾ ಇಲ್ಲೇ ಇದ್ದೀರಿ.

(+ ಸನ್ಮಾನ್ಯ ಮುಖ್ಯ ಮಂತ್ರಿಯವರಿಂದ ಪರಿಷ್ಕರಣಗೊಂಡಿದೆ.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾಂಪನ್ ಸೇಷನ್ ಕೊಡುವುದಕ್ಕೆ ಒಪ್ಪಿಕೊಂಡಿ ದ್ದೀರಿ, ಥ್ಯಾಂಕ್ಸ್. ಏಕೆಂದರೆ, ಇಡೀ ರಾಜ್ಯದಲ್ಲಿ ಅದನ್ನು ಒಂದು ತಪ್ಪು ಮಾಹಿತಿ ಹೋಗುತ್ತದೆ. ಅದರ ಬಗ್ಗೆ ನೀವು ಎನ್‌ಕ್ವಯರಿ ಮಾಡಿಸುತ್ತೇನೆಂದರೆ, ಇದರಿಂದ ಸತ್ಯಾಂಶವು ಹೊರಗೆ ಬರುತ್ತದೆ. ಅದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದರೆ.........

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅದರ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿ ರುವುದರಿಂದ ಈಗ ತನಿಖೆಯ ಅವಶ್ಯಕತೆ ಇಲ್ಲ.

(+ ಸನ್ಮಾನ್ಯ ಮುಖ್ಯ ಮಂತ್ರಿಯವರಿಂದ ಪರಿಷ್ಕರಣಗೊಂಡಿದೆ.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮಗೆ ಅದೇ ರಿಪೋರ್ಟ್‌ನ್ನು ಸರಿಯಾದ ರೀತಿಯಲ್ಲಿ ಪ್ರಿಂಟ್ ಹಾಕಿ ಕೊಡುತ್ತಾರೆ. ನೀವು ಅದನ್ನೇ ನಮಗೆ ಒಪ್ಪಿಸುವುದು. ನೀವು ತನಿಕೆ ಮಾಡಿಸುವುದಿಲ್ಲವೆಂದರೆ ನಾವು ಅನಿವಾರ್ಯವಾಗಿ ವಾಕ್‌ಔಟ್‌ನ್ನು ಮಾಡಬೇಕಾಗುತ್ತದೆ.

(ಈ ಹಂತದಲ್ಲಿ ಕಾಂಗ್ರೇಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

6. ಪ್ರಕಟಣೆ

ಉಪಾಧ್ಯಕ್ಷರು : ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವಂತಹ ಸಂದೇಶದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನಪರಿಷತ್ತು 2006ನೇ ಸಾಲಿನ ಕರ್ನಾಟಕ ವಿಧಾನಮಂಡಲ (ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕವನ್ನು ಈ ದಿನ ದಿನಾಂಕ :6ನೇ ಜೂನ್ 2006 ರಂದು ಯಾವುದೇ ತಿದ್ದುಪಡಿಗಳು ಇಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ. ಹಾಗೆಯೇ ಈಗ ಸದನವನ್ನು 19ನೇ ಜೂನ್ 2006ರ ಸೋಮವಾರದಂದು ಬೆಳಿಗ್ಗೆ 10–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 9 ಗಂಟೆ 41 ನಿಮಿಷಕ್ಕೆ ಮುಂದೂಡಲ್ಪಟ್ಟು ದಿನಾಂಕ:19ನೇ ಜೂನ್ 2006ರ ಸೋಮವಾರ 10–00 ಗಂಟೆಗೆ ಸೇರುವಂತೆ ನಿಶ್ಚಯಿಸಿತು.)

ಅನುಬಂಧ –1

ಹನ್ನೆರಡನೇ ವಿಧಾನ ಸಭೆ